Azim Premji Foundation



# ಬಯಲು

## 124th Edition

# *Editorial*

***Dear All,***

***We are happy to release the 124th issue of e magazine Bayalu by field institutes of Karnataka. January month is the first the month of the new year where in we all start our new year in both professional and personal life with new thoughts and plans. We had taken some themes for this month as mentioned in the Bayalu invitation sent earlier for this issue which were about constitutional values and our work, Republic Day, ECE Work, Youth Day, Sankranti, New Year resolutions etc. along with free space.***

***We received good number of entries for all the themes from various districts of the state. This issue has been published by Raichur DI members. We thank everyone who contributed their writings, artwork, and photos for this edition. This edition has come out as a result of everybody 's work. We thank Muzamil Mahaldar for designing the cover page beautifully for this edition.***

***We thank peri for his guidance and valuable suggestions in bringing out this edition for you.We hope that you read these writings and give us your valuable constructive feedback so that upcoming issues can be made more meaningful and useful for everyone.***

***We look forward your opinions and feedback about this edition.Please write to Bayalu mail id .***

***With best wishes of New Year to every one of you,***

***Bayalu Team***

***Karnataka***

## E Magazine By the Field institute of Karnataka

## Contents …….


| | |
|---|---|
| ಹೊಸ ವರ್ಷದ ಹೊಸ ನಿರ್ಣಯಗಳು!– | ಉಮಾಶಂಕರ ಪೆರಿಯೋಡಿ |
| ಭಯಮುಕ್ತ ವಾತಾವರಣ | |
| ಮಗುವಿನ ಕಲಿಕೆಯ ಅನಾವರಣ. | ಭೀಮಸೇನರಾವ್. ಕುಲಕರ್ಣಿ |
| Constitutional Values (Urdu Article) | Azeem Fareedi |
| ELM Related Experience | Ramesh Kulkarni |
| Linguistically Marginalized | |
| Children in The Govt School. | Srinivas Kulkarni |
| ಶೈಕ್ಷಣಿಕ ಅಧಿಕಾರಿಗಳ ನಡೆ ಶಾಲೆ ಕಡೆ | ಅನ್ವರ ಎಮ್ &'ತಂಡ |
| **ಉತ್ತಮವಾದ ಅಂಶಗಳನ್ನು ಹೇಳಿ ಆಗಿದೆ, ಆಚರಣೆ ಯಾವಾಗ?** | **Adiveppa** |
| ಅಂಗನವಾಡಿ ಕೇಂದ್ರಗಳು: ಒಂದು ಅವಲೋಕನ | ಡಾ. ಹಂದ್ರಾಳ ಗವಿಸಿದ್ದಪ್ಪ |
| ಲಿಂಗ ತಾರತಮ್ಯ ಹೀಗೊಂದು ಚರ್ಚೆ | **Md Rafi** |
| ಅಂದು ಇಂದಿಗೂ ಪ್ರಸ್ತುತ ಸಾವಿತ್ರಿಬಾಯಿ ಫುಲೆ | ಶ್ರೀಲತ ಕೆ ಎನ್ |
| ಮನೆಯಲ್ಲಿ ಸಮಾನತೆ | ಮೇಘಾ.ಪಿ.ಕೆ |
| **Republic Day ( Urdu Article )** | **Md Ismail** |
| ಧರ್ಮದ ನಡೆ ಸಮಾನತೆಯ ಸಮನ್ವಯದೆಡೆಗೆ | **Darshitha C L** |
| **Gender equality/inequality?** | **Shruti S P** |
| **Re'new'ing Resolutions** | **Mathumitha** |
| ಆ ಪ್ರಶ್ನೆಗಳಿಗೆ ನಮ್ಮ ಕೆಲಸವೇ ಉತ್ತರ...... | **C.Sannathaayanna** |
| ಭಾರತದ ಗಣರಾಜ್ಯೋತ್ಸವದ ಸಂಕ್ಷಿಪ್ತ ನಡೆದುಬಂದ ದಾರಿ | ಮೊಹಮ್ಮದ್ ಹುಸೇನ್ |
| ಯುವಶಕ್ತಿ | ಅಮೃತಾ ಹೆಗಡೆ ರಾಯಚೂರು |

| | |
|---|---|
| **On Makara Sankranti** | **Rajesh S Mahantmath** |
| **ನಂಬಿಕೆ ಬದಲಾವಣೆ ಎಂದರೇನು?** | **ಲಕ್ಷ್ಮಣ ಪಾಟೀಲ ನಡಿಹಾಳ** |
| **ಬದುಕು ಕಟ್ಟಿಕೋಳ್ಳುವುದೆಂದರೆ . .** | **Suresh G Raichur** |
| **ಸಂಭ್ರಮದ ಸಂಕ್ರಾಂತಿ** | **ದರ್ಶಿತ ಸಿ ಎಲ್** |
| **ಕಂಡೆ ನಾ ನಿನ್ನನು ನನ್ನ ನಡೆನುಡಿಯಲಿ** | **Renuka PB** |
| ***A BOY WHO ASKED 50 $*** | ***Mohammed Muzamil*** |
| IT IS NEVER TOO LATE | **Spoorthi Rao** |
| **Makara Sankranthi Festival** | **M Nalini** |
| **TIRANGA** | **Mohammed Ismail** |
| **मकर संक्रांति** | **भारती तिवारी** |
| **ನೋಡು ನೋಡು ಎಂತ ಚೆಂದ** | ಮಾಲತಿ |
| **ಪಿಕಿಲಿಹಾಳ: ಪ್ರಾಗೈತಿಹಾಸಿಕ ಚಿತ್ರಗಳು (ಕರ್ನಾಟಕದ ನವ ಶಿಲಾಯುಗದ ಸ್ಥಳ) –** | **ಡಾ.ಎಚ್. ಮಹದೇವಸ್ವಾಮಿ.** |
| *ಯುವಜನತೆಯ ಸ್ಫೂರ್ತಿ ಸ್ವಾಮಿ ವಿವೇಕಾನಂದರು* | **Ramanand** |
| **ಜಗ ಬೆಳಗುವ ಮಗು** | **ಸುಪ್ರಿತ ಸುಬ್ರಮಣ್ಯ** |
| MY INDIA | Sushma G N |
| **ಹೊಸ ಆಶಯದೊಂದಿಗೆ ನೂತನ ವರ್ಷದ ಶುಭ ಆರಂಭ,,,** | **Aishwarya** |
| **ಭವ್ಯ ಪರಂಪರೆಯ ಭಾರತ** | **ಭಾರತಿ ತಿವಾರಿ** |
| **ಅಮ್ಮನೇ ಮಗಳಾಗಿ ಬಂದಳು** | **ಶಂಕರಾನಂದ ಹೆಚ್.ಬಿ. ಹಿರೇಮರಳಿ** |
| **ನಗುವಿನ ಹಣತೆ** | **Veeresh D C ಬೀದರ್** |
| **ಸಂಭ್ರಮವನ್ನು ಹುಡುಕಲು ಹೊರಟಾಗ** | **ಬೆಟ್ಟಸ್ವಾಮಿಗೌಡ. ಬಿ.** |
| **ಮಕ್ಕಳ ಬಾಲ್ಯದಲ್ಲಿ ನಾವೇ ಮಾಡುವ ತೊಡಕುಗಳು** | **ಮಣಿಕಂಠ. ಆರ್. ಬಳ್ಳಾರಿ** |
| **ಭಾರತದ ಪ್ರಥಮ ಮಹಿಳಾ ಶಿಕ್ಷಕಿ ಸಾವಿತ್ರಿಬಾಯಿ ಪುಲೆ** | **ಕೃಷ್ಣಗೌಡ** |
| **ಹೊತ್ತು ಮೂಡುವ ಈ ಹೊತ್ತಿನಲಿ !!** | **ರಾಘವೇಂದ್ರ ಹೇರ್ಳೆ, ಬೆಂಗಳೂರು** |
| **ಮಳೆ ಬಂದಾಗ ಇಳೆಯಾಗಬೇಕು** | **ಶಿವಕುಮಾರ ಸಿ ಎಸ್,** |

# ಹೊಸ ವರ್ಷದ ಹೊಸ ನಿರ್ಣಯಗಳು!

**–ಉಮಾಶಂಕರ ಪರಿಯೋಡಿ**

ವರುಷ ಉರುಳಿ, ಮರು ವರುಷ ಮರಳಿದೆ. ಹಳೆಯ ವರುಷ ಹೋಗಿ ಹೊಸ ವರುಷ ಬರುವಾಗ ಹೊಸ ನಿರ್ಣಯಗಳನ್ನು ಕೈಗೊಳ್ಳುವುದು ವಾಡಿಕೆ. ಬಹಳಷ್ಟು ಜನ ಈ ತರಹದ ಹೊಸ ನಿರ್ಣಯಗಳನ್ನು ತೆಗೆದುಕೊಳ್ಳುತ್ತಾರೆ. ಅದರಲ್ಲಿ ಬಹುಪಾಲು ಜನ ಅದನ್ನು ಕೆಲವು ದಿವಸ ಪಾಲಿಸಿ ಮತ್ತೆ ಪುನಃ ಹಳೆಯ ಕ್ರಮಕ್ಕೆ ಹಿಂದಿರುಗಿ ಅವರ ಜೀವನ ಯತಾಸ್ಥಿತಿಗೆ ತಿರುಗುತ್ತದೆ. ಕೆಲವೇ ಕೆಲವರು ಹೊಸ ನಿರ್ಣಯಗಳಿಗೆ ಬದ್ಧರಾಗಿ ಜೀವನದ ದಿಕ್ಕನ್ನೇ ಬದಲಾಯಿಸಿಕೊಳ್ಳುತ್ತಾರೆ. ಒಂದು ಹೊಸ ಜೀವನ ಕ್ರಮಕ್ಕೆ ತಮ್ಮನ್ನು ತೆರೆದುಕೊಳ್ಳುತ್ತಾರೆ; ಹೊಸ ಜೀವನ ಪ್ರಾರಂಭಿಸುತ್ತಾರೆ. ನಾನು ಈ ತರಹ ಹೊಸ ವರುಷಕ್ಕೆ ಹೊಸ ನಿರ್ಣಯಗಳನ್ನು ತೆಗೆದುಕೊಂಡದ್ದು ಇಲ್ಲ. ನನಗೆ ಅದರಲ್ಲಿ ನಂಬಿಕೆಯೂ ಇರಲಿಲ್ಲ. ಇತ್ತೀಚೆಗೆ ಹಳೆಯ ವರುಷಗಳು ಹೀಗೆ ಉರುಳುತ್ತಿರುವಾಗ ನನ್ನ ಜೀವನಕ್ಕೆ ಹೊಸ ನೋಟಕ್ರಮಗಳು ದಕ್ಕುತ್ತಿವೆ. ಆ ಮೇರೆಗೆ, ಈ ಬಾರಿಯ ಹೊಸ ವರುಷವೂ ನನಗೆ ಮೂರು ವಿಷಯಗಳ ಬಗ್ಗೆ ಚಿಂತಿಸುವ ಹಾಗೆ ಮಾಡಿತು.

ಆ ಮೂರು ವಿಷಯಗಳು ಯಾವುವು?

ಮೊದಲನೆಯದು ***ಸರಳತೆ;*** ಬದುಕು ಇನ್ನೂ ಸರಳವಾಗಬೇಕೆನ್ನಿಸಿತು.

ಎರಡನೆಯದಾಗಿ ***ತ್ಯಾಜ್ಯ ಕಡಿಮೆ*** ಮಾಡಬೇಕಲ್ಲ ಎನಿಸಿತು; ಕಸ ಕಡಿಮೆ ಮಾಡಬೇಕು

ಮೂರನೆಯದಾಗಿ ಬಹುಶಃ ನಾವು ಮಾತನಾಡುವುದು ಹೆಚ್ಚಾಗುತ್ತದೆ; ***ಮಾತು ಕಡಿಮೆ*** ಮಾಡಬೇಕು ಅನ್ನಿಸಿತು.

**ಸರಳತೆ:** ಇವತ್ತಿನ ಜೀವನ ತುಂಬಾ ಸಂಕೀರ್ಣವಾಗಿದೆ. ಬದುಕುವುದು ಅಷ್ಟು ಸುಲಭವಿಲ್ಲ; ಎಲ್ಲವೂ ಸಂಕೀರ್ಣವಾಗಿದೆ. ಅದನ್ನು ಸರಳ ಮಾಡುವುದು ಹೇಗೆ? ಸರಳತೆ ನಮ್ಮ ಯೋಚನೆಯಿಂದ ಪ್ರಾರಂಭವಾಗಬೇಕು. ನಾವು ತುಂಬಾ ಯೋಚನೆ ಮಾಡುತ್ತೇವೆ. ಯೋಜನೆ ಹಾಕುತ್ತಾ ಇರುತ್ತೇವೆ. ಈ ಯೋಚನೆ ಕಡಿಮೆ ಮಾಡುವುದು ತುಂಬಾ ಮುಖ್ಯ. ಯೋಚನೆಗಳು ಬಾರದ ಹಾಗೆ ನೋಡಬಹುದೆ? ಯೋಚನೆಗಳು ಒಂದರ ಮೇಲೊಂದು ಬರುತ್ತಾ ಇರುತ್ತವೆ. ಅವನ್ನು ತಡೆಗಟ್ಟಲು ನಮ್ಮಿಂದ ಸಾಧ್ಯವೇ? ಅದರಲ್ಲೂ, "ನಮಗೆ ಅದು ಬೇಕು, ಇದು ಬೇಕು, ಅದು ಇರುತ್ತಿದ್ದರೆ ಒಳ್ಳೆಯದು, ಇದು ಇರುತ್ತಿದ್ದರೆ ಜೀವನ ಹಸನಾಗಬಹುದು..." ಇಂತಹ ಯೋಚನೆಗಳೇ ಹೆಚ್ಚು. ಇಂತಹ ಯೋಚನೆಗಳನ್ನು ಕಡಿಮೆ ಮಾಡಬಹುದೆ? ಮೊಟ್ಟ ಮೊದಲಿಗೆ ಇಂತಹ ಯೋಚನೆಗಳ ಹಿಂದಿನ ಲಾಲಸೆಯನ್ನು ಹತ್ತಿಕ್ಕಲು ನಾವು ಯತ್ನಿಸಬೇಕು. ಅಂತಹ ಯೋಚನೆಗಳು ಚಿಗುರೊಡೆಯುತ್ತಿರುವಾಗಲೇ, ಅವುಗಳಿಂದ ದೂರ ನಿಂತು ನೋಡಿದರೆ ಅವುಗಳ ಟೊಳ್ಳುತನ ನಮಗೆ ಅರ್ಥವಾಗುತ್ತದೆ. ಇದೂ ಎಲ್ಲರೂ ಮಾಡಲು ಸಾಧ್ಯವಾಗಬಹುದಾದ ಸರಳ ಉಪಾಯ. ಇದನ್ನು ಮಾಡಿದರೆ ಕ್ರಮೇಣ ನಮ್ಮಲ್ಲಿ ಹುಟ್ಟಿದ ಆಲೋಚನೆಗಳ ಬಗ್ಗೆ ನಮಗೇ ನಗು ಬರುತ್ತದೆ.

ನಮ್ಮ ಊಟ ಸರಳವಾಗಬೇಕು. ಆರೋಗ್ಯಕರ ಊಟವನ್ನು ಸರಳವಾಗಿ ನಾವು ಮಾಡಬಹುದು. ತರಕಾರಿಯತ್ತ ಊಟ, ಆಗೊಮ್ಮೆ ಈಗೊಮ್ಮೆ ಮಾಂಸಾಹಾರ, ಜೊತೆಗೆ ಮೊಟ್ಟೆ– ಇಷ್ಟಿದ್ದರೆ ಸಾಕು; ನಮ್ಮ ಆರೋಗ್ಯವನ್ನು ಚೆನ್ನಾಗಿ ಕಾಪಾಡಿಕೊಳ್ಳಬಹುದು. ಇದರೊಂದಿಗೆ ಸರಳವಾದ ತಿಂಡಿ–ತಿನಿಸುಗಳನ್ನು ಮಾಡುತ್ತಾ ಇರಲೂ ನಮಗೆ ಸಾಧ್ಯವಿದೆ. ದೊಡ್ಡ ಹೋಟೇಲಿಗೆ ಹೋಗುವುದು ಪ್ಯಾಕ್ಡ್ ಫುಡ್, ಜಂಕ್ ಫುಡ್ ತಿನ್ನುವುದನ್ನು ಖಂಡಿತಾ ನಿಲ್ಲಿಸಬೇಕು. ಸಾಧ್ಯವಾದಷ್ಟು ಅನ್ನ–ಸಾರನ್ನು ನಾವೇ ತಯಾರಿಸಿಕೊಂಡು

ಸೇವಿಸಿಬೇಕು (ಒಂದು ವೇಳೆ ಪ್ರತಿ ದಿನ ಹೋಟೆಲ್ಲಿನಲ್ಲಿ ಊಟ ಮಾಡುತ್ತಿದ್ದರೆ) ಇದರೊಂದಿಗೆ ಆಗಾಗ ಹಣ್ಣು-ಹಂಪಲು ತಿನ್ನಬೇಕು. ಇಷ್ಟಿದ್ದರೆ ನಮ್ಮ ಆರೋಗ್ಯವನ್ನು ನಾವು ಖಂಡಿತಾ ಕಾಪಾಡಿಕೊಳ್ಳಬಹುದು.

ನೀರನ್ನು ಬಾಟಲಿಯಲ್ಲಿ ಕುಡಿಯುವುದನ್ನು ನಿಲ್ಲಬೇಕು; ಎಲ್ಲಿ ಕುಡಿಯಲು ಯೋಗ್ಯವಾದ ನೀರು ಸಿಗುತ್ತದೋ ಅಲ್ಲಿ ನೀರು ಕುಡಿಯಬೇಕು. ಇದನ್ನು ಒಗ್ಗಿಸಿಕೊಂಡರೆ ಕ್ರಮೇಣ ರೂಢಿಯಾಗುತ್ತದೆ. ಇದರಿಂದ ಖಾಯಿಲೆ ಬೀಳುವುದೂ ತಪ್ಪುತ್ತದೆ. ಇಂತಹ ಅಭ್ಯಾಸವು ನಮ್ಮ ದೇಹದ ರೋಗ ನಿರೋಧಕ ಶಕ್ತಿಯನ್ನು ಹೆಚ್ಚಿಸುತ್ತದೆ. ಸರಳವಾದ ಬಟ್ಟೆಗಳನ್ನು ಧರಿಸಬೇಕು. 6-7 ಜೊತೆ ಬಟ್ಟೆ ಇದ್ದರೆ ಬೇಕಾದಷ್ಟಾಯಿತು. ಅದಕ್ಕಿಂತ ಹೆಚ್ಚು ಯಾಕೆ? ಅಗತ್ಯಕ್ಕಿಂತ ಹೆಚ್ಚಾಗಿರುವ ಬಟ್ಟೆಗಳನ್ನು, ಅಗತ್ಯ ಇರುವ ಬಡವರಿಗೆ ಕೊಡಬೇಕು. ಅವರೂ ಖುಷಿಯಿಂದ ಬಟ್ಟೆ ಧರಿಸಲಿ; "ಉಳ್ಳವರ ಬಟ್ಟೆ ಇಲ್ಲದವರ ಮಾನವಾಗವಾಹುದು." ಅಂದ ಹಾಗೆ ನನ್ನ ಪ್ರಕಾರ ಬಟ್ಟೆಗೆ ಇಸ್ತ್ರಿ ಹಾಕುವುದನ್ನೂ ಬಿಡಬೇಕು. ನಮ್ಮ ಬಟ್ಟೆಯನ್ನು ನಾವೇ ತೊಳೆದುಕೊಳ್ಳಬೇಕು. 'ನಮ್ಮ ಬಳಿ ಅತ್ಯಂತ ಸರಳವಾದ ಉಡುಗೆ ಇರಲಿ; ಅತಿಯಾಗಿ, ಮಿಕ್ಕಿದ್ದು ಇಲ್ಲದವರಿಗೆ ಮೀಸಲಿರಲಿ' ಎಂಬುದು ನನ್ನ ಕಿವಿ ಮಾತು.

ಮನೆ ಸರಳವಾಗಿರಬೇಕು. ಈಗೀಗ ಸಾಮಾನ್ಯವಾಗಿ ನಮ್ಮ ಕುಟುಂಬದಲ್ಲಿ ತಂದೆ-ತಾಯಿ (ನಾವು), ನಮ್ಮ ಮಕ್ಕಳು, ಅಜ್ಜಿ-ತಾತ ಇರುತ್ತಾರೆ. ಇರುವ ಇಷ್ಟು ಜನಕ್ಕೆ ಅತ್ಯಂತ ದೊಡ್ಡ ಮನೆ ಯಾಕೆ ಬೇಕು ಹೇಳಿ? ನಾವು, ನಮ್ಮವರು ಬದಕುಲು ಒಂದು ಚಿಕ್ಕ, ಚೊಕ್ಕ, ಮನವರಿತು ಬದುಕುವ ಒಲವಿನ ಮನೆಯಿದ್ದರೆ ಸಾಕಲ್ಲವೆ? ಇಷ್ಟಾಗಿಯೂ ಭೋಗವೂ ಆಗದೆ, ಅದರ ತೋರ್ಪಡಿಕೆಯೂ ಆಗದೆ, ಅಗತ್ಯಕ್ಕೆ ಬೇಕಾದಷ್ಟೇ ಸಾಮಗ್ರಿಗಳು ಮನೆಯಲ್ಲಿದ್ದರೆ ಬಲು ಚೆಂದ. ನಾಳೆಗೆ ಆಗುತ್ತವೆ, ಮಕ್ಕಳಿಗೆ ಆಗುತ್ತವೆ, ಮೊಮ್ಮಕ್ಕಿಗೆ ಬೇಕಾದೀತು ಎಂದು ಸಾಮಗ್ರಿಗಳನ್ನು ಅನಗತ್ಯವಾಗಿ ಶೇಖರಿಸುವುದೂ ಬೇಡ. ಮುಖ್ಯವಾಗಿ ಮನೆಗಳಿಗೆ ಎ.ಸಿ. ಬೇಡ. ನಾವೆಲ್ಲ ಅದಿಲ್ಲದಿದ್ದ ಕಾಲದಲ್ಲಿಯೂ ಚೆನ್ನಾಗಿ ಬದುಕಿದ್ದೇವೆ ಎಂಬುದನ್ನು ಮರೆಯಬಾರದು. ಮನೆ ಚೆನ್ನಾಗಿ ಕಾಣುವುದು ಎಂದರೆ ಅದರಲ್ಲಿ ಏನೇನೋ ಸರಕು-ಸಾಮಗ್ರಿಗಳು ಇರುವುದರಿಂದ ಅಲ್ಲ. ಬದಲಿಗೆ ಅಲ್ಲಿರುವ ಮನುಷ್ಯರ ನಡುವೆ ಪರಸ್ಪರ ಪ್ರೀತಿ, ಸಹಕಾರ, ಕಾಳಜಿಗಳು ಇರುವುದರಿಂದ.

ನಾವು ಶಾಪಿಂಗ್ ಅನ್ನು ನಿಲ್ಲಿಸಬೇಕು. ಶಾಪಿಂಗ್‌ಗೆ ಎಂದೂ ಹೋಗಲೇಬಾರದು. ಶಾಪಿಂಗ್‌ನಲ್ಲಿ ನಾವು ನಮಗೆ ಬೇಕಿದ್ದರೂ, ಬೇಡವಾದರೂ ವಸ್ತುಗಳನ್ನು ಖರೀದಿ ಮಾಡುತ್ತೇವೆ. ಅದೊಂದು ತರಹದ ಗುಂಗು. ಅಗತ್ಯವಿರುವ ಸಾಮಗ್ರಿಗಳನ್ನು ಮಾತ್ರ ನಾವು ಖರೀದಿಸಬೇಕು. ಒಂದು ವಸ್ತುವನ್ನು ಖರೀದಿಸಿದ ದಿನದಿಂದಲೇ ಅದರ ಬಳಕೆಯನ್ನು ಶುರು ಮಾಡಬೇಕು; ತಂದು ಸುಮ್ಮನೇ ಇಟ್ಟುಕೊಳ್ಳಬಾರದು. ಹೀಗೆ ನಮ್ಮ ಬದುಕು ಸರಳವಾಗಲು ಸಾಕಷ್ಟು ಸರಳ ವಿಚಾರಗಳಿವೆ. ಅಂಥವುಗಳ ಬಗ್ಗೆ ಯೋಚಿಸಿ ನಮ್ಮದೇ ನಿರ್ಣಗಳನ್ನು ತೆಗೆದುಕೊಂಡರೆ, ನಮ್ಮ ಬದುಕು ಒಂದೆಡೆಯಿಂದ ಸರಳವಾಗುತ್ತಾ; ಮತ್ತೊಂದೆಡಯಿಂದ ಸಮೃದ್ಧವಾಗುತ್ತಾ ಹೋಗುತ್ತದೆ.

<u>**ಕಡಿಮೆ ತ್ಯಾಜ್ಯ; ಕಡಿಮೆ ಕಸ:**</u> ಇವತ್ತು ನಮ್ಮ ಸುತ್ತ-ಮುತ್ತ ನೋಡಿದರೆ, ಎಲ್ಲ ಕಡೆಯೂ ಕಸ-ಕಸ. ನಾವು ಬಿಸಾಡಿದ ಕಸ; ಅದರಲ್ಲಿ ಅರ್ಧಕ್ಕಿಂತಲೂ ಹೆಚ್ಚಿನ ಕಸ ಮಣ್ಣಿಗೆ ಸೇರದ ಕಸ. ಈ ಕಸ ನಮ್ಮ ಜೀವನವನ್ನೇ ಹಾಳು ಮಾಡಿಬಿಟ್ಟಿದೆ. ಉಸಿರಾಡಲು ಕಷ್ಟವಾಗಿದೆ. ಆರೋಗ್ಯದ ಮೇಲೆ ತುಂಬಾ ಪರಿಣಾಮ ಬೀರಿದೆ. ಪೇಟೆಯಲ್ಲಿ ಕಸ, ಹಳ್ಳಿಯಲ್ಲಿ ಕಸ, ಸಮುದ್ರದಲ್ಲಿ ಕಸ, ಎಲ್ಲಿ ನೋಡಿದರೂ ಕಸ, ಎಲ್ಲಿ ಜನರಿರುತ್ತಾರೋ ಅಲ್ಲೆಲ್ಲ ಕಸ ಇದ್ದೇ ಇದೆ. ವಿಪರೀತವಾಗಿ ಇರುತ್ತದೆ. ಹೀಗೆ ಹೆಚ್ಚಾಗಿರುವ ಕಸವನ್ನು ನಿರ್ವಹಿಸುವುದೇ ಈಗ ಕಷ್ಟವಾಗಿ ಆರೋಗ್ಯದ ಮೇಲೂ ಪರಿಣಾಮಗಳುಂಟಾಗುತ್ತಿವೆ. ಮೊದಲನೆಯದಾಗಿ ನಾವು ಅಗತ್ಯಕ್ಕಿಂತ ಹೆಚ್ಚಾಗಿ ಖರೀದಿಸುವ ವಸ್ತುಗಳೇ ಕಸದ ಮೂಲ. ಆದ್ದರಿಂದ ಅಗತ್ಯ ವಸ್ತುಗಳನ್ನು ಅಗತ್ಯವಿದ್ದ ಪ್ರಮಣದಲ್ಲಿ ಮಾತ್ರ ಕೊಳ್ಳಬೇಕು. ಪ್ಲಾಸ್ಟಿಕ್ ಅಂತೂ ಉಪಯೋಗಿಸಲೇಬಾರದು. ಒಂದು ವೇಳೆ ನಾವು ಪ್ಲಾಸ್ಟಿಕ್ ಬಳಸುತ್ತಿದ್ದರೆ, ಅವನ್ನು ಒಮ್ಮೆಗೆ ಮಾತ್ರ ಬಳಸದೆ, ಮರು ಬಳಕೆಗೆ ಒತ್ತು ನೀಡಬೇಕು. ಒಂದು ಪ್ಲಾಸ್ಟಿಕ್

ಅನ್ನು ಸಾಧ್ಯವಾದಷ್ಟು ಬಾರಿ ಮರು ಬಳಕೆ ಮಾಡಿ ಆನಂತರ ಅದನ್ನು ರೀಸೈಕಲ್ ಮಾಡಲು ನೀಡಬೇಕು. ಹೀಗೆ ಪ್ಲಾಸ್ಟಿಕ್ ಅನ್ನು ರೆಫ್ಯೂಸ್, ರೀ–ಯ್ಯೂಸ್, ರೀ–ಸೈಕ್ಲಿಂಗ್ ಮಾಡಬೇಕು. ಕಸವನ್ನು ನಾವು ವಿಂಗಡಣೆ ಮಾಡಬೇಕು. ಹಸಿ ಕಸವನ್ನು ಗೊಬ್ಬರ ಮಾಡಬೇಕು. ಒಣ ಕಸವನ್ನು ರೀ–ಯ್ಯೂಸ್, ರೀ–ಸೈಕ್ಲಿಂಗ್ ಮಾಡಿ ಬಳಕೆ ಮಾಡಬೇಕು. ಅಗತ್ಯಕ್ಕಿಂತ ಹೆಚ್ಚು ಏನನ್ನೂ ಮನೆಗೆ ತರಬಾರದು. ಯ್ಯೂಸ್ ಅಂಡ್ ಥ್ರೋ ವಸ್ತುಗಳನ್ನು ಬಳಕೆ ಮಾಡಲೇ ಬಾರದು. ನಾವು ಎಷ್ಟು ಕಸವನ್ನು ಕಡಿಮೆ ಮಾಡುತ್ತೇವೆಯೋ, ಅಷ್ಟು ಆರೋಗ್ಯಕರವಾಗಿ ನಮಗೆ ಈ ಭೂಮಿಯನ್ನು ಇಡಲು ಸಾಧ್ಯವಾಗುತ್ತದೆ.

ನಮ್ಮ ಸಮಾಜದ ಇನ್ನೊಂದು ಭಾರಿ ದೊಡ್ಡ ದುರಂತವೆಂದರೆ ವೇಸ್ಟ್ (ಅಪವ್ಯಯ) ಮಾಡುವುದು. ನಾವು ಅದೆಷ್ಟೋ ವಸ್ತುಗಳನ್ನು ಅರ್ಥಂಬರ್ಥ ಉಪಯೋಗಿಸಿ ಬಿಸಾಡುತ್ತೇವೆ. ಇಂತಹ ಅಪವ್ಯಯದ ಪ್ರಮಾಣವನ್ನು ನಾವು ತಗ್ಗಿಸಬೇಕು. ಅಪವ್ಯಯ ಮಾಡದೆಯೂ ವಸ್ತುಗಳನ್ನು ಬಳಸಬಹುದು ಎಂಬುದನ್ನು ನಾವು ನಮ್ಮ ಸ್ವಂತ ಪ್ರಯತ್ನದಿಂದಲೇ ಸಾಧಿಸಿ ತೋರಿಸಬೇಕು.

**ಮಾತು ಕಡಿಮೆ:** ನನಗೆ ಇತ್ತೀಚೆಗೆ ನಾವು ತುಂಬಾ ಮಾತನಾಡುತ್ತೇವೆ ಎಂದು ಅನ್ನಿಸುತ್ತಿದೆ. ಬೇಕಿದ್ದರೂ ಮಾತನಾಡುತ್ತೇವೆ, ಬೇಡವಿದ್ದರೂ ಮಾತನಾಡುತ್ತೇವೆ. ಅಗತ್ಯವಿದ್ದಲ್ಲಿ ಮಾತನಾಡುತ್ತೇವೆ, ಅಗತ್ಯವಿಲ್ಲದಲ್ಲಿಯೂ ಮಾತನಾಡುತ್ತೇವೆ. ಪ್ರಪಂಚದಲ್ಲಿ ಆದ ಹಿಂಸೆಗೆ, ಆಗುವ ಎಲ್ಲ ಹಿಂಸೆಗಳಿಗೂ ಕಾರಣವೇ ಮಾತು! ನಾವು ಮಾತು ಕಡಿಮೆ ಮಾಡಬಹುದೆ? ಹೆಚ್ಚು ಮೌನವಾಗಿ ಇರುವುದಕ್ಕೆ ಪ್ರಯತ್ನಿಸಬಹುದೆ? ಮಾತನಾಡಲು ಮನಸ್ಸಾದಾಗ, ಈ ಮಾತನ್ನು ನಾನು ಇಲ್ಲಿ ಮಾತನಾಡಲೇಬೇಕೆ? ಒಂದು ವೇಳೆ ನಾನು ಈಗ ಮಾತನಾಡದಿದ್ದರೆ ಏನು ನಷ್ಟವಾಗಬಹುದು? ಎಂಬ ಪ್ರಶ್ನೆಯನ್ನು ನಾವು ಸದಾ ಕೇಳಿಕೊಳ್ಳುತ್ತಿದ್ದರೆ, ಸಹಾಯವಾಗಬಹುದಲ್ಲವೆ? ನಾವು ಬೇರೆಯವರ ಮಾತು ಕೇಳಲು ಪ್ರಯತ್ನಿಸಬಹುದಲ್ಲವೆ? ನಾವೆಲ್ಲರೂ ಮಾತು ಕಡಿಮೆ ಮಾಡಿದರೆ, ವಾತಾವರಣ ಎಷ್ಟು ಒಳ್ಳೆಯದಾಗಬಹುದು? ಎಂಬ ಲೆಕ್ಕಾಚಾರದ ಸುತ್ತ ನಮ್ಮೊಳಗಿನ ಅಲೋಚನೆಗಳು ಮಾತನಾಗಬೇಕು ಅಥವಾ ಮೌನವಾಗಬೇಕು. ಮಾತು ಕಡಿಮೆ ಮಾಡಿದಾಗ ಮನಸ್ಸು ಜಾಗೃತವಾಗುತ್ತದೆ ಎಂದು ಹೇಳುತ್ತಾರೆ. ಅದು ನಿಜ; ಅಷ್ಟೇ ಅಲ್ಲ, ಅದು ನಮ್ಮ ಸ್ವಭಾವದ ಮೇಲೆಯೂ ಪ್ರಭಾವ ಬೀರುತ್ತದೆ. ಮನಸ್ಸು ಶಾಂತವಾಗುತ್ತದೆ. ಒಟ್ಟು ಸಮಾಜದ ಹಿಂಸೆ ಕಡಿಮೆಯಾಗುತ್ತದೆ. ಮಾತಾಡಲೇಬೇಕು ಅಂದಾಗ ಮಾತ್ರ ಮಾತನಾಡಿದರೆ ಸಾಕು. ಹೆಚ್ಚಿನ ಸಮಯ ಸುಮ್ಮನೆ ಕುಳಿತುಕೊಂಡು ಕೇಳುತ್ತಾ ಇರಬೇಕು. ಇಂತಹ ಮೌನ ಬೇರೆಯವರ ಮೇಲೆಯೂ ಪ್ರಭಾವ ಬೀರುತ್ತದೆ. "ಮಾತಿಗೆ ಗಾಳಿಯ ತೂಕವಾದರೆ, ಮೌನಕ್ಕೆ ನೀರಿನ ತೂಕ."

ಈ ಮೂರು ವಿಷಯ ನಮ್ಮ ಜೀವನದ ಮೇಲೆ, ಮತ್ತು ಈ ಸಮಾಜದ ಮೇಲೆ ತುಂಬಾ ಪ್ರಭಾವ ಬೀರುವಂಥದ್ದು. ಎಂದು ನನಗೆ ಅನ್ನಿಸಿತು. ಹಾಗೆಯೇ ಈ ಮೂರು ವಿಚಾರಗಳ ಮೇಲೆ ಕೆಲಸ ಮಾಡಬೇಕು ಅನ್ನಿಸಿತು. ಇದು ಬೇರೆಯವರಿಗೆ ಹೇಳುವ ವಿಚಾರ ಎಂಬುದಕ್ಕಿಂತ ನನಗೆ ನಾನೇ ಅಳವಡಿಕೊಳ್ಳವ ವಿಚಾರ. ನನ್ನ ಜೀವನವನ್ನು ಇನ್ನಷ್ಟು ಸರಳಗೊಳಿಸಬಹುದೆ? ಇದನ್ನು ಗಂಭೀರವಾಗಿ ನೋಡಬೇಕು. ಮತ್ತು ಸರಳಗೊಳಿಸಬೇಕು. ನನ್ನಿಂದ ಉಂಟಾಗುತ್ತಿರುವ ತ್ಯಾಜ್ಯ ಕಡಿಮೆ ಮಾಡಬಹುದೆ? ಇದಕ್ಕೆ ಅಗಾಧವಾದ ಅವಕಾಶವಿದೆ. ಈ ದಿನದಿಂದಲೇ ನಾನದನ್ನು ಪ್ರಾರಂಭಿಸಬಹುದು. ನನ್ನಿಂದ ಆಗುವ ತ್ಯಾಜ್ಯಗಳನ್ನು ಕಡಿಮೆ ಮಾಡಬೇಕು. ಪ್ರತೀ ವಸ್ತುವನ್ನು ಕೊಳ್ಳುವಾಗ, ಅದನ್ನು ಬಳಸುವಾಗ ಅದು ತ್ಯಾಜ್ಯವಾಗದಂತೆ ತಪ್ಪಿಸುವುದನ್ನು ನಾನು ಯೋಚಿಸಬೇಕು. ಇನ್ನು ಕೊನೆಯದಾಗಿ, ಮಾತು. ಮಾತನ್ನು ಆದಷ್ಟು ಕಡಿಮೆ ಮಾಡಬೇಕು ಎಂಬುದರ ಕಡೆ ನನ್ನ ಪ್ರಯತ್ನ ಇರಲಿದೆ. ಜನ ಹೇಳುತ್ತಾರೆ ಎಂದು ಮಾತನಾಡಬಾರದು. ಜನ ನಮ್ಮ ಮನಸಿನಲ್ಲಿ ಇದ್ದದ್ದನ್ನು ಗುರುತಿಸಿ ಹೇಳುತ್ತಾರೆ. ಆದ್ದರಿಂದ ಈ ಮಾತು ಇಲ್ಲಿ ಬೇಕಾ? ಮಾತನಾಡದಿದ್ದರೆ ಏನು ನಷ್ಟವಾಗುತ್ತದೆ? ಅವರು ಹೇಳಿದ್ದನ್ನು ಸ್ವಲ್ಪ ಅರ್ಥಮಾಡಿಕೊಳ್ಳವ ಎಂದು ನಾವು ಸುಮ್ಮನೆ ಇರಲು ಪ್ರಯತ್ನಿಸಬೇಕು. ಈ ವರುಷ ಇದನ್ನು ಮಾಡಿ ನೋಡುವೆ. ಈ ವರ್ಷದ ಹೊಸ ನಿರ್ಣಯಕ್ಕೆ ನಗಿಷ್ಟು ಸಾಕು; ಇನ್ನು ನಿಮಗೆ

# ಭಯಮುಕ್ತ ವಾತಾವರಣ ಮಗುವಿನ ಕಲಿಕೆಯ ಅನಾವರಣ.

**ಭೀಮಸೇನರಾವ್. ಕುಲಕರ್ಣಿ ದೇವದುರ್ಗ**

ಅದೊಂದು ಸುಂದರ ಶಾಲೆ, ಶಾಲೆಯಲ್ಲಿ ಸುಮಾರು 30 ಮಕ್ಕಳಿದ್ದರು. ಪೂರ್ವ ಪ್ರಾಥಮಿಕ ಶಾಲೆಯಾಗಿರುವುದರಿಂದ, ಮಕ್ಕಳು ಮನೆ ವಾತಾವರಣವನ್ನು ಬಿಟ್ಟು ಶಾಲಾವಾತಾವರಣಕ್ಕೆ ಬಂದು ಕಲಿವಿನ ವಾತಾವರಣದಲ್ಲಿ ಒಲ್ಲದ ಮನಸ್ಸಿನಿಂದ ಪಾಲಕರ ಒತ್ತಾಯಕ್ಕೆ ಶಾಲಾವಾತಾವರಣಕ್ಕೆ ಹೊಂದಿಕೊಳ್ಳುವ ಸಮಯ, ಹೊಸ ಮುಖಗಳ ಪರಿಚಯದೊಂದಿಗೆ ಒಬ್ಬರನ್ನೊಬ್ಬರು ಬೆರೆಯುವ ಸಂರ್ದಗಳು ತುಂಬಾ ಕಡಿಮೆ. ಆದರೆ ಅಲ್ಲಿ ಬೋಧಿಸುವ ಶಿಕ್ಷಕರು ಮಾತ್ರ ಮಕ್ಕಳ ಮನಸ್ಸನ್ನು ಅರಿತವರು. ಆದ್ದರಿಂದ ತರಗತಿಯ ಮಕ್ಕಳ ಭಾವನೆಗಳನ್ನು ಅರಿತು ಮಕ್ಕಳಿಗೆ ತುಂಬಾ ಪ್ರೀತಿಯಿಂದ, ಮಮತೆಯಿಂದ ಕಾಣುವವರು ಆಗಿದ್ದಾರೆ.

ಆಗತಾನೇ ದಾಖಲಾದ ಮಕ್ಕಳನ್ನು ಶಿಕ್ಷಕರು ನೇರವಾಗಿ ಕಲಿಕೆಯಲ್ಲಿ ತೊಡಗಿಸದೆ ಅವರನ್ನು ಅರ್ಥಮಾಡಿಕೊಳ್ಳುವ ಕಾರ್ಯವನ್ನು ಮೊದಲು ಮಾಡಿದರು. ಹೇಗೆಂದರೆ, ಮಕ್ಕಳನ್ನು ತುಂಬಾ ಹತ್ತಿರದಿಂದ ಮಾತನಾಡಿಸುವುದು, ಅವರಿಗೆ ಮಾತನಾಡಲು ಅವಕಾಶ ನೀಡುವುದು ಹಾಗೂ ವಿವಿಧ ಚಟುವಟಿಕೆಗಳಾದ ಹಾಡು, ಕಥೆ, ಕುಣಿತ ಮುಂತಾದವುಗಳ ಮೂಲಕ ಮಕ್ಕಳ ಮನಸ್ಸನ್ನು ಗೆಲ್ಲುವ ಕೆಲಸ ಆರಂಭದಲ್ಲಿ ಶಿಕ್ಷಕಿಯರು ಮಾಡಿದರು. ಆದ್ದರಿಂದ ಮಕ್ಕಳಿಗೂ ಕೂಡಾ ಅನ್ನಪೂರ್ಣ ಮಿಸ್ ಅಂದರೆ ಎಲ್ಲಿಲ್ಲದ ಪ್ರೀತಿ. ಅವರು ಒಂದು ದಿನ ಶಾಲೆಗೆ ಬರದಿದ್ದರೆ ಮಕ್ಕಳು ಕೂಡಾ ಶಾಲೆಗೆ ಬರಲು ಹಿಂದೇಟು ಹಾಕುತ್ತಿದ್ದರು.

ದಿನಂ ಪ್ರತಿ ಶಿಕ್ಷಕಿಯರು ಮಕ್ಕಳಿಗೆ ಕ್ಲಾಸ್‌ವರ್ಕ ಬುಕ್‌ನಲ್ಲಿ ಹೊಸ ಅಕ್ಷರ ಮತ್ತು ಪದಗಳನ್ನು ಹಾಗೂ ಸಂಖ್ಯಾಜ್ಞಾನಕ್ಕೆ ಸಂಬಂಧಿಸಿದ ಕೆಲಸವನ್ನು ನೀಡುತ್ತಿದ್ದರು. ಮತ್ತೆ ಮಕ್ಕಳಿಗೆ ಮನೆಗೆಲಸವನ್ನು ಸಹ ನೀಡುತ್ತಿದ್ದರು. ಮಕ್ಕಳು ಚಾಚೂ ತಪ್ಪದೇ ಅವರ ಕೆಲಸಗಳನ್ನು ಮನೆಯಲ್ಲಿ ಮಾಡುತ್ತಿದ್ದರು. ಹೀಗಿರುವಾಗ ಅನ್ನಪೂರ್ಣ ಶಿಕ್ಷಕಿ ಸುಮಾರು 15 ದಿನಗಳ ದೀರ್ಘಕಾಲಿಕ ರಜೆಯನ್ನು ತೆಗೆದುಕೊಳ್ಳುವ ಅನಿವಾರ್ಯತೆ ಬಂದುಬಿಟ್ಟಿತು. ನಮ್ಮ ಮಗ ಅದೇ ಶಾಲೆಗೆ ಹೋಗುತ್ತಿದ್ದ, ಅವನು ಅಂದು ಶಾಲೆಗೆ ಹೋಗಿ ಬಂದವನೇ ಮಾರನೇ ದಿನ ನಾನು ಶಾಲೆಗೆ ಹೋಗುವುದಿಲ್ಲ ಎಂದು ಮನೆಯಲ್ಲಿ ಪೀಡಿಸತೊಡಗಿದನು. ನಾನೇ ಅವನನ್ನು ರಮಿಸಿ ಶಾಲೆಗೆ ಕರೆತಂದು ಬಿಟ್ಟೆ ಒಳಗಡೆ ಹೋಗಲು ಹೇಳಿದಾಗ ಅಲ್ಲಿ ಬೇರೆ ಶಿಕ್ಷಕಿ ತರಗತಿಗೆ ಬಂದಿದ್ದರು, ಅವರನ್ನು ದುರುಗುಟ್ಟಿ ನೋಡುತ್ತಾ ಅಳಲು ಪ್ರಾರಂಭಿಸಿದನು ನಾನು ಅವನಿಗೆ ಎಷ್ಟೇ ಸಮಾಧಾನ ಪಡಿಸಿದರು ಅವನು ಸಮಾಧಾನ ಆಗಲಿಲ್ಲ ಮತ್ತೆ ಯಾಕೆ ಅಳುತ್ತಿದ್ದಾನೆ ಎಂಬುದನ್ನೂ ಹೇಳಲಿಲ್ಲ, ನಾನು ಅವನಿಗೆ ಮನೆಗೆ ಕರೆದುಕೊಂಡು ಹೋದೆ ಸ್ವಲ್ಪಹೊತ್ತು ಆದಮೇಲೆ ಕೇಳಿದೆ ಯಾಕೆ? ತರಗತಿಯಲ್ಲಿ ಕೂರಲಿಲ್ಲ? ಆಗ ನನ್ನ ಮಗ ಹೇಳಿದ ಅವರು ಬೆತ್ತ ಹಿಡಿದುಕೊಂಡು ನಮ್ಮನ್ನು ಭಯಪಡಿಸುತ್ತಾರೆ ಅದಕ್ಕೆ ನಾನು ನಮ್ಮ ಮಿಸ್ ಬರೋ ವರೆಗೂ ನಾನು ಶಾಲೆಗೆ ಹೋಗಲ್ಲ. ನಾನು ಮತ್ತೆ ಮಾರನೇ ದಿನ ತರಗತಿ ಶಿಕ್ಷಕಯರಿಗೆ ನನ್ನ ಮಗ ತುಂಬಾ ಭಯಪಟ್ಟುಕೊಳ್ಳುತ್ತಾನೆ ಅವನಿಗೆ ಗದರಿಸಬೇಡಿ ಎಂದು ಹೇಳಿದೆ. ಆಗ ಅವರು ಹೇಳಿದರು ನಾನು ಅವನಿಗೆ ಏನೂ ಅಂದಿಲ್ಲ ಆದರೆ ಅವನು ಬೇರೆಯವರಿಗೆ ಬಡಿಯುವದನ್ನು ನೋಡಿ ಅವನು ಭಯಪಟ್ಟುಕೊಂಡಿದ್ದಾನೆ ಎಂದು ಹೇಳಿದರು. ಮತ್ತೆ ನಾವು ಮನೆಯಲ್ಲಿ ಅವನಿಗೆ ಎಷ್ಟೇ ಮನವಲಿಸಿದರೂ ಪ್ರಯೋಜನವಾಗಲಿಲ್ಲ.

ಅವನು ದಿನಂಪ್ರತಿ ಶಾಲೆಗೆ ಹೋಗುವಾಗ ಸಮಸ್ಯೇ ಇದ್ದದ್ದೇ, ನನ್ನ ಜೊತೆ ಶಾಲೆಗೆ ಅಜ್ಜಿ ಬರಲಿ, ಅವರು ನನ್ನ ಜೊತೆ ಇದ್ದರೆ ಮಾತ್ರ ನಾನು ಶಾಲೆಯಲ್ಲಿ ಇರುತ್ತೇನೆ ಇಲ್ಲದಿದ್ದರೆ ನಾನು ಹೋಗುವುದಿಲ್ಲ ಎಂದು ಹೇಳುತ್ತಿದ್ದ ಹಾಗೇ ಅವನಿಗೆ ಮನವಲಿಸಿ ಕಳುಹಿಸುತ್ತಿದ್ದೆವು. ಆ ಶಿಕ್ಷಕಿಯರು ಹಿರಿಯ ತರಗತಿಯಲ್ಲಿ ಬೋಧಿಸುವವರಾಗಿರುವುದರಿಂದ ಅವರು ಸಾಧಾರಣವಾಗಿ ಹಿರಿಯ ತರಗತಿಯ ಮಕ್ಕಳೊಂದಿಗೆ ವರ್ತಿಸುವ ಹಾಗೆ ಈ ಮಕ್ಕಳೊಂದಿಗೆ ನಡೆದುಕೊಂಡರು. ಅವರು ಮಕ್ಕಳಿಗೆ ಬಡಿಯದೇ ಇದ್ದರೂ ತರಗತಿಯಲ್ಲಿರುವ ಬಹುತೇಕ ಮಕ್ಕಳು ಭಯದಿಂದ ಇರುತ್ತಿದ್ದರು. ಮಗುವಿನ ಸಂತಸದಾಯಕ ಕಲಿಕೆಗೆ ಮಕ್ಕಳ ಮತ್ತು ಶಿಕ್ಷಕರ ಒಡನಾಟ ಹಾಗೂ ಮಕ್ಕಳಿಗೆ ಶಿಕ್ಷಕರ ಪ್ರೀತಿ ಮುಖ್ಯ. ಅನ್ನಪೂರ್ಣ ಶಿಕ್ಷಕಿಯವರು ಮಕ್ಕಳು ಶಾಲೆಗೆ ಬಂದ ಕೂಡಲೇ ಮಕ್ಕಳನ್ನು ತಮ್ಮ ಹತ್ತಿರ ಕೂಡಿಸಿಕೊಂಡು ಪ್ರೀತಿಯಿಂದ ಮಾತನಾಡಿಸಿ ಅವರಿಗೆ ನಂತರ ತಮ್ಮ ಸ್ಥಳ ಕೂರಲು ತಿಳಿಸುತ್ತಿದ್ದರು. ಪ್ರತಿ ಮಗುವಿಗೂ ವೈಯಕ್ತಿಕ ಕಾಳಜಿಯನ್ನು ತೋರಿಸುತ್ತಿದ್ದರು. ಇವೆಲ್ಲವೂ ಮಕ್ಕಳ ಮನಸ್ಸನ್ನು ಗೆಲ್ಲಲು ಇರುವ ಉಪಾಯಗಳು, ಆಗ ಮಕ್ಕಳಿಗೆ ಶಿಕ್ಷಕರ ಮೇಲೆ ಪ್ರೀತಿ, ವಿಶ್ವಾಸ ಹೆಚ್ಚಾಗುತ್ತದೆ. ಕಲಿಕೆ ಭಯದಿಂದ ಉಂಟಾಗುವುದಿಲ್ಲ ಮಕ್ಕಳನ್ನು ಯಾರು ತುಂಬಾ ಪ್ರೀತಿಯಿಂದ ಕಾಣುತ್ತಾರೋ ಅವರನ್ನೇ ಮಕ್ಕಳು ಹೆಚ್ಚು ಇಷ್ಟಪಡುತ್ತಾರೆ ಹಾಗೂ ಅವರೊಂದಿಗೆ ಬೆರೆಯುತ್ತಾರೆ. ಅವರು ನೀಡಿದ ಎಲ್ಲಾ ಕೆಲಸಗಳನ್ನು ಚಾಚೂ ತಪ್ಪದೇ ಮಾಡಿ ಮುಗಿಸುತ್ತಾರೆ. ಮಕ್ಕಳಿಗೆ ತರಗತಿಯಲ್ಲಿ ಭಯಮುಕ್ತ ವಾತಾವರಣವಿರಬೇಕು ಹಾಗೆ ಇದ್ದಾಗ ಮಾತ್ರ ಮಗುವಿನ ಕಲಿಕೆಯನ್ನು ಆಸಕ್ತಿದಾಯಕವಾಗಿ ತೊಡಗಿಸಲು ಸಾಧ್ಯವಾಗುತ್ತದೆ.

# آئینی اقدار

**Azeem Fareedi, Raichur DI**

**انصاف :**اس بات کو یقینی بناتا ہے کہ ایک کی آزادی دوسرے کے لیے ظلم نہ بن جائے۔ انصاف کو حقیقی معنوں میں بامقصد ہونے کے لیے طاقت کی تقسیم، کم مراعات یافتہ طبقے کے لیے ہمدردی اور پسماندہ کے لیے ہمدردی کی ضرورت ہے۔ انصاف کے لیے لڑنے کو یقینی بنانے کے لیے حقوق اور فرائض کی تعلیم ضروری ہو جاتی ہے۔

انصاف کو دو روخ میں دیکھا جانا لازمی ہے۔ انصاف وہ جو ہر کسی کو حاصل ہو جو بھی اسکا حقدار ہے۔ دوسرا عدل انصاف جو جسکو جس کی ضرورت ہو وہ اُسے حاصل ہو۔ اکژ وہ بیشتر انصاف کے کئ ایک پہلو ں میں نظرآتا ہو دیکھا گیا ہے، لیکن عد ل انصاف کے معملہ نہایت ہی کم دیکھنے کو ملے ہیں۔ اس نظریہ کو تعلیمی ترز سے دور کرنے کی فکر ضروری ہے۔ اپنے کمرہ جماعت سے اسکی شروعات لازمی ہے۔

**سوچ اور عمل کی آزادی** : ایک بنیادی قدر ہے جو ہمارے آئین میں شامل ہے۔ یہ تخلیقی صلاحیتوں اور نئے خیالات اور تجربات کی تلاش کی بنیاد ہے جو سماجی ترقی کو آگے بڑھا سکتی ہے۔ دوسروں کے حقوق اور فکر و عمل کی آزادی کا احترام ایک مہذب معاشرے کی پہچان ہے۔ اس بات کو یقینی بنانا کہ سوچ اور عمل کی اس آزادی کو دوسروں کے عقائد اور حیثیت کو کم کرنے یا کم کرنے کے لیے استعمال نہ کیا جائے یہی ایک مہذب معاشرے کی تشکیل ہے۔ جمہوریت آگے بڑھنے کے مواقع پیدا کرتی ہےکسی کے منتخب کردہ انجام کے ساتھ ساتھ دوسروں کے حقوق کا احترام کرنا۔ ہندوستان جیسے متنوع ملک میں، ملک میں امن کو یقینی بنانے کے لیے ذمہ داری کے ساتھ آزادی کا استعمال ضروری ہے۔

**مساوات** ایک اور قدر ہے جو آئین میں درج ہے۔ اگر مساوات کو یقینی نہ بنایا جائے تو آزادی اور انصاف محض الفاظ رہ جاتے ہیں۔ اس کا مطلب استحصال سے آزادی اور پس منظر، صنف، ثقافتی یا سماجی و اقتصادی شناخت اور حیثیت سے قطع نظر فرد کی ترقی کے مواقع فراہم کرنے کو یقینی بنانا ہے۔

**بھائی چارہ:** اسکول، معاشرے اور قوم کا مرکز ہے۔ سماجی یکجہتی معاشرے کا ایک اہم حصہ ہے جس میں معاشرے کے تمام افراد کی خواہشات کی جگہ ہوتی ہے۔ بھائی چارے یا یکجہتی کی اہمیت کو سمجھنا اور یہ جاننا کہ ہم سب ایک بڑی برادری، ایک قوم اور دنیا سے تعلق رکھتے ہیں، اپنی پیدائشی انسانیت کو بھی دریافت کرنا ہے۔ صرف ہم اپنے باہمی انحصار کو تسلیم کرتے ہیں تب ہی ہم ایک پرامن قوم اور دنیا کی تعمیر میں مدد کرنے کے لیے بااختیار ہوتے ہیں۔ شہریوں کو مذہبی عقائد، علاقائی اور مقامی تنوع سے قطع نظر سب کے درمیان بھائی چارے کو فروغ دینے کے لیے مساوات، انصاف اور آزادی کے اصولوں کو داخل کرنے کی ضرورت ہے۔ جیسا کہ آئین خود اور اپنے فطری اور سماجی ماحول کے ساتھ ہم آہنگی کے ساتھ زندگی گزارنے کی اقدار کو گھیرے ہوئے ہے۔ یہ طالب علموں میں پرورش پانے والی اقدار کے فریم ورک پر کام کرنے کی بنیاد فراہم کرتا ہے۔ اگر سچائی، احساس ذمہ داری، امانت داری، وفاداری، محبت، امن، دوسروں کے لیے احترام وغیرہ جیسی اقدار کو شروع سے ہی پروان چڑھایا جائے تو یہ کوششیں طلبہ کو آئین کی پاسداری کے قابل بنانے اور معاشرے کی وسیع تر صحت

میں حصہ ڈالنے کے لیے بہت آگے بڑھیں گی۔ اور بڑے پیمانے پر قوم. درحقیقت اسکول یا سماجی سطح پر اقدار کو فروغ دینے کا آغاز فرد اور فرد سے برادری، بڑے معاشرے، قوم اور دنیا کے حوالے سے ہوتا ہے۔جیسا کہ پہلے چاہا، قدر کی تعلیم تنہائی میں نہیں ہوتی۔ اسے اس دنیا کے تناظر میں ترتیب دیا جانا چاہیے جس میں ہم رہتے ہیں۔

اسکولوں میں کلیدی قدر کے خدشات کے بارے میں فیصلہ کرنا بھی معاشرے کے عصری چیلنجوں میں مضبوطی سے جڑنا ضروری ہے۔ جہاں وقتاً فوقتاً دہشت گردوں کے حملے ہوتے ہیں، خواتین اور لڑکیوں کے ساتھ زیادتی ہوتی ہے، جہاں چوری، قتل اور تشدد کے واقعات کثرت سے ہوتے ہیں، جہاں بہت سارے پسمانده ہوتے ہیں اور مجموعی طور پر معاشره نظر انداز ہوتا ہے، وہاں یہ ضروری ہے کہ اقدار کی تعلیم کو واضح طور پر ترتیب دیا جائے۔ عالمی اور مقامی سیاق و سباق۔ ماحولیاتی تبدیلیوں، عالمگیریت، تکنیکی انتخاب کا ابھرنا، تشدد، دہشت گردی، تعلیم کی کمرشلائزیشن، بڑھتا ہوا مسابقتی ماحول اور والدین کی خواہشات سے انسانیت کو لاحق خطرات بہت زیادہ بوجھ ڈالتے ہیں اور بچوں پر تناؤ اور اضطراب میں اضافہ کرتے ہیں۔ اسکول عالمی معاشرے کا مائیکرو کاسم ہیں۔ معاشرے اور دنیا کی خرابی اسکولوں میں کئی طریقوں سے سامنے آتی ہے۔ اس کے علاوہ، صنف، ذات، زبان، ثقافت، مذہب، معذوری وغیره کی عدم مساوات سے پیدا ہونے والی تعلیم میں نقصانات ہیں۔ یہ درجہ بندی تعلیم تک رسائی اور اسکولوں میں بچوں کی شرکت پر گہرا اثر ڈالتی ہے جو کہ زیادہ لاگت والے 'سرکاری' (نجی) اسکولوں سے لے کر ہوتے ہیں۔ ناقص کام کرنے والے لوکل باڈی پرائمری اسکولوں کو چلاتے ہیں۔ یہ حقیقتیں اسکول کی تعلیم میں استحقاق اور اخراج کو تقویت دیتی ہیں اور مواقع کی مساوات اور سماجی انصاف کی آئینی اقدار کو کمزور کرتی ہیں۔ یہ تمام حالات طلبہ کی ذاتی نشوونما اور نشوونما کے لیے نقصان دہ ہیں اور اقدار کی تحریف جو کہ نظم و ضبط، تشدد، ذمہ داری کی کمی، احترام کی کمی وغیره کا باعث بنتی ہے۔ اسکولوں میں اساتذہ اور طلباءمیں باہمی اتفاق ضروری ہے۔

## ELM Related Experience

**Ramesh Kulkarni Devadurga**

ಆರಂಬಿಕ ಭಾಷೆ ಮತ್ತು ಗಣಿತ ವಿಷಯದಲ್ಲಿ ಮಕ್ಕಳೊಂದಿಗೆ ಹಾಗೂ ಶಿಕ್ಷಕರೊಂದಿಗೆ ಕೆಲಸ ಮಾಡಿದಾಗ ಕೆಲವು ಅನುಭವಗಳು ಕಲಿಕೆಗೆ ಹೇಗೆ ಸಹಾಯ ಮಾಡುವುದು ಎಂಬ ಪರಿಣಾಮಕಾರಿ ಅಂಶಗಳ ಬಗ್ಗೆ ಅಧ್ಯಯನ ಮಾಡಿದಾಗ ಕಂಡುಕೊಂಡ ಅಂಶಗಳು.

ಮೊದಲಿಗೆ ನಾನು ಕಲಿತ ವಿಷಯದಲ್ಲಿ ಪ್ರಸ್ತುತ ಸಂದರ್ಭದಲ್ಲಿ ಮಕ್ಕಳು ಕಲಿಯುವ ವಿಧಾನದಲ್ಲಿ ಬಹಳಷ್ಟು ವ್ಯತ್ಯಾಸಗಳಾಗಿರುವುದು ಕಾರಣ ಇಂದು ಮಕ್ಕಳು ಕಲಿಯುವ ಹಂತದಲ್ಲಿ ಅರ್ಥಪೂರ್ಣವಾದ ಓದು–ಬರಹ ಗಣಿತದ ಮೂಲಕ್ರಿಯೆಗಳು ಆರಂಬಿಕ ಭಾಷೆ ಮತ್ತು ಆರಂಭಿಕ ಗಣಿತ ವಿಷಯದಲ್ಲಿ ಮಕ್ಕಳಿಗೆ ಗೊತ್ತಿರುವ ಜ್ಞಾನ ಮತ್ತು ತರಗತಿಗೆ  ಬಂದ ನಂತರ ಅದನ್ನು ಹೇಗೆ ಮುಂದುವರೆಸುವುದು ಜೊತೆಗೆ ಅನುಭವ ಆಧಾರಿಸಿ ಇದು ಅವರ ಮುಂದುವರೆದ ಕಲಿಕೆಗೆ ಪೂರಕವಾಗಿ ಸಾಕಷ್ಟು ಪ್ರೋತ್ಸಾಹ ಸಿಗುತ್ತದೆ.

ಮಕ್ಕಳು ಮುಕ್ತವಾಗಿ ಓದಲು ಹಾಗೂ ಚಟುವಟಿಕೆ ಮೂಲಕ ತನ್ನ ಜ್ಞಾನವನ್ನು ಕಟ್ಟಿಕೊಳ್ಳಲು ಹಲವಾರು ಉದ್ದೇಶಗಳನ್ನು ನಾವು ಕಾಣಬಹುದು. ಕಾರಣ ಇಂದಿನ ಶಿಕ್ಷಕರು ಸಾಕಷ್ಟು ಸೃಜನಾತ್ಮಕವಾಗಿ ವಿವಿಧ ವಿಷಯಗಳಲ್ಲಿ ಹಲವಾರು ತರಬೇತಿಗಳು, ಕಾರ್ಯಗಾರಗಳು ಅವರು ಓದಿರುವ ಕಂಡಕೊಂಡು ಸಾಕಷ್ಟು ವಿಷಯಗಳು ಅಭಿವೃದ್ಧಿ ಹೊಂದಿದ ಶಿಕ್ಷಕರು ಇದ್ದಾರೆ .

ಪ್ರಸ್ತುತ ಸನ್ನಿವೇಶದಲ್ಲಿ ಆರಂಬಿಕವಾಗಿ ಮಕ್ಕಳಿಗೆ ಭಾಷೆ ವಿಷಯದಲ್ಲಿ ಒಂದು ಸನ್ನಿವೇಶಾಧಾರಿತವಾಗಿ ಹಾಗೂ ತಮ್ಮ ಪರಿಸರದಲ್ಲಿ ಮಕ್ಕಳು ಗಮನಿಸಿದ ವಿವಿಧ ಆಯಾಮಗಳಲ್ಲಿ ವೀಕ್ಷಿಸಿದ ಅನುಭವಾಧಾರದ ಮೇಲೆ ಮಕ್ಕಳು ಕಲಿಯುವುದನ್ನು ನಾವು ಗಮನಿಸಿದ್ದೇನೆ. ಇಂದು ಮಕ್ಕಳು ಭಾಷೆ ಕಲಿಯಲು ಕಥೆಯು ಚಿತ್ರಪಟಗಳು ಸನ್ನಿವೇಶಗಳು ಮಕ್ಕಳ ಕಲಿಯವದಕ್ಕೆ ಸಾಧ್ಯವಾಗಿದೆ. ಶಾಲೆಗೆ ಬಂದ ತಕ್ಷಣ ಮಗುವಿಗೆ ಗೊತ್ತಿರುವ ವಿಷಯ ವಸ್ತುವಿನಿಂದ ಅವನ ಕಲಿಕೆ ವೇಗಕ್ಕೆ ತಕ್ಕಂತೆ ಕಲಿಯಲು ಗೆಳೆಯರ ಸಹಾಯದಿಂದ ಕಲಿಯಲು ಸಾಕಷ್ಟು ಅವಕಾಶಗಳು ಮಕ್ಕಳಿಗೆ ಸಿಗುತ್ತಿವೆ. ಅದೇ ಗಣಿತದಲ್ಲಿ ಮಕ್ಕಳಿಗೆ ಗಣಿತೀಕರಣವಾಗಿ ಕಲಿಯಲು ಅವಕಾಶಗಳಿವೆ ಆದರೆ ಇಂದು ನಾವು ಕೇವಲ ಅಂಕಿ ಸಂಖ್ಯೆಗಳಿಗೆ ಜೋತುಬೀಳಿದೆ, ಯಾಂತ್ರಿಕವಾಗಿ ಕಲಿಯದೆ ,ಮಕ್ಕಳಿಗೆ ಮೂರ್ತರೂಪದಲ್ಲಿ ದಿನಿನಿತ್ಯ ಜೀವನದಲ್ಲಿ ವೈಜ್ಞಾನಿಕವಾಗಿ ಹಾಗೂ ವ್ಯವಹಾರಿಕವಾಗಿ ಸಮಸ್ಯೆಗಳನ್ನು ಮಕ್ಕಳ ತಮ್ಮ ಸುತ್ತಮುತ್ತಲ್ಲಿನ ಪರಿಸರದಲ್ಲಿ ಕಂಡುಕೊಂಡ ಅಂಶಗಳು ಶಾಲಾ ವಾತಾವರಣದಲ್ಲಿ ಕಲಿಯಲು ಸಾಕಷ್ಟು ಅವಕಾಶಗಳನ್ನು ಒದಗಿಸುವದು ನಮ್ಮ ಜವಬ್ದಾರಿಯಾಗಿದೆ

ಆದರೆ ಇಂದಿನ ನಲಿಕಲಿಯ ಬೋಧನ ವಿಧನದಲ್ಲಿ ಮಕ್ಕಳಿಗೆ ಕೆಲವೊಂದು ಆಯಾಮಗಲ್ಲಿ ನೋಡುವದಕ್ಕೆ ಸಿಗುತ್ತಿವೆ ಕಾರಣ ಇಂದು ಮಕ್ಕಳು ಸ್ಪಷ್ಟವಾದ ಪರಿಕಲ್ಪನೆಯೊಂದಿಗೆ ಕಲಿಯಲು ಸಾಧ್ಯವಾಗಿದೆ. ನಾನು ಎರಡು ಶಾಲೆಯಲ್ಲಿ ಉದಾ:– ರಾಯಚೂರ ಜಿಲ್ಲೆಯ ದೇವದುರ್ಗ ತಾಲೂಕಿನ ಕಾಚಾಪುರ ಮತ್ತು ಮರಕಂದ್ದಿನ್ನಿ ಶಾಲೆಯಲ್ಲಿ ಈ ವರ್ಷದಲ್ಲಿ ನಿರಂತರವಾಗಿ ಶಿಕ್ಷಕರು ಮತ್ತು ಮಕ್ಕಳೊಂದಿಗೆ ಕೆಲಸ ಮಾಡಿದ ಅನುಭವದಲ್ಲಿ ಇಂದಿನ ಮಕ್ಕಳು ಕಲಿಯುವಿಕೆ ಶಿಕ್ಷಕರ ಬೋಧನಾ ವಿಧಾನ ಹಾಗೂ ಶಿಕ್ಷಕರೊಂದಿಗೆ ನಾನು ತಯಾರಿಸಿಕೊಂಡಿದ್ದ ದಿನದ

ಪಾತಯೋಜನೆಯಾಧಾರಿಸಿ ಮಕ್ಕಳ ಕಲಿಕೆಯು ಈ ಎರಡು ಶಾಲೆಯ ಶಿಕ್ಷಕರ ತರಗತಿವಿಧಾನವು ವೀಕ್ಷಿಸಿದ ಆಧಾರದ ಮೇಲೆ ಮತ್ತು ಮಕ್ಕಳು ಕಲಿಕೆಯು ಅಭಿವೃದ್ದಿಯಾಗಲು ಕೆಲವು ಬದಲಾವಣೆಗಳನ್ನು ಗಮನಿಸಲಾಗಿದೆ. ಈ ಎರಡು ಶಾಲೆಗಳಲ್ಲಿ ಮಕ್ಕಳಿಗೆ ಭಾಷೆ ಮತ್ತು ಗಣಿತ ವಿಷಯದಲ್ಲಿ ವೈಜ್ಞಾನಿಕವಾಗಿ ಓದುವದು ಬರೆಯುವುದು ಮಾತಾನಾಡುವದು ಆಲಿಸುವುದು, ಅಂದಾಜಿಸುವುದು, ಆಲೋಚಿಸುವ ತಾರ್ಕಿಕವಾಗಿ ವಿಶ್ಲೇಶಿಸುವ ಸಾಮರ್ಥಕ್ಕೆ ತಕ್ಕಂತೆ ಮಕ್ಕಳಮಟ್ಟಕ್ಕನುಗುಣವಾಗಿ ಮಕ್ಕಳ ಕಲಿಕಾ ಅನುಭವಗಳನ್ನು ನಾವು ಇತ್ತಿಚ್ಚಿಗೆ ಕಲಿಕಾ ನಷ್ಟದ ಮೌಲ್ಯಮಾಪನದಲ್ಲಿ ಮಕ್ಕಳ ಕಲಿಕೆಯ ಬದಲಾವಣೆಗಳು ವೀಕ್ಷಿಸಿಲಾಗಿದೆ.

ಮಾಹಂತಗೌಡ ಶಿಕ್ಷಕರು ಮಕ್ಕಳಿಗೆ ಚಟುವಟಿಕೆಯಾಧಾರಿತವಾಗಿ ತರಗತಿಯಲ್ಲಿ ಕಲಿಕಾಮೂಲೆ ಮಾಡಿದ್ದು ಭಾಷೆ ಮತ್ತು ಗಣಿತ ವಿಷಯದ ಕಲಿಕಾ ಸಾಮಾಗ್ರಿಗಳು ತಯಾರಿಸಿಕೊಂಡು ಬೋಧನಾ ಮಾಡುವುದರ ಮೂಲಕ ಮಕ್ಕಳಿಗೆ 5ಇ ಸಾಮರ್ಥದಡೆಯಲ್ಲಿ ಅವರು ತಮ್ಮ ತರಗತಿ ಕೋಣೆಯಲ್ಲಿ ನಿರಂತರವಾಗಿ ಮಕ್ಕಳೊಂದಿಗೆ ಕೈಗೊಂಡಿರುವ ಚಟುವಟಿಕೆಗಳ ಆಧಾರದ ಮೇಲೆ ಕಲಿಕೆಯು ಪರಿಣಾಮಕಾರಿಯಾಗಿರುವುದು .


ಈ ಶಾಲೆಗಳಲ್ಲಿ ಪತ್ಯೆತರ ಚಟುವಟಿಕೆ ಅಥವಾ ಪತ್ಯೆಕ್ಕೆ ಪೂರಕವಾದ ಮತ್ತು ಅಗತ್ಯವಾದ ಕಲಿಕಾಸಾಮಾಗ್ರಿಗಳು ಶಿಕ್ಷಕರು ಮತ್ತು ಮಕ್ಕಳು ತಯಾರಿಸಿ ಅವುಗಳನ್ನು ತರಗತಿಯಲ್ಲಿ ಇಟ್ಟು ಬಳಕೆ ಮಾಡುತ್ತಿದ್ದಾರೆ ಹಿಂದಿನ ಕಲಿಕೆಗೂ ಮತ್ತು ಇಂದಿನ ಮಕ್ಕಳ ಚಟುವಟಿಕೆಯಿಂದ ಸ್ವಕಲಿಕೆಗೆ ಸಾಕಷ್ಟು ಪೂರಕವಾದ ಅವಕಾಶಗಳು ಮಕ್ಕಳಿಗೆ ಲಭಿಸಿರುವುದನ್ನು ಕಾಣಬಹುದು. ಕಲಿಕೆಯಲ್ಲಿ ನಿರಂತರವಾದ ಬದಲಾವಣೆಯು ನಾನು ಕಲಿತ ಕಲಿಕೆಗೂ ಈಗಿನ ನಲಿಕಲಿ ವಿಧಾನ ಕಲಿಕಗೂ ಬಹಳಷ್ಟು ಬದಲಾವಣೆ ಮತ್ತು ವಿಕಾಸವಾದದು ಎಂದು ಗಮನಿಸಲಾಗಿದೆ. ಇಂದಿನ ಕಲಿಕೆಯು ಮಕ್ಕಳ ಸ್ನೇಹಿಯಾಗುವಂತಹ ವಾತಾವರಣ ನಿರ್ಮಾಣವಾಗಿದೆ ಇಲ್ಲಿ ಮಕ್ಕಳು ಚರ್ಚಾಮೂಲಕ ತನ್ನಲ್ಲಿರುವ ಗೊಂದಲಗಳು ಪರಿಹರಿಸಿಕೊಳ್ಳಲು ಗೆಳೆಯರ ಸಹಕಾರದಿಂದ ಕಲಿಯಲು ಅವಕಾಶಗಳಿವೆ ಯಾವದೇ ಭಯವಿಲ್ಲದೆ ಇರುವುದುರಿಂದ ಮಕ್ಕಳು ಕಲಿಯಲು ಅವಕಾಶಗಳಿವೆ ಮಕ್ಕಳಿಗೆ ಒತ್ತಡವು ಇರುವುದಿಲ್ಲ. ಇದರಿಂದ ಮಕ್ಕಳು ಶೈಕ್ಷಣಿಕವಾಗಿ ಮುಂದುವರೆಯಲು ಪ್ರಾಥಮಿಕ ಹಂತದ ಮಕ್ಕಳಿಗೆ ಅನೂಕೂಲವಾಗಿದೆ. ಮೊದಲಿಗೆ ಶಾಲಾವಾತರಣಕ್ಕೆ ಬಂದು ತಮ್ಮ ಅನುಭವವು ಶಾಲೆಯಲ್ಲಿ ನಡೆಯುವ ಚಟುವಟಿಕೆಗಳಿಗೆ ಹೋಲಿಕೆ ಮಾಡುತ್ತಾ ಕಲಿಯಲು ವಿಪುಲವಾದ ಅವಕಾಶಗಳು ಕಾಣಲ್ಲಿಕ್ಕೆ ಸಾಧ್ಯವಾಗುತ್ತದೆ. ಇಲ್ಲಿ ಸಂರಚನೆ ಮುಖಾಂತರ ತಮ್ಮ ಜ್ಞಾನವು ಕಟ್ಟಿಕೊಳ್ಳಲ್ಲಿಕ್ಕೆ ಪರಿಣಾಮಕಾರಿಯಾದ ಅವಕಾಶಗಳು ವಿವಿಧ ಗುಂಪುಗಳ ಮೂಲಕ ಕಲಿಯಲು ಸಾಧ್ಯವಾಗುತ್ತದೆ.

## Linguistically Marginalized Children in The Govt School.

**Srinivas Kulkarni Raichur**

India is a multilingual country. People and children speak different languages in every state. Though the constitution has identified 22 languages in its schedule there are thousands of languages and dialects in this nation of great linguistic diversity. Language is not only a significant part of one's culture, but also considered as a cultural carrier. Most of the Indians are naturally at least bilinguals and many multilinguals with few exceptions in some regions of the country. There is an interesting structure in our system where in Teacher language , textbook language ,reginal language ,medium of instruction ,child's home language are all different .

.Normally during our school visits ( With other state borders like Karnataka and Andhra /Telangana ,Karnataka and Maharashtra sharing schools with different language of communication , we observe that children are not supposed to speak in their home language like telugu as medium of instruction is kannada in the school. The teachers normally give this instruction. Though the objective is good behind this move ,which is to ensure that child picks up the curriculum and assessment language with continuous exposure of listening and speaking in the school ,but it restricts the child to speak in her language to express her views /sharing's without any hesitation . It also takes away the child right to speak in her language which is called as Marginalization of child language by Ramakant Agnihotri well known scholar in language teaching in one of his interviews .



Contrary to this there are many teachers in the field who have learnt children home language to teach curriculum languages like kannada /English /Hindi etc. There are teachers who have learnt tribal languages like lambani in tanda govt schools to teach kannada and English as reginal language kannada becomes a second language for children. There are many kannada teachers in Urdu govt schools who have learnt Urdu to teach third language kannada and interact with children of minorities in Urdu medium schools of Karnataka . Every Indian govt school classroom looks like mini-India for me with various types of diversities including linguistic diversity .

To conclude ,it is important for the schoolteacher to realize that children 's various home languages should be respected in the school and classroom . Child can

involve effectively in the learning process with teacher and friends only if her language gets a space in the school and classroom . Child also becomes closer to teacher and friends if she realizes that her language is very well accepted . It is important to create multilinguals in this country keeping in mind our children's future aspirations in their life and professions . At the same time, it is also important for the mono lingual teacher to acquire more languages depending on her /his school context or language fabric in the children of the school which helps to teach concepts better. It is child 's constitutional right to express thoughts in his /her language which is their cultural identity and carrier as well .

**Photo Courtesy :** Internet- Google .

## ಶೈಕ್ಷಣಿಕ ಅಧಿಕಾರಿಗಳ ನಡೆ ಶಾಲೆ ಕಡೆ,

## ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ದೇವರಗೋನಾಲ

**ಅನ್ವರ ಎಮ್ & ಸಂಪನ್ಮೂಲ ವ್ಯಕ್ತಿಗಳತಂಡ ಸುರಪುರ**



ಶೈಕ್ಷಣಿಕ ಅಧಿಕಾರಿಗಳ ಸಾಮರ್ಥ್ಯ ಅಭಿವೃದ್ಧಿ ತರಬೇತಿ ಬಾಲವಿಕಾಸ ಹೈದ್ರಾಬಾದದಲ್ಲಿ ನಡೆಯುವ ಸಂದರ್ಭದಲ್ಲಿ ಇಂತಹ ಒಂದು ಯೋಚನೆ ಶುರುವಾಯಿತು. ಇದಕ್ಕೆ ಪೂರಕವಾಗಿ ತಿಮ್ಮಾಪುರದ ಶಿಕ್ಷಕರ ಕಲಿಕಾ ಕೇಂದ್ರದಲ್ಲಿ ಮುಖ್ಯ ಗುರುಗಳ ಸಮಾಲೋಚನೆ ಸಭೆಯ ನಂತರ ಶೈಕ್ಷಣಿಕ ಅಧಿಕಾರಿಗಳಾದ ಸಿ. ಆರ್.ಪಿಗಳು ಹಾಗೂ ಬಿ.ಆರ್.ಪಿ ಮತ್ತು ಶಿಕ್ಷಣ ಸಂಯೋಜಕರೊಂದಿಗೆ ಇಂತಹ ಒಂದು ಯೋಚನೆಗೆ ಚಾಲನೆ ನೀಡುವ ಚಿಂತನೆ ನಡೆಯಿತು.

ನಂತರ ಸೋಮವಾರ ದಿನಾಂಕ 5.01.2023 ಸುರಪುರದ ಅಜೀಮ್ ಪ್ರೇಮಜೀ ಫೌಂಡೇಷನ ಕಚೇರಿಯಲ್ಲಿ ಪೂರ್ವಸಭೆಯಲ್ಲಿ ಕ್ಷೇತ್ರ ಸಮನ್ವಯಾಧಿಕಾರಿಗಳಾದ ಪಂಡಿತ ಎ ನಿಂಬೂರ, ಶಿಕ್ಷಣ ಸಂಯೋಜಕರಾದ ಶಿವಪುತ್ರಪ್ಪ ಹಾಗೂ ಬಿ.ಆರ್.ಪಿ ಖಾದರ ಪಟೇಲ್ ಇವರುಗಳ ನೇತೃತ್ವದಲ್ಲಿ ಸುರಪುರ ವಲಯದ ಎಲ್ಲಾ ಸಿ.ಆರ್.ಪಿಗಳು ಮತ್ತು ಅಜೀಮ್ ಪ್ರೇಮಜೀ ಫೌಂಡೇಷನ್‌ನ ಸಂಪನ್ಮೂಲ ವ್ಯಕ್ತಿಗಳು ಪೂರ್ವಭಾವಿ ಸಭೆಯಲ್ಲಿ ಚರ್ಚಿಸಿದ ಪ್ರಮುಖ ವಿಷಯಗಳು:

**ಶಾಲಾ ಭೇಟಿಯ ಉದ್ದೇಶಗಳು:**

- ಶಿಕ್ಷಕರ ಬೋಧನೆ  ಕಲಿಕೆ ಪ್ರಕ್ರಿಯೆಯನ್ನು ವೀಕ್ಷಿಸಿ ಪ್ರೋತ್ಸಾಹಿಸುವುದು.
- ಮಕ್ಕಳಲ್ಲಿ ಕಲಿಕೆಯ ಸ್ಥಿತಿಗತಿಯನ್ನು ತಿಳಿದುಕೊಳ್ಳುವುದು.
- ಶಾಲೆಯ ಭೌತಿಕ ವಾತಾವರಣ ಗಮನಿಸಿ ಅಗತ್ಯ ಮಾರ್ಗದರ್ಶನ ನೀಡುವುದು.
- ಶಿಕ್ಷಕರ ವಿಷಯವಾರು ಮತ್ತು ತರಗತಿವಾರು ವಹಿಗಳನ್ನು ನಿರ್ವಹಿಸಿರುವುದರ ಬಗ್ಗೆ ಖಾತ್ರಿಪಡಿಸಿಕೊಳ್ಳುವುದು.
- ಶಾಲೆಯ ಪ್ರಮುಖ ದಾಖಲೆಗಳಾದ, ಪ್ರವೇಶ ಪತ್ರಗಳು, ದಾಖಲಾತಿ ರೆಜಿಷ್ಟರ್ ಪರೀಕ್ಷಾ ಕ್ರೋಢಿಕೃತ ವಹಿ ಕ್ಯಾಷ್ ಬುಕ್, ಮಕ್ಕಳಿಗೆ ಇಲಾಖೆಯ ಎಲ್ಲಾ ಸೌಲಭ್ಯಗಳನ್ನು ಸಮರ್ಪಕವಾಗಿ ಹಂಚಿಕೆ ಕುರಿತು, ಇತ್ಯಾದಿಗಳನ್ನು ಪರಿಶೀಲಿಸಿ ಸೂಕ್ತ ಮಾರ್ಗದರ್ಶನ ಮಾಡುವುದು.

- ಅಫ್ಲೈನ್ ಮತ್ತು ಆನ್ಲೈನ್ ಹಾಜರಾತಿ, ಎಫ್‌ಎ1, ಎಫ್‌ಎ2, ಎಸ್‌ಎ1 ನಿರ್ವಹಿಸಿರುವುದರ ಬಗ್ಗೆ ಪರಿಶೀಲಿಸುವುದು.
- ಭೋದನಾ ಮತ್ತು ಕಲಿಕಾ ಸಾಮಗ್ರಿಗಳನ್ನು ವೀಕ್ಷಿಸಿ ಸಲಹೆಗಳನ್ನು ನೀಡುವುದು.
- ಕಲಿಕಾ ಚೇತರಿಕೆ ಆಶಯದಂತೆ ತರಗತಿ ಪ್ರಕ್ರಿಯೆಯನ್ನು ಅರ್ಥೈಯಿಸಿಕೊಂಡು ಸೂಕ್ತ ಮಾರ್ಗದರ್ಶನ ಮಾಡುವುದು.

ದಿನಾಂಕ 06.01.2023 ರಂದು ಸ.ಹಿ.ಪ್ರಾಥಮಿಕ ಶಾಲೆ ದೇವರಗೋನಾಲಗೆ ಶೈಕ್ಷಣಿಕ ಅಧಿಕಾರಿಗಳು ಹಾಗೂ ಅಜೀಮ್ ಪ್ರೇಮಜೀ ಫೌಂಡೇಷನ ಸಂಪನ್ಮೂಲ ವ್ಯಕ್ತಿಗಳ ತಂಡ ಪ್ರಾರ್ಥನೆಯಲ್ಲಿ ಭಾಗವಹಿಸಿದ್ದರು, ಪ್ರಾರ್ಥನಯಲ್ಲಿ ನಾಡಗೀತೆ, ರಾಷ್ಟ್ರಗೀತೆ ನಂತರ ಮಕ್ಕಳು ಸಮಾನ್ಯಜ್ಞಾನ ಪ್ರಶ್ನೆಗಳು, ಪಂಚಾಂಗ ಪಠಣ, ವಾರ್ತಾ ಪತ್ರಿಕೆ ಪ್ರಮುಖ ಸುದ್ದಿಗಳು ತುಂಬಾ ಚೆನ್ನಾಗಿ ವಿವರಿಸಿದರು. ಪ್ರಾರ್ಥನೆಯ ನಂತರ ಮುಖ್ಯ ಗುರುಗಳ ಕೋಣೆಯಲ್ಲಿ ಎಲ್ಲರೂ ಸೇರಿಕೊಂಡು ಪರಿಚಯಿಸಿಕೊಂಡು ಭೇಟಿಯ ಉದ್ದೇಶವನ್ನು ಸಂಕ್ಷಿಪ್ತವಾಗಿ ವಿವರಿಸಿ ಪ್ರತಿಯೋಬ್ಬರು, ಈಗಾಗಲೇ ಗೊತ್ತುಪಡಿಸಿರುವ ತರಗತಿಗೆ ವೀಕ್ಷಣೆಯಲ್ಲಿ ಪಾಲ್ಗೊಂಡರು.

**ತರಗತಿವಾರು ವೀಕ್ಷಿಸಿದ ಪ್ರಮುಖ ಅಂಶಗಳು:**

**ನಲಿ ಕಲಿ ತರಗತಿ ಪ್ರಮುಖ ಅಂಶಗಳು:**

- ಶಿಕ್ಷಕರು ಗಾಂಧಿತಾತ ಗೀತೆಯನ್ನು ಅಭಿನಯದ ಮೂಲಕ ತರಗತಿ ಪ್ರಕ್ರೀಯೆಯನ್ನು ಆರಂಭಿಸಿದರು.
- ನಲಿ ಕಲಿ ಕೇಂದ್ರದಲ್ಲಿ ಚಪ್ಪರ, ಚೀಲಗಳು ಕಾರ್ಡುಗಳು, ವಾಚಕಗಳನ್ನು ಉತ್ತಮವಾಗಿ ಜೋಡಿಸಿರುವರು.
- ಕಲಿಕಾ ಚೇತರಿಕೆ, ನಲಿ ಕಲಿ ಅಭ್ಯಾಸ ಪುಸ್ತಕದಲ್ಲಿ ಮಕ್ಕಳಿಂದ ಅಭ್ಯಾಸ ಬರವಣಿಗೆ ಮಾಡಿಸಿದ್ದು ಕಂಡುಬಂದಿತು.
- ತರಗತಿ ಪ್ರಕ್ರಿಯೆಯಲ್ಲಿ 5 ತಟ್ಟೆಯಲ್ಲಿ ಕೂಡಿಸಿ ಸಾಮೂಹಿಕವಾಗಿ ಚಟುವಟಿಕೆಗಳು ನೆಡೆಯುತ್ತವೆ.
- ಮಾಸಗಳ ಚಾರ್ಟ ಪ್ರದರ್ಶಸಿದ್ದಾರೆ ಮತ್ತು ಮಕ್ಕಳು ಹೇಳುತ್ತಾರೆ. ಹವಾಮಾನ ನಕ್ಷೆಯ ಚಾರ್ಟು ತೂಗು ಹಾಕಿರುವುದು ಕಂಡುಬಂದಿತು.
- ತಮ್ಮ ತರಗತಿಯ ಮಕ್ಕಳನ್ನು ಪ್ರೀತಿ ಕಾಜಿಯಿಂದ ಗೌರವಿಸುವು.

**ಸಲಹೆಗಳು:**

- ನಲಿ ಕಲಿ ತರಗತಿಯಲ್ಲಿ 1,2,3ನೇ ತರಗತಿಯ ಎಲ್ಲಾ ಮಕ್ಕಳನ್ನು ವಿಭಾಗಿಸಿ ತರಗತಿ ಪ್ರಕ್ರಿಯೆಯಲ್ಲಿ ತೊಡಗುವುದು.
- ಪ್ರಗತಿನೋಟ, ಮಕ್ಕಳ ಕಪ್ಪು ಹಲಗೆ ಇಂಗ್ಲೀಷ ಕಾರ್ಡುಗಳನ್ನು ವ್ಯವಸ್ಥಿತವಾಗಿ ಜೋಡಿಸಿಕೊಂಡು, ತರಗತಿ ನಿರ್ವಹಿಸವುದು.
- ಕಲಿಕಾ ಚಪ್ಪರದಲ್ಲಿ ಮಕ್ಕಳು ಮಾಡಿರುವ ಚಟುವಟಿಕೆಗಳನ್ನು ಹೆಚ್ಚಾಗಿ ಪ್ರದರ್ಶಿಸುವುದು.
- ಕೇಂದ್ರದಲ್ಲಿ ಕಲಿಕಾ ಸಾಮಗ್ರಿಗಳನ್ನು ವ್ಯವಸ್ಥಿತವಾಗಿ ಜೋಡಿಸಿ, ಅವಶ್ಯವಿರುವಾಗ ಬಳಸಿಕೊಳ್ಳುವುದು.
- ಕ.ಚೇ. ನಲಿ ಕಲಿ ಅಬ್ಯಾಸ ಪುಸ್ತಕದಲ್ಲಿ ಮಾಹೇವಾರು ಪ್ರಗತಿಯ ಕಲಿಕೆಯಾಗುವಂತೆ ನೋಡಿಕೊಳ್ಳುವುದು.
- ಅಬ್ಯಾಸ ಪುಸ್ತಕದಲ್ಲಿ ಮಕ್ಕಳ ತಪ್ಪುಗಳನ್ನು ತಿದ್ದಿ ಸೂಕ್ತ ಮಾರ್ಗದರ್ಶನ ಮಾಡುವುದು.

**4 ಮತ್ತು 5ನೇ ತರಗತಿ ವೀಕ್ಷಣೆಯ ಪ್ರಮುಖ ಅಂಶಗಳು:**

**ಪರಿಸರ ಅದ್ಯಯನ:** ಆಹಾರ ಮತ್ತು ಆರೋಗ್ಯ ಪಾಠವನ್ನು ಶಿಕ್ಷಕರು ಆರಂಭಿಸಿದರು. ಅರೋಗ್ಯ ಎಂದರೇನು ಎಂಬ ಪ್ರಶ್ನೆಯೊಂದಿಗೆ ಚರ್ಚೆಯನ್ನು ಆರಂಭಿಸಿದರು, ಅರೋಗ್ಯ ಎಂದರೇನು ಎಂಬುದನ್ನು ಕುರಿತು

ಚರ್ಚಿಸುತ್ತಾ ಹೋದರು. ನಂತರ ಶಕ್ತಿ ಪ್ರಧಾನವಾದ ಆಹಾರ, ದೇಹಕ್ಕೆ ರಕ್ಷಣೆ ಒದಗಿಸುವ ಆಹಾರ ಪದಾರ್ಥಗಳು ಕುರಿತು ವಿವರಿಸಿದರು.

**ಶಿಕ್ಷಕರು ಪ್ರಶ್ನೆಗಳೊಂದಿಗೆ ಚರ್ಚಿಸುತ್ತಿರುವುದು ಉತ್ತಮವಾಗಿರುವಂತಹ ಬೋಧನೆ ಕಲಿಕೆ ಪ್ರಕ್ರಿಯೆಯಾಗಿತ್ತು.**

**ಸಲಹೆಗಳು:**

- ಮಕ್ಕಳಿಗೆ ಕೋಲಿನಿಂದ ಹೊಡೆಯುವುದರಿಂದ ಕಲಿಕೆ ಉತ್ತಮವಾಗುವುದಿಲ್ಲ ಎಂಬುದನ್ನು ಶಿಕ್ಷಕರು ಮನಗಾಣಬೇಕು.
- ಶಿಕ್ಷಕರು ಹೆಚ್ಚು ತಯಾರಿಯೊಂದಿಗೆ ಬೋಧನೆ ಕಲಿಕೆ ಪ್ರಕ್ರಿಯೆಯಲ್ಲಿ ತೊಡಗಿದಾಗ ಮಾತ್ರ ಉತ್ತಮ ಕಲಿಕಾ ವಾತಾವರಣ ನಿರ್ಮಿಸಬಹುದು.
- ಪಾಠಬೋಧನೆಯ ಸಂದರ್ಭದಲ್ಲಿ ಸ್ಥಳಿಯ ಉದಾಹರಣೆಗಳನ್ನು ಬಳಸಿ ಚರ್ಚಿಸುವುದರಿಂದ ಮಕ್ಕಳೊಂದಿಗೆ ಉತ್ತಮ ಮಾತುಕತೆಯಾಗಬಹುದು.
- ಕಲಿಕೋಪಕರಣಗಳ ಬಳಕೆ ಮಾಡುವುದರಿಂದ ಮಕ್ಕಳಲ್ಲಿ ಅನುಭವತ್ಮಾಕ ಕಲಿಕೆಯಾಗುವುದರಿಂದ, ಸಾಧ್ಯವಾದಷ್ಟು ಕಲಿಕೋಪಕರಣಗಳ ಬಳಕೆ ತರಗತಿಯಲ್ಲಾಗಬೇಕು.

**ಭಾಷೆ ತರಗತಿ ವೀಕ್ಷಣೆಯ ಪ್ರಮುಖ ಅಂಶಗಳು:**

ಚಿತ್ರವೊಂದರಲ್ಲಿ ಜೋಡಿಸಿದ ಕಥೆಯನ್ನು ಗ್ರಹಿಸಿ ಮೆಚ್ಚುವರು.

ಇದಕ್ಕೆ ಪೂರಕವಾಗಿ ಶಿಕ್ಷಕರು ಈ ಹಿಂದಿನ ತರಗತಿಯಲ್ಲಿ ಹಂಚಿಕೊಂಡಿರುವ ವಿಷಯವನ್ನು ಪುನ: ಮಕ್ಕಳೊಂದಿಗೆ ಚರ್ಚಿಸುತ್ತಿದ್ದರು. ಕಲಿಕಾ ಚೇತರಿಕೆ ಶಿಕ್ಷಕರ ಕೈಪಿಡಿ ಇಲ್ಲದಿರುವುದರಿಂದ ಮೋಬೈಲನಲ್ಲಿ ಬಳಸಿಕೊಂಡು ಮಕ್ಕಳೊಂದಿಗೆ ಉತ್ತಮವಾಗಿ ಚರ್ಚಸುತ್ತಿದ್ದರು. ಎಲ್ಲಾ ಮಕ್ಕಳೊಂದಿಗೆ ನಗು ಮುಖದೊಂದಿಗೆ ಬೋಧನೆ ಕಲಿಕೆಯಲ್ಲಿ ತೊಡಗಿರುವುದರಿಂದ ತರಗತಿ ತುಂಬಾ ಖುಷಿಯಿಂದ ಕೂಡಿತ್ತು.

**ಸಲಹೆಗಳು:**

ಮಕ್ಕಳು ಚರ್ಚೆಯಲ್ಲಿ ಉತ್ತಮವಾಗಿ ತೊಡಗಿಸಿಕೊಳ್ಳುತ್ತಿದ್ದರು. ಕೆಲವು ಮಾತಾಡದಿರುವ ಮಕ್ಕಳ ಕಡೆಗೂ ಗಮನಹರಿಸುವುದು.

ಇನ್ನೂ ಮಕ್ಕಳಲ್ಲಿ ಸ್ವತಂತ್ರ ಬರವಣಿಗೆ ಮತ್ತು ಓದುಗಾರಿಕೆಗೆ ಹೆಚ್ಚಿನ ಚಟುವಟಿಕೆಗಳನ್ನು ಹಮ್ಮಿಕೊಳ್ಳವುದು. ಮಕ್ಕಳ ಸಾಮರ್ಥ್ಯಗೆ ಅನುಸಾರವಾಗಿ ಗುಂಪುಗಳನ್ನು ರಚಿಸಿ ಕಲಿಕೆಯಲ್ಲಿ ತೊಡಗಿಸಿಕೊಳ್ಳವುದು.

**ಗಣಿತ ತರಗತಿ ವೀಕ್ಷಣೆ:**

ಶಿಕ್ಷಕರು ನೇರವಾಗಿ ಮಕ್ಕಳಿಗೆ ಭಾಗಕಾರದ ಕೆಲವು ಲೆಕ್ಕಗಳನ್ನು ಮಾಡಲು ಬೋರ್ಡ ಮೇಲೆ ಕೆಲವು ಲೆಕ್ಕಗಳನ್ನು ಮಾಡಿದರು.

ನಂತರ ಒಂದನ್ನು ತಿಳಿಸಿ, ಉಳಿದ ಮಕ್ಕಳಿಗೆ ಮಾಡಲು ಸೂಚಿಸಿದರು. ಮಕ್ಕಳನ್ನು ಕರೆದು ಕಪ್ಪು ಹಲಗೆಯ ಮೇಲೆ ಲೆಕ್ಕ ಬಿಡಿಸುತ್ತಿದ್ದುರು.

**ಸಲಹೆಗಳು:**

- ಶಿಕ್ಷಕರು ಪೂರ್ವ ತಯಾರಿಯೊಂದಿಗೆ ತರಗತಿ ಪ್ರಕ್ರೀಯೆಯಲ್ಲಿ ತೊಡಗಿಸಿಕೊಳ್ಳಬೇಕು.
- ಪ್ರಸ್ತುತ ಕಲಿಕಾ ಚೇತರಿಕೆ ಅಭ್ಯಾಸ ಪುಸ್ತಕಗಳನ್ನು ಪರಿಣಾಮಕಾರಿ ಸಂಪನ್ಮೂಲವಾಗಿ ತರಗತಿ ಪ್ರಕ್ರಿಯೆಯಲ್ಲಿ ಬಳಸುವುದರಿಂದ ಮಕ್ಕಳಲ್ಲಿ ಅಪೇಕ್ಷಿತ ಕಲಿಕೆಯಾಗಲು ಸಾಧ್ಯ.

- ತರಗತಿ ಪ್ರಕ್ರೀಯೆಯಲ್ಲಿ ಎಲ್ಲಾ ಮಕ್ಕಳನ್ನು ತೊಡಗಿಸಿಕೊಳ್ಳವುದರಿಂದ ಮಾತ್ರ ಎಲ್ಲ ಮಕ್ಕಳಿಗೂ ಕಲಿಕಾಂಶ ಬರಲು ಸಾಧ್ಯ.

**ವಿಜ್ಞಾನ ತರಗತಿ ವೀಕ್ಷಣೆ:**

ವಿಜ್ಞಾನ ಶಿಕ್ಷಕರು ಸಸ್ಯಗಳಲ್ಲಿ ಸಂತಾನೋತ್ಪತ್ತಿ ಎಂಬ ವಿಷಯದ ಕುರಿತು ಚರ್ಚೆಯನ್ನು ಮಾಡುವ ಭಾಗವಾಗಿ ಮಕ್ಕಳಿಗೆ ಮೊದಲು ಕಲಿಕಾಂಶಕ್ಕೆ ಪೂರಕವಾಗಿ ಪ್ರಶ್ನೆಗಳನ್ನು ಕೇಳಿ ಮಕ್ಕಳು ಆ ಕಲಿಕಾಂಶದ ಕುರಿತು ಎಷ್ಟು ಪೂರ್ವ ಜ್ಞಾನವನ್ನು ಹೊಂದಿದ್ದಾರೆ ಎಂಬುದನ್ನು ತಿಳಿದು ನಂತರದಲ್ಲಿ ಮಾದರಿ ದಾಸವಾಳ ಹೂವಿನ ರಚನೆಗಳನ್ನೇ ಬಳಸಿಕೊಂಡು ಚರ್ಚೆಯನ್ನು ಮುಂದುವರೆಸಿದರು. ಮುಖ್ಯವಾಗಿ ಹೂವಿನ ಭಾಗಗಳಾದ ಗಂಡು ಭಾಗದ ಕೇಸರ, ಹೆಣ್ಣು ಭಾಗವಾದ ಶಲಾಕಾಗ್ರ, ಶಲಾಕಾನಳಿಕೆ ಕುರಿತು ಪ್ರಾತ್ಯಕ್ಷಿಕೆಯನ್ನು ನೀಡಿದರು.

ಜೊತೆಗೆ ಪೂರಕವಾದ ಚರ್ಚೆಗಳಾದ ಏಕಲಿಂಗಿ, ದ್ವಿಲಿಂಗಿ, ಲೈಂಗಿಕ ಸಂತಾನೋತ್ಪತ್ತಿ, ಅಲೈಂಗಿಕ ಸಂತಾನೋತ್ಪತ್ತಿ, ಪರಾಗಸ್ಪರ್ಷ, ಪರಾಗರೇಣು, ನಿಶೇಚನ, ಯುಗ್ಮಜ ಉಂಟಾಗುವಿಕೆ ಮತ್ತು ಪರಿಸರದಲ್ಲಿ ಬೀಜ ಪ್ರಸರಣೆಯ ವಿಧಾನಗಳು ಮಾಧ್ಯಮಗಳ ಕುರಿತು ಚರ್ಚಿಸಿದರು.

ದಿನ ನಿತ್ಯದಲ್ಲಿ ಹೂಗಳ ಬಳಕೆ ಎಲ್ಲಿ ಎಲ್ಲಿ ಮಾಡಲಾಗುತ್ತದೆ ಎಂಬುದನ್ನು ಚರ್ಚಿಸುತ್ತಾ ಅದರ ಮಹತ್ವದ ಕುರಿತು ತಿಳಿಸಿದರು. ಉದಾ: ಯುಗಾದಿ ದಿನದಂದು ಮಾವಿನ ಹೂ ಮತ್ತು ಬೇವಿನ ಹೂ ಬಳಸಿಕೊಂಡು ಬೇವನ್ನು ತಯಾರಿಸುವ ಕುರಿತು, ಗುಲಾಬಿ ಹೂಗಳನ್ನು ಬಳಸಿಕೊಂಡು ಗುಲ್‌ಕನ್ ಬಳಕೆ ಮತ್ತು ವಿವಿಧ ಹೂಗಳನ್ನು ದೇವರಿಗೆ, ಹೆಣ್ಣು ಮಕ್ಕಳು ತೊಡುವುದನ್ನು ವಿವರಿಸಿದರು.

ವಿಜ್ಞಾನ ಬೋಧನೆಯ ಹೆಚ್ಚಾಗಿ ಪ್ರಾಯೋಗಿಕವಾಗಿ ಶಿಕ್ಷಕರು ಮಾಡಿರುವುದು, ಮಕ್ಕಳಿಗೆ ತಮ್ಮ ದೈನಂದಿನ ಜೀವನದಲ್ಲಿ ಬಳಸಲ್ಪಡುವ ಉದಾಹರಣೆಗಳನ್ನು ಬಳಸುತ್ತಿದ್ದುದರಿಂದ ಮಕ್ಕಲ ಪ್ರತಿಕ್ರಿಯೆ ಉತ್ತಮವಾಗಿರುವುದನ್ನು ಗಮನಿಸಲಾಯಿತು.

**English class 6th observation:**

English teacher at this school who regularly attends our CSM and workshops. On the day of observation, for class 6 he was engaging the concept of “punctuation marks”. Here are the following observations made,

- The teacher had prepared the punctuation chart for this class, this shows that he had prior preparation to engage the children which is appreciable.
- The teacher was using English instructions during the class with gestures.

**To be improved areas discussed with the teacher**

- The teacher was asked to make use of the ENK materials to facilitate learning among Level 1 and Level 2 learners.
- The learning was effective in a few students they need more challenging work hear after as their learning phase is fast.
- The teacher was asked to conduct class with contextual examples that would connect learners with the learning concepts.
- The constructive feedback for most of the learners was to improve their handwriting, the feedback must be related to learning progression along with writing. A few examples of writing feedback was discussed.

- In a nutshell: The learning of English Language in grade 6 is happening with a handful of learners, baring them remaining learners have not reached FL in English.
- Class 4th Observation Bheemanna was the teacher for this class too. The teacher was trying to interact with children through echo questions.

**Areas of improvements discusses with teacher**

- The teacher must make use of ENK charts and other materials as 4th and 5th KC is primarily based on ENK.
- Level wise teaching was missing, all the learners were involved at a time with the same concept.
- Teacher has not introduced learners to the alphabet sounds.
- The teacher completes on story/concept in 40 mis which is too fast for the learners.
- Homework was monotonous which can be replaced with exploration-based homework.

**Nali kali Classroom:**

- The teacher was engaging the learners in rhyme recitation, she did it well with the help of facial expression and voice modulation. But the teacher would lose her temper and hit on child's head at the back. This was discussed with the teacher; the consequences of hitting / corporal punishment was briefed.
-

**ತರಗತಿ ವೀಕ್ಷಣೆಯ ಜೊತೆಗೆ ಶಾಲೆಯ ವಿವಿಧ ದಾಖಲೆಗಳನ್ನು ಪರಿಶೀಲಿಸಿ ಸೂಚಿಸಿರುವ ಸಲಹೆಗಳು:**

- ಸರಕಾರದ ವಿವಿಧ ಸೌಲಭ್ಯಗಳಾದ, ಪಠ್ಯಪುಸ್ತಕ, ಶೂ ಮತ್ತು ಸಾಕ್ಸ, ಸಮವಸ್ತ್ರ ಇತ್ಯಾದಿಗಳನ್ನು ಮಕ್ಕಳಿಗೆ ಪೂರೈಸಿದ ನಂತರ ವರ್ಗ ಶಿಕ್ಷಕರು, ಮುಖ್ಯಗುರುಗಳು ಸಹಿಯೊಂದಿಗೆ ದಾಖಲೆಗಳನ್ನು ವ್ಯವಸ್ಥಿತವಾಗಿ ಇಡುವುದು.
- ಮಕ್ಕಳ ಹಾಜರಿ ಪುಸ್ತಕದಲ್ಲಿ ಮಾಹೇವಾರು ಕ್ರೋಢಿಕರಣ ಮತ್ತು ವರ್ಗ ಶಿಕ್ಷಕರ ಮತ್ತು ಮುಖ್ಯ ಗುರುಗಳ ಸಹಿ ಇರಬೇಕು.
- ಮಕ್ಕಳಿಗೆ ಗೃಹಪಾಠವನ್ನು ನಿರಂತರವಾಗಿ ಕೊಡುವುದು ಹಾಗೂ ಅದನ್ನು ವೀಕ್ಷಿಸಿ ಮಕ್ಕಳಿಗೆ ಸೂಕ್ತವಾದ ಸಲಹೆಗಳನ್ನು ನೀಡಬೇಕು.
- ಮಕ್ಕಳ ದಾಖಲಾತಿ ನಮೂನೆಯನ್ನು ವ್ಯವಸ್ಥಿತವಾಗಿ ನಮೂದಿಸುವುದ, ಮಕ್ಕಳ ಹೆಸರು, ತಂದೆ ತಾಯಿ ಹೆಸರು, ಅಡ್ಡ ಹೆಸರು ಬಳಸುತ್ತಿದ್ದರೆ, ಜನ್ಮ ದಿನಾಂಕ, ಯಾವುದೇ ತಿದ್ದುಪಡಿ ಮಾಡದೆ ವ್ಯವಸ್ಥಿತವಾಗಿರಬೇಕು.
- ಮಕ್ಕಳು ಪರೀಕ್ಷೆ ಬರೆದಿರುವ ಉತ್ತರ ಪತ್ರಿಕೆಗಳ ಮೌಲ್ಯಮಾಪನ ಸರಿಯಾಗಿ ಅಂಕಗಳನ್ನು ನಮೂದಿಸುವುದು. ಪ್ರತಿಯೊಂದು ಉತ್ತರಕ್ಕೆ ಪ್ರತ್ಯೇಕವಾಗಿ ಅಂಕಗಳನ್ನು ನಮೂದಿಸಿ ಕ್ರೋಡೀಕರಿಸುವುದು.

- ವೇಳಾಪಟ್ಟಿಯಂತೆ ತರಗತಿ ಪ್ರಕ್ರಿಯೆಯಲ್ಲಿ ಎಲ್ಲಾ ಶಿಕ್ಷಕರು ತೊಡಗಿಕೊಳ್ಳವುದು, ಇದನ್ನು ಮುಖ್ಯ ಗುರುಗಳು ಅನುಪಾಲನೆ ಮಾಡುವುದರ ಜೊತೆಗೆ ಅವರು ಸಹ ಬೋಧನೆ ತರಗತಿಯಲ್ಲಿ ಮಕ್ಕಳೊಂದಿಗೆ ತೊಡಗಿಸಿಕೊಳ್ಳವುದು.
- ಶಾಲಾಭಿವೃದ್ದಿ ಯೋಜನೆ ಹಾಗೂ ಶಾಲಾ ಶೈಕ್ಷಣಿಕ ಯೋಜನೆ ಶಾಲಾ ಆರಂಭದಲ್ಲಿಯೇ ತಯಾರಿಸಿಕೊಂಡು ವರ್ಷಪೂರ್ತಿ ಅನುಪಾಲನೆ ಮಾಡಬೇಕು.

**ಕ್ಷೇತ್ರ ಸಮನ್ವಯಾಧಿಕಾರಿಗಳ ಅಭಿಪ್ರಾಯ:**

ಈ ಶಾಲೆಯಲ್ಲಿ ಮಕ್ಕಳ ಸಂಖ್ಯೆ ಉತ್ತಮವಾಗಿರುವುದು ಅಭಿನಂದನೀಯ. ಪ್ರತಿ ವರ್ಷವೂ ಸರಕಾರಿ ಶಾಲೆಗಳಲ್ಲಿ ಓದುವ ಮಕ್ಕಳ ಸಂಖ್ಯೆ ಹೆಚ್ಚಾಗಬೇಕು, ಇದಕ್ಕೆ ಒಂದೇ ಪರಿಹಾರ ನಮ್ಮ ಕಲಿಕೆಯ ಗುಣಮಟ್ಟವನ್ನು ಹೆಚ್ಚಿಸಿಕೊಳ್ಳವುದಾಗಿದೆ.

ಈ ಶಾಲೆಯಲ್ಲಿ ಮೂಲಭೂತ ಅವಶ್ಯಕತೆಗಳಾದ ತರವಾರು ಕೋಣೆಗಳು, ಶೌಚಾಲಯ, ಶಿಕ್ಷಕರ ಸಂಖ್ಯೆ, ಇವುಗಳ ನಡುವೆಯೋ ಶಿಕ್ಷಕರ ಪ್ರಯತ್ತ ಉತ್ತಮವಾಗಿದೆ. ಅದಾಗ್ಯೂ ಸಹ ಮಕ್ಕಳಲ್ಲಿ ಭಾಷೆ ಮತ್ತು ಗಣಿತ ವಿಷಯಗಳ ಮೂಲಭೂತ ಸಾಮರ್ಥ್ಯಗಳ ಅಭಿವೃದ್ಧಿಗೆ ಎಲ್ಲಾ ಶಿಕ್ಷಕರೂ ಪ್ರಯತ್ನಿಸುವುದು ಅವಶ್ಯಕವಾಗಿದೆ. ಈಗಾಗಲೇ ಮೌಖಿಕವಾಗಿ ಪ್ರತಿಯೊಂದು ತರಗತಿ ವೀಕ್ಷಣೆ ಮಾಡಿ ಸಂಪನ್ಮೂಲ ವ್ಯಕ್ತಿಗಳ ತಂಡ ನೀಡಿರುವು ಸಲಹೆಗಳನ್ನು ಮುಂದಿನ ದಿನಗಳಲ್ಲಿ ವ್ಯವಸ್ಥಿತವಾಗಿ ಅನುಪಾಲನೆ ಮಾಡಿ ಶಾಲೆಯ ಶೈಕ್ಷಣಿಕ ಅಭಿವೃದ್ಧಿಗೆ ಶ್ರಮಿಸಲು ಸೂಚಿಸಿದರು.

ಶೈಕ್ಷಣಿಕ ಅಧಿಕಾರಿಗಳ ನಡೆ ಶಾಲೆಯ ಕಡೆ ಈ ಕಾರ್ಯಕ್ರಮದಲ್ಲಿ ಭಾಗವಹಿಸಿರುವ ಪಂಡಿತ ನಿಂಬೂರ ಕ್ಷೇತ್ರ ಸಮನ್ವಯಾಧಿಕಾರಿಗಳು, ಶಿಕ್ಷಣ ಸಂಯೋಜಕರಾದ ಶಿವಪುತ್ರಪ್ಪ, ಬಿ.ಆರ್.ಪಿ ಖಾದರಪಟೇಲ್, ಸಿ.ಆರ್.ಪಿಗಳಾದ ಪ್ರಶಾಂತ ಅಕ್ಕಸಾಲಿಗರ, ಶಿವುಕುಮಾರ ಕಮತಗಿ, ಚೆನ್ನಪ್ಪ ಕ್ಯಾದಗಿ, ರಾಮಣ್ಣ ಗುಂಜಾಳ, ಶಿವುಕುಮಾರ ಹಿರೇಮಠ, ಅಜೀಮ್ ಪ್ರೇಮಜೀ ಫೌಂಡೇಷನ ಸಂಪನ್ಮೂಲ ವ್ಯಕ್ತಿಗಳಾದ ಕೃಷ್ಣಯ್ಯ, ಲೋಹಿತಾಶ್ವ ವಿನೋದಕುಮಾರ, ತೇಜಸ್ವಿನಿ, ಇಲ್ಯಾಸ ಪರ್ವೇಜ ಪರಮಣ್ಣ, ಅನ್ವರ ಎಮ್, ಭಾಗವಹಿಸಿದ್ದರು.



## ಉತ್ತಮವಾದ ಅಂಶಗಳನ್ನು ಹೇಳಿ ಆಗಿದೆ, ಆಚರಣೆ ಯಾವಾಗ?

**Adiveppa Raichur**

“ಮಕ್ಕಳು ಶಿಕ್ಷಕರ  ತಟ್ಟೆಯನ್ನು ತೋಳೆದರೆ ಏನು ಸಮಸ್ಯೆ? ಹೌದಾ ಹಾಗಾದರೆ ನಿಮ್ಮ ತಟ್ಟೆಯನ್ನು ನೀವೇ ತೋಳೆದರೆ ಏನು ಸಮಸ್ಯೆ ? ನಿಮ್ಮ ಕೈಗಳು ಚೆನ್ನಾಗಿಲ್ಲವೇ? ಈ ತರಹದ ಆಲೋಚನೆಗಳಿಗೆ ಹಾಗೂ ಆಚರಣೆಗಳಿಗೆ ಯಾರು ಅವಕಾಶ ನೀಡಿದ್ದು? ಇದನ್ನು ಯಾರು ಸರಿ ಮಾಡಬೇಕು ? ಇದಕ್ಕೆ ಸಂವಿಧಾನ ತಿದ್ದುಪಡಿ ಮಾಡಬೇಕೆ? ಇಲ್ಲ ಇಲ್ಲ ಇದಕ್ಕೆ ಪರಿಹಾರ ನಮ್ಮಲ್ಲೆ ಇದೆ, ನಾವು ಕೆಲಸ ಮಾಡುವ ಶಾಲೆಯಲ್ಲಿ ಹಾಗೂ ಮನೆಯಲ್ಲಿ ಇವುಗಳನ್ನು ಆಚರಣೆ ಮಾಡಿದರೆ ಖಂಡಿತವಾಗಿ ಎಲ್ಲವೂ ಸರಿ ಹೋಗುತ್ತವೆ, ಆವಾಗ ನಮ್ಮ ಮಕ್ಕಳು ಮನೆಯಲ್ಲಿ/ಶಾಲೆಯಲ್ಲಿ ಲಿಂಗ ಬೇಧವಿಲ್ಲದೆ ಸಮಾನವಾಗಿ ಬಾಳಲು ಸಾಧ್ಯವಾಗುತ್ತದೆ. ”

ಈ ತರಹದ ಮಾತುಗಳು ನಮ್ಮ ಶಿಕ್ಷಕರು ಚಹಾ ವಿರಾಮದಲ್ಲಿ ಪರಸ್ಪರರು ಹಾಸ್ಯ ರೂಪದಲ್ಲಿ ಹಂಚಿಕೊಳ್ಳುತ್ತಿದ್ದರು. ಇದು ಮೇಲ್ನೋಕ್ಕೆ ಹಾಸ್ಯ ಎಂದು ಕಂಡು ಬಂದರು ಅದರಲ್ಲಿ ಒಂದಿಷ್ಟು ಕಳಕಳಿ ಇತ್ತು. ಗಂಡು ಮಕ್ಕಳು ಮತ್ತು ಹೆಣ್ಣು ಮಕ್ಕಳ ನಡುವೆ ಯಾವುದೆ ಬೇಧ ಭಾವ ಇರಬಾರದು ಮತ್ತು ಸಮಾಜದ ಅಭಿವೃದ್ದಿಗೆ  ಇಬ್ಬರ ಬೆಳವಣಿಗೆ ಅಷ್ಟೆ ಮುಖ್ಯ  ಎಂಬ ಭಾವನೆ ಇತ್ತು. ಚಹಾ ವಿರಾಮದ ನಂತರ  ಸರಕಾರಿ ಕಿರಿಯ ಪ್ರಾಥಮಿಕ ಶಾಲೆಯ ಗುಂಡಪ್ಪ ಶಿಕ್ಷಕರು ತಮ್ಮ ವಿಷಯ ಮಂಡನೆ ಸಮಯದಲ್ಲಿ ತಮ್ಮ ಶಾಲೆಯ ಉದಾಹರಣೆ ನೀಡಿದ್ದು ತುಂಬಾ ವಿಶೇಷವಾಗಿತ್ತು “ ನಾನು ಇನ್ನು ಮುಂದೆ ನನ್ನ ತಟ್ಟೆಯನ್ನು ನಾನೆ  ತೊಳಿಯುತ್ತೇನೆ,  ನಾನು ಊಟ ಮಾಡಿದ  ತಟ್ಟೆಯನ್ನು ನಾನು ತೋಳಿಯಬೇಕು ಅದು ಸರಿಯಾದದು ಮತ್ತು ನ್ಯಾಯಯುತವಾದದು ನನ್ನ ಏಂಜಲಿನ ತಟ್ಟೆಯನ್ನು ನನ್ನ ವಿದ್ಯಾಥ್ರಿನಿಯರು ತೋಳೆಯುವುದು ನ್ಯಾಯ ಸಮ್ಮತವಲ್ಲ” ಈ ತರಹದ ಆಚರಣೆಗಳು ಸಮಾಜದ ಬೆಳವಣಿಗೆಯ ದೃಷ್ಟಿಯಿಂದ ಅಪಾಯಕಾರಿ ಎಂಬುದು ನಮಗೆಲ್ಲರಿಗೂ ಗೋತ್ತು ಹಿಗಾಗಿಯೇ ಈ ತರಹದ ಆಚರಣೆಗಳನ್ನು ಸರಿಮಾಡುವುದು ನಮ್ಮೆಲ್ಲರ ಜವಾಬ್ದಾರಿ ಎನ್ನುವ ಮೂಲಕ ಅವರ ವಿಷಯ ಮಂಡನೆ ಮುಕ್ತಾಯಗೊಂಡಿತು.

ಈ ತರಹದ ಆಲೋಚನೆಗಳಿಗೆ ಅವಕಾಶ ಸಿಕ್ಕಿದ್ದು ನವೆಂಬರ್ ೨೬, ೨೦೨೨ ರಂದು ಮಾನವಿಯಲ್ಲಿ ನಡೆದ ತಾಲೂಕು ಮಟ್ಟದ ವಿಚಾರ ಸಂಕಿರಣದಲ್ಲಿ. ಮೂರು ಜನ ಶಿಕ್ಷಕರು ಸಂವಿಧಾದ ಮೌಲ್ಯಗಳು ಮತ್ತು ಲಿಂಗಸೂಕ್ಷ್ಮತೆ ,  ಧರಮ ಎಂಬ ವಿಷಯದ ಕುರಿತು ವಿಷಯ ಮಂಡನೆ ಮಾಡಿದರು. ಸಂಪನ್ಮೂಲ ವ್ಯಕಿಯಾಗಿ ಡಿ ಎಸ್ ಇ ಆರ್ ಟಿಯಿಂದ ವಿಶ್ವನಾಥ ಅವರು ಭಾಗವಹಿಸಿದ್ದರು. ಇಡಿ ವಿಚಾರ ಸಂಕಿರಣ ಶಾಲೆ ಮತ್ತು ಕುಟುಂಬದಲ್ಲಿ ಲಿಂಗ ತಾರತಮ್ಯ ಹಾಗೂ ಲಿಂಗಸೂಕ್ಷ್ಮತೆಯ ಕುರಿತು ನಮಗಿರಬೇಕಾದ ಕಾಳಜಿ ಸುತ್ತ ಕೇಂದ್ರೀಕೃತವಾಗಿತ್ತು. ಇದಕ್ಕೆ ಪೂರಕವಾಗಿ ಲಿಂಗಸೂಕ್ಷ್ಮತೆಯ ಕುರಿತಾದ ಪೋಸ್ಟರ್‌ಗಳು ಚರ್ಚೆಯ ಪ್ರಕರತೆಯನ್ನು ಹೆಚ್ಚಿಸುವದರ ಜೋತೆಗೆ ದಿನ ನಿತ್ಯ ನಮಗೆ ಅರಿವಿಲ್ಲದಂತೆ ನಡೆಯುವ ಅನೇಕ  ಲಿಂಗ ಸಂಬಂಧಿತ ತಾರತಮ್ಯಗಳನ್ನು ಸರಿಪಡಿಸುವ ನಿಟ್ಟಿನಲ್ಲಿ ಪ್ರಾಮಾಣಿಕ  ಪ್ರಯತ್ನಗಳನ್ನು ಹಂಚಿಕೊಳ್ಳಲು ಎಲ್ಲರಿಗೂ  ಪ್ರೇರಣೆ ನೀಡಿತು.

ಸಂವಿಧಾನದ ಆಶಯಗಳನ್ನು ಪ್ರಾಮಾಣಿಕವಾಗಿ ಜಾರಿಗೆ ತರುವ ಸಂಸ್ಥೆಗಳಲ್ಲಿ  ಶಾಲೆ ಮುಂಚೂಣಿಯಲ್ಲಿ ಬಂದು ನಿಲ್ಲುತ್ತದೆ, ದೇಶದ ಎಲ್ಲ ಜನರು ಶಾಲೆಯ ಮೂಲಕ ಸಮಾಜಕ್ಕ ಬರುವದರಿಂದ, ಶಾಲಾ ಪ್ರಕ್ರಿಯೆಲ್ಲಾದ ಬದಲಾವಣೆಗಳು ನೇರವಾಗಿ ಸಮಾಜದ ಬದಲಾವಣೆಯಲ್ಲಿ ಪ್ರಮುಖ ಪಾತ್ರವಹಿಸುತ್ತವೆ. ಸಂವಿಧಾನದ ಆಶಯಗಳನ್ನು ಮನವರಿಕೊಂಡಿರುವುದು ಅಂತಿಮವಾಗಿ ಗೊತ್ತಾಗುವುದು  ಆಚರಣೆಯ ಮೂಲಕ ಮಾತ್ರ. ಈ ಕೆಲಸವನ್ನು  ಪ್ರಜ್ಞಾಪೂರಕವಾಗಿ ಮಾಡಬೇಕು ಅಂದಾಗ ಮಾತ್ರ ನಾವು ಬದಲಾವಣೆಯನ್ನು  ಗುರುತಿಸಲು ಸಾಧ್ಯವಾಗುವುದು.

ನಾವು ಪ್ರಾಥಮಿಕ ಶಾಲೆಯಲ್ಲಿ ಓದುತ್ತಿದ್ದಾಗ ನಮ್ಮ ಶಿಕ್ಷಕರು ದಿನಕ್ಕೊಂದು ಒಳ್ಳೆಯ ಕೆಲಸವನ್ನು ಮಾಡಲು ಮತ್ತು ಮಾಡಿದ್ದನ್ನು ಬರೆದುಕೊಂಡು ಬರಲು ಹೇಳುತ್ತಿದ್ದರು. ಬರುದುಕೊಂಡು ಬಂದಿದ್ದನ್ನು  ಎಲ್ಲರ ಮುಂದೆ ಓದಲು ಹೇಳುತ್ತಿದ್ದರು, ಈ ಪ್ರಕ್ರಿಯೆಯಲ್ಲಿ ಪರಸ್ಪರರು ಸಾಕಷ್ಟು ಕಲೆತುಕೊಳ್ಳುತ್ತಿದ್ದೇವೆ, ನಮ್ಮ ಸಹಪಾಠಿಗಳು ಮಾಡಿದ ಒಳ್ಳೆಯ ಕೆಲಸಗಳು ನಮಗೆ ಇನ್ನು ಬೇರೆ ಬೇರೆ ತರಹದ ಉತ್ತಮ ಕೆಲಸಗಳನ್ನು ಮಾಡಲು ಪ್ರೇರಣೆ ನೀಡುತ್ತಿದ್ದವು. ಶಿಕ್ಷರು  ದಿನಾಲು ಕೇಳುತ್ತಾರೆ

ಎನ್ನುವ ಕಾರಣಕ್ಕಾಗಿ ನಾವು ಸ್ವಯಂ ಪ್ರೇರಿತರಾಗಿ ಕೆಲಸವನ್ನು ಹುಡುಕಿ ಮಾಡುವುದು ಮತ್ತು ಮಾಡಿದ್ದನ್ನು ಎಲ್ಲರ ಮುಂದೆ ಹಂಚಿಕೊಳ್ಳುವುದು ದಿನ ನಿತ್ಯದ ಕಾಯಕವಾಗಿತ್ತು. ಈ ಪ್ರಕ್ರಿಯೆ ನಮ್ಮಲ್ಲಿ ಉತ್ತಮ ಆಲೋಚನೆಗಳು ರೂಡಿಸಿಕೊಳ್ಳಲು ಸಹಾಯಕವಾಗುವದರ ಜೋತೆಗೆ ಎಲ್ಲರಲ್ಲಿ ಉತ್ತಮವಾದುದನ್ನು ಹುಡುಕಲು ಮತ್ತು ಪರಸ್ಪರರು ಯಾವುದೆ ಧರಮ, ಜಾತಿ, ಲಿಂಗ ಬೇಧವಿಲ್ಲದೆ ಒಟ್ಟಾಗಿ ಬಾಳಲು ಸಾಧ್ಯವಾಯಿತು. ಯಾವ ಶಾಲೆ ಈ ತರಹದ ಆಚರಣೆಗಳನ್ನು ಮಕ್ಕಳಲ್ಲಿ ಬೆಳೆಸುತ್ತದೆಯೋ ಆ ಮಕ್ಕಳು ಸಮಾಜದಲ್ಲಿ ತುಂಬಾ ಜವ್ವಾಬ್ದಾರಿಯುತವಾಗಿ ಬಾಳಲು ಸಾಧ್ಯವಾಗುತ್ತದೆ

# ಅಂಗನವಾಡಿ ಕೇಂದ್ರಗಳು: ಒಂದು ಅವಲೋಕನ

**ಡಾ. ಹಂದ್ರಾಳ ಗವಿಸಿದ್ದಪ್ಪ ಕೊಪ್ಪಳ.**

ಸಾಮಾಜಿಕ ಬದಲಾವಣೆಗೆ, ಸುಸ್ಥಿರ ಸಮಾಜಕ್ಕೆ, ರಾಷ್ಟ್ರದ ಅಭಿವೃದ್ಧಿಗೆ, ಉತ್ತಮ ನಾಗರಿಕರಾಗಿ ಬಾಳಲು ಶಿಕ್ಷಣ ಅತ್ಯಗತ್ಯ. ಉತ್ತಮ ಶಿಕ್ಷಣದಿಂದ ಸರ್ವೋತಮುಖ ಮತ್ತು ಸರ್ವಾಂಗೀಣ ಬೆಳವಣಿಗೆ ಸಾಧ್ಯ. ಅಂತಹ ಉತ್ತಮ ಶಿಕ್ಷಣವನ್ನು ಪೂರ್ವ ಪ್ರಾಥಮಿಕ ಕೇಂದ್ರಗಳಿಂದ ಆರಂಭಿಸಿದರೆ ನಮ್ಮ ಕನಸುಗಳು ನನಸಾಗಲು, ನಾವು ಅಂದುಕೊಂಡಂತೆ ದೇಶದ ಅಭಿವೃದ್ಧಿ ನೋಡಲು ಸಾಧ್ಯವಾಗುತ್ತದೆ. ಎಲ್ಲಾ ಮಕ್ಕಳಿಗೂ ಉತ್ತಮ ಪೌಷ್ಠಿಕ ಆಹಾರದ ಜೊತೆಗೆ ಉತ್ತಮ ಶಿಕ್ಷಣ ಸಿಗಬೇಕೆಂಬ ಆಶಯದಲ್ಲಿ ಸರಕಾರ ನವೀನ ಯೋಜನೆಗಳನ್ನು ರೂಪಿಸುತ್ತಾ ಬಂದಿದೆ. ಆ ನಿಟ್ಟಿನಲ್ಲಿ ನಿರಂತರ ಕೆಲಸಗಳೂ ಸಾಗುತ್ತಿವೆ. ಆದರೆ ಆ ಕೆಲಸಗಳು ಪರಿಪೂರ್ಣವಾಗಬೇಕಾದರೆ ಅವುಗಳ ಸ್ಥಿತಿಗತಿಗಳನ್ನು ಅರ್ಥಮಾಡಿಕೊಳ್ಳುವುದು ಇಂದಿನ ಜರೂರಾಗಿದೆ. ಕಳೆದ ತಿಂಗಳಿನಿಂದ ಕೆಲವು ಅಂಗನವಾಡಿಗಳಿಗೆ ಭೇಟಿಮಾಡಿ ಅಲ್ಲಿಯ ಸ್ಥಿತಿಗತಿಗಳನ್ನು, ಕಲಿಕೆಗೆ ಸಂಬಂಧಿಸಿದ ಕಾರ್ಯಚಟುವಟಿಕೆಗಳನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾಯಿತು. ಭೇಟಿಯ ಸಂದರ್ಭದಲ್ಲಿ ನನಗಾದ ಕೆಲವು ಅನುಭವಗಳನ್ನು ತಮ್ಮ ಮುಂದೆ ಈ ಬರೆಹದ ರೂಪದಲ್ಲಿ ತರಬಯಸುತ್ತೇನೆ.

**ಅಂಗನವಾಡಿ ಕೇಂದ್ರಗಳ ಸ್ಥಿತಿಗತಿಗಳು:**

ಅಂಗನವಾಡಿಯ ಸ್ವರೂಪ, ಅಲ್ಲಿ ನಡೆಯುವ ಚಟುವಟಿಕೆಗಳು, ಕಾರ್ಯನಿರ್ವಹಿಸುವ ಕಾರ್ಯಕರ್ತೆಯರು, ಕಾರ್ಯಕರ್ತೆಯರಿಗೆ ಹಂಚಿಕೆ ಮಾಡಲಾದ ಕೆಲಸಗಳು, ಮಕ್ಕಳಿಗೆ ನೀಡುವ ಉಪಹಾರಗಳು, ಕಲಿಕೆಗೆ ಸಂಬಂಧಿಸಿದ ಕೇಂದ್ರಗಳಲ್ಲಿರುವ ಕಲಿಕೋಪಕರಣಗಳು, ಆಟಿಕೆಗಳು, ವೇಳಾಪಟ್ಟಿ, ಕೊಠಡಿಗಳು, ಸ್ವಚ್ಛತೆ, ಕಲಿಕಾ ಚಟುವಟಿಕೆಗಳನ್ನು ಗಮನಿಸಿದಾಗ ಮಿಶ್ರವಾದ ಅನುಭವಗಳು ನನಗಾದವು. ಈವರೆಗೂ ಅವಲೋಕಿಸಿದ ಅಂಗನವಾಡಿ ಕೇಂದ್ರಗಳಲ್ಲಿ ಕೆಲವು ಕೇಂದ್ರಗಳಿಗೆ ಸ್ವಂತ ಕಟ್ಟಡಗಳಿಲ್ಲ. ಕೆಲವು ಕೇಂದ್ರಗಳಿಗೆ ಸ್ವಂತ ಕಟ್ಟಡಗಳಿದ್ದರೂ ಹೇಳಿಕೊಳ್ಳುವಂಥ ಸ್ಥಿತಿಯಲ್ಲಿಲ್ಲ. ಇದ್ದದುರಲ್ಲೇ ಕೆಲವು ಕೇಂದ್ರಗಳು ಉತ್ತಮ ಸ್ಥಿತಿಯಲ್ಲಿರುವುದನ್ನು ಗಮನಿಸಲಾಯಿತು. ಮಕ್ಕಳ ಕಲಿಕಾ ವಿಚಾರಕ್ಕೆ ಬಂದಾಗ ಕೆಲವು ಕೇಂದ್ರಗಳಲ್ಲಿ ದಿನನಿತ್ಯ ವೇಳಾಪಟ್ಟಿಯಂತೆ ದಿನವಹಿ ಚಟುವಟಿಕೆಗಳು ಸಾಗುತ್ತಿವೆ. ಇನ್ನು ಕೆಲವು ಕೇಂದ್ರಗಳಲ್ಲಿ ಪೌಷ್ಠಿಕಂಶಗಳನ್ನು ನೀಡುವುದರಲ್ಲಿ, ಮತ್ತು ಇತರೆ ಕೆಲಸಗಳಲ್ಲಿ ಹೆಚ್ಚು ತೊಡಗಿಸಿಕೊಂಡಿರುವುದನ್ನು ಗಮನಿಸಲಾಯಿತು. ಇನ್ನು ಕೆಲವು ಕೇಂದ್ರಗಳಲ್ಲಿ ಯಾವುದೇ ಚಟುವಟಿಕೆಗಳು ಅಂದುಕೊಂಡಷ್ಟು ಮಟ್ಟಿಗೆ ನಡೆಯದೆ ಯಾಂತ್ರಿಕವಾಗಿ ಕಾರ್ಯನಿರ್ವಹಿಸುವುದನ್ನೂ ಅವಲೋಕಿಸಲಾಯಿತು. ಈ ಹಿನ್ನೆಲೆಯಲ್ಲಿ ಗಮನಿಸಿದಾಗ ಸಂಬಂಧಪಟ್ಟ ಇಲಾಖೆಗಳು ಮುತುವರ್ಜಿವಹಿಸಿ ಕೆಲಸ ನಿರ್ವಹಿಸಬೇಕು ಎನ್ನುವುದು ಮೇಲ್ನೋಟಕ್ಕೆ ಎದ್ದು ಕಾಣುವ ವಿಷಯ. ಉತ್ತಮವಾದ ಕೇಂದ್ರಗಳಿದ್ದರೆ ಅಲ್ಲಿ ನಡೆಯುವ ಚಟುವಟಿಕೆಗಳ ಸ್ವರೂಪ ಭಿನ್ನವಾಗಿರುತ್ತದೆ ಎನ್ನುವುದು ನನ್ನ ನಂಬಿಕೆ. ನಮಗೆ ಗೊತ್ತಿರುವ ಹಾಗೆ ಉತ್ತಮ ಪರಿಸರದಿಂದ ಎಲ್ಲವನ್ನೂ ನಿರ್ಮಿಸಲು ಸಾಧ್ಯ. ಅಂತಹ ಕೇಂದ್ರಗಳು ಎಲ್ಲವೂ ಆಗಬೇಕೆಂಬುದು ನಮ್ಮ ಆಶಯ. ಈ ಮೇಲಿನ ಅಂಶಗಳನ್ನು ಗಮನಿಸಿದಾಗ ಮಕ್ಕಳ ಕಲಿಕೆಗೆ ಪೂರಕ ವಾತಾವರಣ ಬಹುಮುಖ್ಯ ಎನ್ನವುದು ನನ್ನ ಗಮನಕ್ಕೆ ಬಂದಿದೆ.

**ಮಕ್ಕಳ ಕಲಿಕೆಗೆ ಪೂರಕವಾದ ಕೇಂದ್ರಗಳು:**

ಇದುವರೆಗೂ ಭೇಟಿನೀಡಿದ ಕೇಂದ್ರಗಳಲ್ಲಿ ಕೆಲವೇ ಕೆಲವು ಕೇಂದ್ರಗಳು ಮಕ್ಕಳ ಕಲಿಕೆಗೆ ಪೂರಕವಾಗಿ ಕಾರ್ಯಚಟುವಟಿಕೆಗಳನ್ನು ನಿರ್ವಹಿಸಿರುವುದುನ್ನು ಗಮನಿಸಲಾಗಿದೆ. ಈ ಕೇಂದ್ರಗಳಲ್ಲಿ ನಿಗದಿತವಾಗಿ ಮಕ್ಕಳ ಕಲಿಕೆಗೆ ದಿನವಹಿ ಏನೇನು ಚಟುವಟಿಕೆಗಳನ್ನು ಮಾಡಿಸಬೇಕೆಂದು ಇಲಾಖೆ ನೀಡಿದ ವೇಳಾಪಟ್ಟಿಯಂತೆ ಕೆಲಸಗಳು ಜರುಗುತ್ತಿವೆ. ಪ್ರಾರ್ಥನೆಯಿಂದ ಹಿಡಿದು ಮಕ್ಕಳು ಮನೆಗೆ ಹೋಗುವವರೆಗೂ ದಿನದ ನಿಗತದಿತ ಚಟುವಟಿಕೆಗಳನ್ನು

ಹಮ್ಮಿಕೊಳ್ಳುವುದನ್ನು ಕಂಡಿದ್ದೇನೆ. ಈ ಕೇಂದ್ರಗಳಲ್ಲಿ ಭೇಟಿನೀಡಿದ ಸಂದರ್ಭದಲ್ಲಿ ಮಕ್ಕಳ ಜೊತೆಗೆ ಸಂವಾದ, ಚರ್ಚೆ, ಆಟಗಳಲ್ಲಿ, ಹಾಡು ಹೇಳುವುದರಲ್ಲಿ ಭಾಗವಹಿಸಿದಾಗ ಅತೀವ ಆನಂದಪಟ್ಟದ್ದು ಉಂಟು. ಇನ್ನು ಇಂತಹ ಚಟುವಟಿಕೆಗಳಲ್ಲಿ ಮಕ್ಕಳು ಭಾಗವಹಿಸಿ ಆನಂದಪಡುವ ಖುಷಿ ಹೇಳತೀರದು. ವಿಭಿನ್ನ ಸಮುದಾಯಗಳಿಂದ ಮಕ್ಕಳು ವಿವಿಧ ಆಲೋಚನೆಗಳನ್ನು, ಅನುಭವಗಳನ್ನು ಹೊತ್ತುಕೊಂಡು ಅಂಗನವಾಡಿ ಕೇಂದ್ರಗಳಿಗೆ ಬರುತ್ತಾರೆ. ಪ್ರತೀ ಮಗುವಿನ ಅನುಭವಗಳು, ಆಲೋಚನೆಗಳು ವಿಭಿನ್ನ ವಿನೂತನ ಮತ್ತು ಮನೋಜ್ಞತೆಯಿಂದ ಕೂಡಿರುತ್ತವೆ. ಬಹುತೇಕ ಮಕ್ಕಳನ್ನು ಮಾತನಾಡಿಸಿದಾಗ ನಾವು ಕೇಳಿದ ಮಾಹಿತಿಗಿಂತ ಅಕ್ಕಪಕ್ಕದವರ ಮಾಹಿತಿ, ಊರಿನ ವಿಷಯಗಳು, ಮನೆಯಲ್ಲಿ ನಡೆದ ಜಗಳ, ಊರಿನಲ್ಲಿ ನಡೆದ ಜಾತ್ರೆಗಳ ಮಾಹಿತಿ, ಅವರಿಗಿಷ್ಟವಾದ ತಿನಿಸುಗಳು, ಆಟಗಳು, ಪ್ರಾಣಿ–ಪಕ್ಷಿಗಳು, ವಸ್ತುಗಳ ಕುರಿತು ನಿರ್ಭಯವಾಗಿ ಮಕ್ಕಳು ತಮ್ಮ ಅಭಿಪ್ರಾಯಗಳನ್ನು ಅವರ ತೊದಲು ನುಡಿಗಳಲ್ಲಿ ಹೇಳುವುದನ್ನು ಕೇಳಲು ನಮಗೆ ರೋಮಾಂಚನ ಎನಿಸುತ್ತದೆ. ಈ ರೀತಿಯ ವಾತಾವರಣ ಎಲ್ಲಾ ಕೇಂದ್ರಗಳಲ್ಲಿ ಇದ್ದರೆ ನಮ್ಮ ಶಿಕ್ಷಣದ ಗತಿಯೇ ಬದಲಾಗುತ್ತದೆ ಮತ್ತು ನಾವು ನಿರೀಕ್ಷೆ ಮಾಡುವ ಹಂತವನ್ನು ತಲುಪಲು ಸಾಧ್ಯ. ಮಕ್ಕಳು ಹಸಿಗೋಡೆ ಇದ್ದಹಾಗೆ ಆ ಗೋಡೆಗೆ ನಾವು ಒಗೆದ ಕಲ್ಲುಗಳು ಹೇಗೆ ಗೋಡೆಯಲ್ಲಿ ಸಿಕ್ಕಿಕೊಳ್ಳುತ್ತವೋ ಹಾಗೇನೇ ಆರಂಭಿಕ ಸಾಕ್ಷರತೆಗೆ ಸಂಬಂಧಿಸಿದಂತೆ ಮಕ್ಕಳಿಗೆ ನಾವು ಏನು ಹೇಳುತ್ತೇವೋ, ಏನು ಕಲಿಸುತ್ತೇವೋ, ಏನು ಚಟುವಟಿಕೆ ಮಾಡಿಸುತ್ತೇವೋ ಅವುಗಳೆಲ್ಲವನ್ನೂ ಗ್ರಹಿಸಿ, ಅವುಗಳ ಕುರಿತು ಮುಕ್ತವಾಗಿ ಮಾತನಾಡುತ್ತಾರೆ. ಅಷ್ಟೆಯಲ್ಲದೆ ಮಕ್ಕಳು ಕ್ರಿಯಾಶೀಲ ಸಂಶೋಧಕರು. ನಾವು ಹೇಳುವ ಮಾತಿನಿಂದ ಹಿಡಿದು ನಾವು ಮಾಡಿಸುವ ಚಟುವಟಿಕೆ, ಆಟ, ಕ್ರಾಫ್ಟ್ ಎಲ್ಲವನ್ನು ಸೂಕ್ಷ್ಮವಾಗಿ ವೀಕ್ಷಿಸಿ ಹೀಗೆ ಮಾಡಿದರೆ ಹೀಗಾಗುತ್ತದೆ ಎನ್ನುವ ಆಲೋಚನೆಯನ್ನು ಮಾಡಿ, ಆ ನೆಲೆಯಲ್ಲಿ ಅವರು ಚಟುವಟಿಕೆಗಳನ್ನು ಮಾಡಲು ಸಜ್ಜಾಗುತ್ತಾರೆ. ಕೆಲವು ಮಕ್ಕಳಿಗೆ ಸಹಕಾರ ನೀಡಿದರೆ ಆ ಮಕ್ಕಳನ್ನೂ ನಾವು ಹೆಚ್ಚು ಕಲಿಕೆಯಲ್ಲಿ ತೊಡಗಿಸಿಕೊಂಡರೆ ತುಂಬಾ ಆಸಕ್ತಿಯಿಂದ ಭಾಗವಹಿಸಿ ಕಲಿಕೆಯಲ್ಲಿ ತೊಡಗಿಸಿಕೊಳ್ಳುವುದನ್ನು ಕಂಡಿದ್ದೇನೆ. ನಾವು ಆರಂಭಿಕ ಶಿಕ್ಷಣದಲ್ಲಿ ಮುಖ್ಯವಾಗಿ ಗಮನಿಸುವ ಕ್ಷೇತ್ರಗಳಾದ ಆಲಿಸುವಿಕೆ, ಮಾತನಾಡುವಿಕೆ, ಓದುವಿಕೆ ಮತ್ತು ಬರೆಯುವಿಕೆ ಈ ನಾಲ್ಕು ಕ್ಷೇತ್ರಗಳಲ್ಲಿ ಮಗು ತೊಡಗಿಸಿಕೊಳ್ಳಬೇಕು. ಈ ಕಾರ್ಯ ಪೂರ್ವ ಪ್ರಾಥಮಿಕ ಕೇಂದ್ರಗಳಲ್ಲಿ ನಡೆಯುವ ಕಲಿಕಾ ಚಟುವಟಿಕೆಗಳಲ್ಲಿ ಸಮರ್ಥವಾಗಿ ಬಳಸಿಕೊಂಡು ಕಲಿಕಾ ಚಟುವಟಿಕೆಗಳನ್ನು ನಡೆಸಿದರೆ ಮಕ್ಕಳು ತಮ್ಮ ಮುಂದಿನ ಕಲಿಕೆಯಲ್ಲಿ ಯಾವುದೇ ಎಡರು ತೊಡರುಗಳನ್ನು ಅನುಭವಿಸದೇ ಕಲಿಕೆಯಲ್ಲಿ ನಿರಂತರವಾಗಿ ತೊಡಗಿಸಿಕೊಂಡು ಮುಂದೆ ಸಾಗುತ್ತಾರೆ. ನಂತರ ಮಕ್ಕಳ ವಯೋಮಾನ ಮತ್ತು ನಿಗದಿ ಆಯಾ ತರಗತಿಗಳಲ್ಲಿ ಮಕ್ಕಳು ಏನು ಕಲಿಯಬೇಕು? ಹೇಗೆ ಕಲಿಯಬೇಕು? ಎಷ್ಟು ಕಲಿಯಬೇಕು? ಇವೆಲ್ಲವನ್ನು ಖಂಡಿತವಾಗಿ ಕಲಿಯಲು ಸಮರ್ಥರಾಗುತ್ತಾರೆ ಎನ್ನುವುದು ನನ್ನ ಬಲವಾದ ನಂಬಿಕೆ.

**ಕಾರ್ಯಕರ್ತೆಯರಿಗೆ ತರಬೇತಿಗಳ ಅವಶ್ಯಕತೆ:**

ಇದುವರೆಗೂ ಅವಲೋಕಿಸಿದ ಹಾಗೆ ಅಂಗನವಾಡಿಯ ಕಾರ್ಯಕರ್ತೆಯರಿಗೆ ಕೆಲವು ತರಬೇತಿಗಳು ನಡೆದಿವೆ. ಆದರೂ ಅವರಿಗೆ ವಿಷಯವಾರು, ಚಟುವಟಿಕೆಗಳಾಧರಿತ, ವಿಷಯ ನಿರ್ವಹಣೆಗಳ ಕುರಿತಾದ ತರಬೇತಿಗಳ ಅವಶ್ಯಕತೆ ಇದೆ. ಉತ್ತಮ ತರಬೇತಿಗಳು, ಉತ್ತಮ ಚಟುವಟಿಕೆ ಪುಸ್ತಕಗಳು ಕೇಂದ್ರಗಳಲ್ಲಿ ಇದ್ದರೆ ಕಲಿಕೆಗೆ ಪೂರಕವಾದ ಚಟುವಟಿಕೆಗಳು ನಿರಂತರ ಸಾಗುತ್ತವೆ. ಕೆಲವು ಅಂಗನವಾಡಿ ಕಾರ್ಯಕರ್ತೆಯರನ್ನು ತರಬೇತಿಗಳ ಕುರಿತು ಕೇಳಿದಾಗ ನಮಗೆ ತರಬೇತಿಗಳು ಆಗಾಗ ಆದರೆ ಒಳ್ಳೆಯದು ಎನ್ನುವ ಅಭಿಪ್ರಾಯಗಳನ್ನು ತಿಳಿಸಿದರು. ನಾವು ಸಹ ಅಂಗನಾಡಿಗಳಲ್ಲಿ ನಡೆಯುವ ಚಟುವಟಿಕೆಗಳನ್ನು ಗಮನಿಸಿದಾಗ ಎಲ್ಲಾ ಚಟುವಟಿಕೆಗಳು ನಿಖರವಾಗಿ ಬಹುತೇಕ ಕಡೆ ನಡೆಯುತ್ತಿರಲಿಲ್ಲ. ಕೆಲವು ಹಾಡುಗಳನ್ನು ಹೇಳಿಸುವುದು, ಕೆಲವು ಆಟಗಳನ್ನು ಆಡಿಸುವುದು, ಕೆಲವೇ ಕೆಲವು ಚಟುವಟಿಕೆಗಳನ್ನು ಮತ್ತೆ ಮತ್ತೆ ಮಾಡಿಸುವುದನ್ನು ನೋಡಿದೆವು. ಆಗ ನಮಗೂ ಅನಿಸಿತು,

ಕಾರ್ಯಕರ್ತೆಯರಿಗೆ ಮಕ್ಕಳ ಕಲಿಕಾ ಪ್ರಕ್ರಿಯೆ, ಮಕ್ಕಳು ಹೇಗೆ ಕಲಿಯುತ್ತಾರೆ, ಕಲಿಕೆಯಲ್ಲಿ ಮಕ್ಕಳು ಹೇಗೆ ಸಮಸ್ಯೆಗಳನ್ನು ಎದುರಿಸುತ್ತಾರೆ, ಮಕ್ಕಳ ಸಾಮಾಜಿಕ ಹಿನ್ನೆಲೆಯನ್ನು ಹೇಗೆ ಅರ್ಥೈಸಿಕೊಳ್ಳಬೇಕು, ಮಕ್ಕಳ ಮೆದುಳಿನ ಬೆಳವಣಿಗೆ, ಹೆಚ್ಚು ಮಕ್ಕಳು ಯಾವ ಚಟುವಟಿಕೆಗಳನ್ನು ಇಷ್ಟಪಡುತ್ತಾರೆ, ಯಾವ ರೀತಿಯ ಕಥೆಗಳು, ಕವಿತೆಗಳು ಮಕ್ಕಳಿಗೆ ಇಷ್ಟವಾಗುತ್ತವೆ, ಮಕ್ಕಳಿಗೆ ಇಷ್ಟವಾಗುವ ಚಿತ್ರಗಳು, ಚಿತ್ರಕಲೆ, ಮಾಡಿ ಕಲಿಯುವ ಚಟುವಟಿಕೆಗಳು ಹೀಗೆ ಕಲಿಕಾ ಪ್ರಕ್ರಿಯೆಗೆ ಸಂಬಂಧಿಸಿದ ತರಬೇತಿಗಳ ಅವಶ್ಯಕತೆಯಿದೆ ಎನ್ನುವುದನ್ನು ನಾನು ಅರಿತುಕೊಂಡೆ.

'ಗಿಡವಾಗಿ ಬಗ್ಗದ್ದು, ಮರವಾಗಿ ಬಗ್ಗೀತೇ' ಎನ್ನುವ ನಾಣ್ನುಡಿಯಂತೆ ಆರಂಭಿಕ ಕಲಿಕೆ (ಸಾಕ್ಷರತೆ) ಮಕ್ಕಳಿಗೆ ಎಷ್ಟು ಮುಖ್ಯ ಎನ್ನುವುದನ್ನು ಅರ್ಥಮಾಡಿಕೊಂಡು ನಾವು ಮುನ್ನಡೆದಿದ್ದೇ ಆದರೆ ಸರ್ವೋತಮುಖ, ಸರ್ವಾಂಗೀಣ ಅಭಿವೃದ್ಧಿಯ ಫಲವನ್ನು ಕಾಣಲು ಸಾಧ್ಯ.

# ಲಿಂಗ ತಾರತಮ್ಯ ಹೀಗೊಂದು ಚರ್ಚೆ

ಮಹ್ಮದ ರಫೀ– Lingasugur

ಬಹುಪಾಲು ಜನರು ಸಂವಿಧಾನ ಎಂಬ ಪದ ಕೇಳಿದ ತಕ್ಷಣ ಅದು ಒಂದು ಪದವಲ್ಲ ಸಂವಿಧಾನ ಅಂದರೆ ಅದು ತುಂಬಾ ವಿಶಾಲವಾದ ಅರ್ಥವನ್ನು ಹೊಂದಿರುವ ಪದ ಎಂದು ಅರ್ಥ ಮಾಡಿಕೊಳ್ಳುವ ಗೋಜಿಗೆ ಹೋಗುವುದೇ ಇಲ್ಲ. ಹಾಗೆ ನೋಡಿದರೆ ಸಂವಿಧಾನದ ಎಷ್ಟೋ ವಿಷಯಗಳು ನಮ್ಮ ದಿನನಿತ್ಯದ ಜೀವನ ಮತ್ತು ಬದುಕಿನಲ್ಲಿ ಹಾಸುಹೊಕ್ಕಾಗಿವೆ. ಉದಾಹರಣೆಗೆ: ಲಿಂಗ ತಾರತಮ್ಯ, ಜಾತೀಯತೆ, ಅಸಮಾನತೆ, ಇನ್ನು ಮುತಾಂದ ವಿಷಯಗಳನ್ನು ನಮ್ಮ ಮನೆಯಲ್ಲಿ, ನೆರೆಹೊರೆಯಲ್ಲಿ ಮತ್ತು ಸಮಾಜದಲ್ಲಿ ಗಮನಿಸಿದ್ದೇವೆ. ಹಾಗೂ ಅವು ಇನ್ನು ಜೀವಂತವಾಗಿವೆ ಎಂದರೆ ತಪ್ಪಾಗುವುದಿಲ್ಲ. ಇತ್ತೀಚೆಗೆ ನಾವು ಬಾಲಕಿಯರ ಪ್ರೌಢಶಾಲೆ ಮುದಗಲ್‌ನಲ್ಲಿ ಮಕ್ಕಳಿಗಾಗಿ ಲಿಂಗ ತಾರತಮ್ಯ ಮತ್ತು ಸಂವಿಧಾನದ ಅಂಶಗಳ ಮೇಲೆ ಒಂದು ಚರ್ಚೆಯನ್ನು ಹಮ್ಮಿಕೊಂಡಿದ್ದೇವು. ಈ ಚರ್ಚೆಯಲ್ಲಿ ಆ ಶಾಲೆಯ ಸುಮಾರು 200 ಮಕ್ಕಳು ಭಾಗವಹಿಸಿದ್ದರು.

ಮೊದಲಿಗೆ ಲಿಂಗ ತಾರತಮ್ಯ ವಿಷಯಕ್ಕೆ ಸಂಬಂಧಿಸಿದಂತೆ ಹೀಗೆಕೆ ಹೀಗಿರಲಿ ಭಿತ್ತಿಪತ್ರಗಳನ್ನು ಶಾಲಾ ಆವರಣದ ಎಲ್ಲಾ ಕಡೆ ಹಾಕಲಾಗಿತ್ತು. ಮಕ್ಕಳು ಸಾಲಾಗಿ ಬಂದು ಅವುಗಳನ್ನ ಗಮನಿಸುವುದು ಮತ್ತು ಅದರಲ್ಲಿರುವ ಸಂದೇಶದ ಬಗ್ಗೆ ತಮ್ಮ ತಮ್ಮಲ್ಲಿ ಮತ್ತು ಶಿಕ್ಷರೊಟ್ಟಿಗೆ ಚರ್ಚಿಸಿ ಅವುಗಳನ್ನು ಅರ್ಥಮಾಡಿಕೊಳ್ಳುತ್ತಾ ಸಾಗುತ್ತಿದ್ದರು. ನಂತರ ಭಿತ್ತಿಪತ್ರದಲ್ಲಿನ ವಿಷಯವನ್ನು ಕುರಿತು ತಮ್ಮ ಅಭಿಪ್ರಾಯ ವ್ಯಕ್ತಪಡಿಸಲು ತಿಳಿಸಲಾಯಿತು. ಮಕ್ಕಳು ಭಿತ್ತಿಪತ್ರದಲ್ಲಿನ ವಿಷಯದ ಜೊತೆಗೆ ಸ್ವತಃ ತಾವು ಅನುಭವಿಸಿದ ತಾರತಮ್ಯ ತಮ್ಮ ಮನೆಯಲ್ಲಿ ನಡೆಯುತ್ತಿರುವ ಘಟನೆಗಳನ್ನು ಹಂಚಿಕೊಂಡರು. ಮಕ್ಕಳ ಭಾಗವಹಿಸುವಿಕೆ ಮತ್ತು ಅವರು ಹಂಚಿಕೊಂಡ ಅನುಭವ ನಮ್ಮ ನೀರಿಕ್ಷೆಯನ್ನು ಮೀರಿದ್ದಾಗಿತ್ತು.

ಉದಾಹರಣೆಗೆ,

***ಒಂದು ಮಗು ಹೇಳುತ್ತೆ:*** *“ಗಂಡ ಸತ್ರ ಆಕಿ ಇನ್ನೋಂದು ಮದುವೆ ಮಾಡಕ ಬಾರದಂತ, ಗಂಡಮಗ ಎಷ್ಟಾದ್ರು ಮದುವಿ ಮಾಡಕಬಹುದಂತ, ಗಂಡ ಮಗ ಏನ್ ಮ್ಯಾಲಿಂದ ಬಿದ್ದಾನ ಏನ್, ಆತನ ಮನಷ್ಯನಾ, ಇಬ್ಬರೂ ತಾಯಿಯ ಗರ್ಭದಿಂದ ಬಂದಿರತಾರ, ತಾರತಮ್ಯ ಅನ್ನದ ನಾವ ಮಾಡಿದ್ದ. ಜೀವನ ಕಲರಪುಲ್ ಐತಿ, ಅದೇ ತರ ಬಾಳಕ ಅವಕಾಶ ಕೊಡಬೇಕು.”*

ನಮ್ಮ ಸಮಾಜದಲ್ಲಿ ವಿಧವೆಯನ್ನು ನೋಡುವ ದೃಷ್ಟಿಕೋನ ಇನ್ನು ಬದಲಾಗಿಲ್ಲ “ವಿಧವೆಯಾದರೆ ಹಣೆಯೆಲ್ಲ ಬೋಳು ವಿಧುರನಾದರೆ ಮತ್ತೊಂದು ಬಾಳು” ಎಂಬತೆ, ಹೊಸ ಜೀವನ ನಡೆಸುವುದು ವಿಧವೆಯ ಹಕ್ಕಾಗಿದೆ. ಎಂಬುದನ್ನು ನಾವು ಅರ್ಥ ಮಾಡಿಕೊಳ್ಳುವುದರ ಜೊತೆಗೆ ಇತರರಿಗೆ ಅರ್ಥೈಸಬೇಕಾಗಿದೆ.

***ಇನ್ನೋಂದು ಮಗು ಹೇಳುತ್ತೆ:*** *“ನಮ್ಮಪ್ಪ ದಿನಾ ಕುಡಿತಾನ, ನಮ್ಮವ್ವ ದುಡದ ನಮ್ಮನ್ನ ಶಾಲಿ ಓದುಸ್ತಿದ್ದಾಳ, ನಮ್ಮಪ್ಪ ಯಾವ ಸಹಾಯ ಮಾಡಲ್ಲ, ಆದರ ನನಗ ಛಲ ಐತಿ ನಾನು ಓದಿ ಏನರಾ ಸಾಧಿಸತಿನಿ ಅಂತ” ಇದನ್ನು ವ್ಯಕ್ತಪಡಿಸುವಾಗ ಅವಳ ಕಣ್ಣುಗಳು ಒದ್ದೆಯಾಗಿದ್ದವು. ಅವಳು ಅಷ್ಟೇ ಅಲ್ಲ ಎಲ್ಲಾ ಮಕ್ಕಳು ಅವಳೊಟ್ಟಿಗೆ ಅಳಲು ಶುರುಮಾಡಿದರು.*

*ಮಹಿಳೆಯರ ಪ್ರಾತಿನಿಧ್ಯವು ತುಂಬಾ ಕಳವಳ ಪಡುವ ವಿಷಯವಾಗಿದೆ,* ರಾಜಕಾರಣದಲ್ಲಿ ಮಹಿಳೆಯರ ಸಬಲೀಕರಣವು ಕುಸಿಯುತ್ತಿದೆ, ಮಹಿಳೆಯರ ಆದಾಯ ಪ್ರಮಾಣ ಪುರುಷರಿಗೆ ಹೋಲಿಸಿದರೆ ಕಡಿಮೆ ಇದೆ.

*"ಗಂಡು ಹುಟ್ಟಿದರೆ ಖುಷಿ ಪಡತಾರ, ಹೆಣ್ಣು ಹುಟ್ಟಿದರೆ ಬೇಸರ ಪಡತಾರ."*

*ಗಂಡುಮಗನಿಗಾದರೆ ಬಿಸಿ ಅನ್ನ ನಮ್ಮಗಾದರ ರಾತ್ರಿ ಅನ್ನ ಕೊಡತಾರ ಇದ್ಯಾವ ನ್ಯಾಯ.*

*ಈ ಮೇಲಿನ ಅನಿಸಿಕೆಗಳನ್ನು ಗಮನಿಸಿದಾಗ ನಮ್ಮ ಸಮಾಜದಲ್ಲಿ ಮಗುವಿನ ಹುಟ್ಟಿನಿಂದಲೇ ಲಿಂಗ ತಾರತಮ್ಮ ಹೇಗಾಗುತ್ತದೆ ಎಂಬುದನ್ನು ತಿಳಿಸುತ್ತದೆ. ಗಂಡು ಮಗು ಬೇಕು ಎಂಬ ಮನೋದೊರಣೆ ಹಾಗೂ ಮಕ್ಕಳನ್ನು ಸಾಕುವ ಕ್ರಮದಲ್ಲಿಯೂ ಸಹ ವ್ಯತ್ಯಾಸ ಕಾಣಬಹುದಾಗಿದ್ದು. ಇದು ಇನ್ನು ಮುಂದೆ ಹೋಗಿ ಹೆಣ್ಣು ಭ್ರೂಣ ಹತ್ಯೆಗೂ ಕಾರಣವಾಗುತ್ತದೆ.*

ಎಲ್ಲಾ ಮಕ್ಕಳ ಅಭಿಪ್ರಾಯಗಳನ್ನು ಗಮನಿಸಿದಾಗ ಪ್ರತಿ ಮಗುವು ಒಂದಲ್ಲಾ ಒಂದು ರೀತಿ ತಾರತಮ್ಯವನ್ನು ಅನುಭವಿಸಿದ್ದಾರೆ. ಮತ್ತು ಗಮನಿಸಿದ್ದಾರೆ.ಅನಿಸಿಕೆ ವ್ಯಕ್ತಪಡಿಸುವಾಗ ಪ್ರತಿ ಮಗುವು ಸಹ ತಮಗರಿವಿಲ್ಲದಂತೆ ಭಾವುಕಾರದರೂ. ಮಕ್ಕಳು ಅನಿಸಿಕೆಗಳು ತುಂಬಾ ಭಾವನಾತ್ಮಕ ಅನಿಸಿದರು ಅದರಲ್ಲಿ ವಾಸ್ತವತೆ ಇತ್ತು. ಭಿತ್ತಿಪತ್ರದಲ್ಲಿರುವ ವಿಷಯವು ಮಕ್ಕಳನ್ನು ವಿಮರ್ಶಾತ್ಮಕವಾಗಿ ಆಲೋಚಿಸಿಲು ಪ್ರೇರೆಪಿಸಿತು.

ಕೊನೆಗೆ ನನಗನಿಸಿದ್ದು ಸ್ತ್ರೀ ಪುರಷರ ನಡುವಿನ ಭೇದವು ಎಲ್ಲಾ ಸಮಾಜಗಳಲ್ಲೂ ಎಲ್ಲಾ ಕಾಲಮಾನದಲ್ಲೂ ಕಂಡುಬರುತ್ತದೆ. ಇಂದಿಗೂ ಕಂಡುಬರುತ್ತಿರುವ ಸಾಮಾಜಿಕ ಸಮಸ್ಯೆಯ ಅಂಶವಾಗಿದೆ. ಪಿತೃ ಪ್ರಧಾನ ಕುಟುಂಬ ವ್ಯವಸ್ಥೆ ಇರುವ ಸಮಾಜಗಳಲ್ಲಿ ದೈನಂದಿನ ಜೀವನದಲ್ಲಿ ಲಿಂಗ ತಾರತಮ್ಯ ಆಚರಣೆ ಇರುವುದನ್ನು ಕಾಣಬಹುದು. ಇದನ್ನು ಮಾನವನ ಖಾಸಗಿ ಮತ್ತು ಸಾರ್ವಜನಿಕ ಚಟುವಟಿಕೆಗಳೆರಡರಲ್ಲೂ ಗಮನಿಸಬಹುದಾಗಿದೆ. ಮಕ್ಕಳಿಗೆ ಇಂತಹ ಹಲವಾರು ಸಂಗತಿಗಳು ಒಂದಲ್ಲಾ ಒಂದು ರೀತಿ ಅವರ ಅನುಭವಕ್ಕೆ ಬಂದಿರುತ್ತವೆ, ಕೆಲವನ್ನು ಸ್ವತಃ ತಾವೇ ಅನುಭವಿಸುತ್ತಿರುತ್ತಾರೆ ಆದರೆ ಇದನ್ನು ಕುರಿತು ಪ್ರಶ್ನೆ ಮಾಡಲು, ಪ್ರತಿಭಟಿಸಲು ಮತ್ತು ಸರಿಯಾಗಿ ನಿಭಾಯಿಸಲು ಸೂಕ್ತವಾದ ಮಾರ್ಗದರ್ಶನ ಬೇಕಾಗಿದೆ. ಈ ತರಹದ ವಿಷಯಗಳನ್ನು ಇಟ್ಟುಕೊಂಡು ಮಕ್ಕಳೊಟ್ಟಿಗೆ ಹೆಚ್ಚೆಚ್ಚು ಸಂವಾದ ಮತ್ತು ಚರ್ಚೆಗಳಾದರೆ ಮಕ್ಕಳಲ್ಲಿ ಜಾಗೃತಿ ಮೂಡುವುದರ ಜೊತೆಗೆ ಆತ್ಮವಿಶ್ವಾಸ ಹೆಚ್ಚಾಗುತ್ತದೆ. ನಮ್ಮ ಶಾಲೆಗಳು ಮಕ್ಕಳನ್ನು, ಇಂತಹ ವಿಷಯಗಳ ಕುರಿತು ಹೆಚ್ಚು ಸಂವೇದನಾ ಶೀಲರನ್ನಾಗಿಸಬೇಕಾಗಿದೆ, ಶಾಲೆ ಕೇವಲ ಮಕ್ಕಳಿಗೆ ಜ್ಞಾನವನ್ನು ಕಟ್ಟಿಕೊಡುವುದಕ್ಕಷ್ಟೇ ಸೀಮಿತವಾಗಿರದೆ, ಮುಕ್ತವಾಗಿ ಮಾತನಾಡುವದಕ್ಕೆ ಅವಕಾಶ ನೀಡಬೇಕು ಮತ್ತು ಅಂತಹ ಕಲಿಕಾ ವಾತಾವರಣದೊಂದಿಗೆ ಅವರು ಇವುಗಳನ್ನು ಜೀವನದಲ್ಲಿ ಅನ್ವಯ ಮಾಡಿಕೊಳ್ಳುವ ಹಾಗೆ ಅಭ್ಯಾಸವನ್ನು ಮತ್ತು ತರಭೇತಿಯನ್ನು ಶಾಲೆಯ ಒಳಗಡೆಯೇ ನೀಡಬೇಕು. ಇದಕ್ಕೆ ಮಕ್ಕಳಿಗೆ ಉತ್ತಮ ಬೆಂಬಲ, ಪ್ರೋತ್ಸಾಹ, ಮಾರ್ಗದರ್ಶನ ಮುಖ್ಯವಾಗಿ ಬೇಕಾಗುತ್ತದೆ.

# ಅಂದು ಇಂದಿಗೂ ಪ್ರಸ್ತುತ ಸಾವಿತ್ರಿಬಾಯಿ ಫುಲೆ

ಶ್ರೀಲತ ಕೆ ಎನ್ Kalburgi

"ನಾವು ಹೆಣ್ಣುಮಕ್ಕಳು ಶಿಕ್ಷಕಿಯರಾಗಿ ಇವತ್ತು ಬ್ಯಾಗ್ ನೇತಾಕಿಕೊಂಡು, ಸೀರೆ ಮಡಚಿ, ಪಿನ್ ಹಾಕ್ಕೊಂಡು ಶಾಲೆಗಳಿಗೆ ಹೋಗುತ್ತಿದ್ದೇವೆ, ಅದಕ್ಕೆ ಕಾರಣ ನಮ್ಮವ್ವ ಸಾವಿತ್ರಿಬಾಯಿ ಫುಲೆ" ಎಂದು ಶಿಕ್ಷಕಿಯೊಬ್ಬರು ಹೇಳಿದ ಮಾತು ಸ್ಮರಣೀಯ. ಜನವರಿ 3, ಅಕ್ಷರದವ್ವ ಸಾವಿತ್ರಿಬಾಯಿ ಫುಲೆಯವರ ಜನ್ಮದಿನ. ಭಾರತದ ಮೊದಲ ಮಹಿಳಾ ಶಿಕ್ಷಕಿ, ಮಾತ್ರವಲ್ಲ ಉತ್ತಮ ಶಿಕ್ಷಕಿ, ಉತ್ತಮ ಆಡಳಿತಗಾರ್ತಿ, ಸಾಮಾಜಿಕ ಚಿಂತಕಿ, ಲೇಖಕಿ ಹಾಗೂ ಒಬ್ಬ ಹೋರಾಟಗಾರ್ತಿ. ಮಹಿಳೆಯರು, ಶೂದ್ರರು, ಅಸ್ಪೃಶ್ಯರನ್ನು ಧರ್ಮ, ದೇವರು, ಸಂಸ್ಕೃತಿಗಳ ಹೆಸರಿನಲ್ಲಿ ಅಮಾನುಷವಾಗಿ ದೌರ್ಜನ್ಯವೆಸಗುತ್ತಿದ್ದ ಕಾಲದಲ್ಲಿ ಅವರ  ಶಿಕ್ಷಣ ಮತ್ತು ಸುಧಾರಣೆಗಾಗಿ ತ್ಯಾಗ, ಬಲಿದಾನಗಳಿಗೆ ಜೀವನವನ್ನೇ ಸಮರ್ಪಿಸಿದವರು. ಸೇವೆಯಲ್ಲಿಯೇ ಸಾರ್ಥಕತೆಯನ್ನು ಕಂಡು, ಸೇವೆಯಲ್ಲಿಯೇ ಪ್ರಾಣತೆತ್ತ ಸಾವಿತ್ರಿಬಾಯಿ ಫುಲೆಯವರು ನಮ್ಮೆಲ್ಲರ ಆದರ್ಶ. ಇತಿಹಾಸದ ಪುಟಗಳಲ್ಲಿ ಸದಾ ಸ್ಮರಣೀಯರು.

ಮಹಾರಾಷ್ಟ್ರ ರಾಜ್ಯದ ಸತಾರ ಜಿಲ್ಲೆಯ ನಯಿಗಾಂವ ಎಂಬ ಹಳ್ಳಿಯಲ್ಲಿ 3–1–1831 ರಲ್ಲಿ ಸಾವಿತ್ರಿಬಾಯಿಯವರು ಜನಿಸಿದರು. ಸಾಮಾನ್ಯ ಮಾಳಿ [ಮಾಲಗಾರ] ವರ್ಗಕ್ಕೆ ಸೇರಿದ ಕುಟುಂಬ. ಅಪ್ಪ ಝುಗಟೆ ಪಾಟೀಲರು 9 ನೆಯ ವಯಸ್ಸಿನ ಸಾವಿತ್ರಿಬಾಯಿಯವರನ್ನು ಅಂದಿನ ಸಂಪ್ರದಾಯದಂತೆ ಪುಣೆಯ ನಿವಾಸಿ ಮಾಳಿ ಸಮಾಜದ ಗೋವಿಂದರಾವ ಫುಲೆಯವರ ಎರಡನೆಯ ಮಗನಾದ ಜ್ಯೋತಿಭಾಫುಲೆಯವರೊಂದಿಗೆ ಮದುವೆ ಮಾಡಿದರು. ಹೀಗೆ ಸಾವಿತ್ರಿ ನಯಿಗಾಂವದಿಂದ ಅಂದಿನ ದಿನಗಳಲ್ಲಿಯೇ  ನಗರವಾಗಿದ್ದ ಪುಣೆಯನ್ನು ಪ್ರವೇಶಿಸುತ್ತಾರೆ.

ಮಹಿಳೆಯರ ಬದುಕಿನಲ್ಲಿ ಮಹತ್ತರವಾದ ಬದಲಾವಣೆಯನ್ನು ತರುವಲ್ಲಿ ಶಿಕ್ಷಣ ಮಹತ್ತರವಾದ ಪಾತ್ರವನ್ನು ವಹಿಸುತ್ತದೆಯೆಂದು ಜ್ಯೋತಿಭಾರವರು ಬಲವಾಗಿ ನಂಬಿದ್ದರು. ಶಿಕ್ಷಣ ವಂಚಿತ ಮಹಿಳೆಯರ  ಶಿಕ್ಷಣದ ಕನಸು ಕಾಣುತ್ತಿದ್ದ ಜ್ಯೋತಿಭಾ ತನ್ನ ಎಳೆಯ ವಯಸ್ಸಿನ ಹೆಂಡತಿಗೆ ಶಿಕ್ಷಣ ನೀಡಲು ತಾವೇ ಸ್ವತಃ ಗುರುವಾಗಿ ಪ್ರಾಥಮಿಕ ಶಿಕ್ಷಣವನ್ನು ನೀಡಿದರು. ಮಾಧ್ಯಮಿಕ ಶಿಕ್ಷಣವನ್ನು ಮಾತ್ರ ಪಡೆದಿದ್ದ ಜ್ಯೋತಿಭಾರವರು ಹೆಂಡತಿಗೆ ತನಗಿಂತಲೂ ಹೆಚ್ಚಿನ ಶಿಕ್ಷಣವನ್ನು ಕೊಡಿಸಬೇಕೆಂದು ನಿರ್ಧರಿಸಿದರು. ಶಿಕ್ಷಕಿಯಾಗಲು ಸಾವಿತ್ರಿಬಾಯಿ ಹೆಚ್ಚಿನ ತರಬೇತಿ ಮತ್ತು ಅಧ್ಯಯನವನ್ನು ಕೈಗೊಳ್ಳಬೇಕಿತ್ತು. ಅದಕ್ಕಾಗಿ ಸಾವಿತ್ರಿ ಶಿಕ್ಷಕ ತರಬೇತಿಗೆ ಅಹ್ಮದ್ ನಗರಕ್ಕೆ ತೆರಳಿದರು. ಮುಂದಿನ ದಿನಗಳಲ್ಲಿ ಸಾವಿತ್ರಿಬಾಯಿ ಫುಲೆಯವರೊಂದಿಗೆ ದುಡಿದ ಫಾತಿಮಾ ಶೇಖ್ [ ಮುಸ್ಲಿಂ ಮಹಿಳೆ] ಕೂಡಾ ಸಾವಿತ್ರಿಯವರೊಂದಿಗೆ ಇದೇ ಪದವಿ ಪಡೆದರು. ಇವರಿಬ್ಬರೂ ಪಡೆದ ಪದವಿ ಹೆಣ್ಣುಮಕ್ಕಳನ್ನು ಶಿಕ್ಷಿತರನ್ನಾಗಿ ಮಾಡಬೇಕೆಂಬ ತಮ್ಮ ಕನಸನ್ನು ನನಸಾಗಿಸುವ  ನಂಬಿಕೆ ಜ್ಯೋತಿಭಾರವರಲ್ಲಿ ಗಟ್ಟಿಗೊಳಿಸಿತು.

ಅಂದಿನ ದಿನಗಳಲ್ಲಿ ಕ್ರಿಶ್ಚಿಯನ್ ಮಿಷನರಿಗಳು ತೆರೆದಿದ್ದ  ಶಾಲೆಗಳಲ್ಲಿ ಸಾಮಾನ್ಯವಾಗಿ ಕ್ರಿಶ್ಚಿಯನ್ ಮತ್ತು ಅನಾಥ ಮಕ್ಕಳು ಶಿಕ್ಷಣ ಪಡೆಯುತ್ತಿದ್ದರು. ಕಲ್ಕತ್ತಾ, ಮುಂಬೈ, ನಾಸಿಕ್, ಅಹ್ಮದ್ ಮತ್ತು ಸೂರತ್ ನಗರಗಳಲ್ಲಿ ಈ ಶಾಲೆಗಳಿದ್ದವು. ಮದ್ಯಮವರ್ಗ ಮತ್ತು ದಲಿತ ಮಕ್ಕಳಿಗೆ  ಈ ಶಾಲೆಗಳು ದಕ್ಕುತ್ತಿರಲಿಲ್ಲ. ಭಾರತದ ಸಂಪ್ರದಾಯವಾದಿಗಳು ತಮ್ಮ ಮಕ್ಕಳನ್ನು ವಿದೇಶಿಯರು ನಡೆಸುವ ಶಾಲೆಗಳಿಗೆ ಕಳುಹಿಸಲು ಹಿಂದೇಟು ಹಾಕುತ್ತಿದ್ದರು. ಶೂದ್ರ ಮತ್ತು ಅತಿಶೂದ್ರ ಸಮುದಾಯದ ಹೆಣ್ಣುಮಕ್ಕಳಿಗೆ ಶಿಕ್ಷಣದ ಅವಕಾಶಗಳನ್ನು ಕಲ್ಪಿಸಬೇಕೆಂದು ಬಗೆದಿದ್ದ ಜ್ಯೋತಿಭಾ ತನ್ನ ಸಂಕಲ್ಪವನ್ನು ಸಾವಿತ್ರಿ ಬಾಯಿಯವರಲ್ಲಿ ಹಂಚಿಕೊಂಡಿದ್ದರು. ಅದಾಗಲೇ ತಾನು ಪಡೆದ ಶಿಕ್ಷಣವನ್ನು ಸದುಪಯೋಗಪಡಿಸಲು ಸಿದ್ಧರಿದ್ದ ಸಾವಿತ್ರಿ ಜ್ಯೋತಿಭಾರವರಿಗೆ ಸಾಥ್ ನೀಡಿದರು. ಹೆಣ್ಣು ಮಕ್ಕಳಿಂದ ಹೆಣ್ಣು ಮಕ್ಕಳಿಗೆ ಶಿಕ್ಷಣ ಒದಗಿಸುವ

ಉದ್ದೇಶದಿಂದ ಕ್ರಿ. ಶ. 1848 ರಲ್ಲಿ ಪುಣೆಯ ಬುಧುವಾರ ಪೇಟೆಯ ಭಿಡೆ ಎಂಬುವವರ ಮನೆಯೊಂದರಲ್ಲಿ ಬಾಲಕಿಯರಿಗಾಗಿ ಶಾಲೆಯನ್ನು ಜ್ಯೋತಿಭಾ ದಂಪತಿಗಳು ಆರಂಭಿಸಿದರು. ಸಾವಿತ್ರಿಬಾಯಿ ದೇಶದ ಪ್ರಥಮ ಮಹಿಳಾ ಶಿಕ್ಷಕಿ ಹಾಗೂ ಪ್ರಥಮ ಮುಖ್ಯೋಪಾಧ್ಯಾಯರಾಗಿ ಕೆಲಸವನ್ನಾರಂಭಿಸಿದರು. ಫಾತಿಮಾ ಶೇಖ್ ಸಹಶಿಕ್ಷಕಿಯಾಗಿ ಸಾವಿತ್ರಿಬಾಯಿಯರೊಂದಿಗೆ ಜೊತೆಯಾದರು. 9 ಹೆಣ್ಣು ಮಕ್ಕಳು ಶಾಲೆಯಲ್ಲಿ ಕಲಿಯಲಾರಂಬಿಸಿದರು. ಆದರೆ 6 ತಿಂಗಳ ಕಾಲ ನಡೆದ ಶಾಲೆ, ಹಣಕಾಸಿನ ಅಡಚಣೆಯಿಂದಾಗಿ ಮುಚ್ಚಲ್ಪಟ್ಟಿತು. ಫುಲೆ ದಂಪತಿಗಳು ಕಂಗೆಡದೆ ಪುನಃ ಶಾಲೆಯನ್ನು ಪುನರಾರಂಭಿಸಿದರು. ಶಾಲೆಗೆ ಸೇರುವ ಹೆಣ್ಣುಮಕ್ಕಳ ಸಂಖ್ಯೆಯೂ ಹೆಚ್ಚಾಗುತ್ತಾ ಸಾಗಿತು.

ಹೀಗೆ ಹೆಣ್ಣುಮಕ್ಕಳಿಗೆ ಶಿಕ್ಷಣ ನೀಡುವ ವ್ಯವಸ್ಥೆ ಸಂಪ್ರದಾಯವಾದಿಗಳಿಗೆ ಸಹಿಸಲಸಾಧ್ಯವಾಯಿತು. ಸಾವಿತ್ರಿಬಾಯಿಯವರಿಗೆ ವಿಪರೀತ ಕಿರುಕುಳ ಕೊಡಲಾರಂಭಿಸಿದರು. ಮನೆಯಿಂದ ಶಾಲೆಗೆ ತೆರಳುವ ಮಾರ್ಗದಲ್ಲಿ ಅವರನ್ನು ಅವಾಚ್ಯ ಪದಗಳಿಂದ ನಿಂದಿಸುವುದು, ಬೈಗುಳ, ಉಗುಳುವುದು, ಮೈಮೇಲೆ ಕೆಸರು, ಸಗಣಿ, ದೂಳು, ಕೊಳೆತ ಮೊಟ್ಟೆಗಳನ್ನೆಸೆಯುವುದು, ಕಲ್ಲಿನಿಂದಲೂ ಹೊಡೆದು ಗಾಯಗೊಳಿಸುವುದು ಇತ್ಯಾದಿಗಳು ನಡೆಯುತ್ತಿದ್ದವು. ಆದರೂ ಸಾವಿತ್ರಿ ಹಿಂದೆ ಸರಿಯಲಿಲ್ಲ. ಆದರೆ ಕಿರುಕುಳ ಸಹಿಸಲಸಾದ್ಯವಾದಾಗ ಸಾವಿತ್ರಿ ಕಂಗೆಡುತ್ತಿದ್ದರು. ಈ ಸಂದರ್ಭದಲ್ಲಿ ಜ್ಯೋತಿಭಾ ಪತ್ನಿಗೆ ದೈರ್ಯ ತುಂಬುತ್ತಿದ್ದರು. ಶಾಲೆಗೆ ತೆರಳುವಾಗ ಸೀರೆಯೊಂದನ್ನು ತಮ್ಮ ಬ್ಯಾಗಿನಲ್ಲಿ ಬಚ್ಚಿಟ್ಟುಕೊಂಡು ತೆರಳಿ, ಶಾಲೆ ತಲುಪಿದ ನಂತರ ತಾನುಟ್ಟುಕೊಂಡು ಹೋಗುತ್ತಿದ್ದ ಗಲೀಜಾದ ಸೀರೆಯನ್ನು ಬದಲಿಸಿ, ಬ್ಯಾಗಿನಲ್ಲಿ ತಂದಿದ್ದ ಸೀರೆಯನ್ನು ಉಡುವುದು ಹಾಗೂ ಶಾಲೆಯಿಂದ ಮರಳಿ ಬರುವಾಗ ಪುನಃ ಸೀರೆಯನ್ನು ಬದಲಾಯಿಸಿ ಮನೆಯಿಂದ ಉಟ್ಟುಕೊಂಡು ಹೋಗುತ್ತಿದ್ದ ಹೊಲಸಾದ ಸೀರೆಯನ್ನು ಉಟ್ಟುಕೊಂಡು ವಾಪಸ್ಸಾಗುವಂತೆ ಸೂಚಿಸಿದ್ದರು. ಇದೇ ತೆರನಾಗಿ ಮುಂದುವರಿಯಿತು. ಆದರೂ ಹಿಂಸೆ ನಿಲ್ಲಲಿಲ್ಲ. ಕೊನೆಗೊಮ್ಮೆ ಸಾವಿತ್ರಿ ತನಗೆ ತೊಂದರೆ ಕೊಡುವವರ ಕೆನ್ನಗೆ ಬಾರಿಸಿದ್ದರು. ಇದರಿಂದ ಪೆಚ್ಚಾದ ಸಂಪ್ರದಾಯವಾದಿಗಳು ಹಿಂಸೆಯ ಸ್ವರೂಪವನ್ನು ಬದಲಾಯಿಸಿದರು.

ಸಂಪ್ರದಾಯವಾದಿಗಳು ಜ್ಯೋತಿಭಾರ ತಂದೆಯವರಾದ ಗೋವಿಂದರಾವ್ ಅವರ ಮೇಲೆ ಒತ್ತಡ ಹೇರತೊಡಗಿದರು. ತಮ್ಮ ಮಗ ಮತ್ತು ಸೊಸೆ ತೊಡಗಿರುವ ಕಾರ್ಯ ಧರ್ಮಶಾಸ್ತ್ರಕ್ಕೆ ವಿರುದ್ಧವಾದುದು. ಇದರಿಂದ ಹಿಂದೆ ಸರಿಯದಿದ್ದಲ್ಲಿ ಸಾಮಾಜಿಕ ಬಹಿಷ್ಕಾರ ಹಾಕುವುದಾಗಿ ಬೆದರಿಸಿದರು. ಈ ಬೆದರಿಕೆಗೆ ಗೋವಿಂದರಾವ್ ಮಣಿದರು. ಮಗ ಮತ್ತು ಸೊಸೆಯ ಮನವೊಲಿಸುವ ಪ್ರಯತ್ನ ಮಾಡಿದರು. ಆದರೆ ಅವರು ಬಗ್ಗಲಿಲ್ಲ. ಗೋವಿಂದರಾವ್ ಮನೆಯಿಂದ ಇಬ್ಬರನ್ನೂ ಹೊರಹಾಕುವುದಾಗಿಯೂ, ಆಸ್ತಿಯಲ್ಲಿ ಬಿಡಿಗಾಸನ್ನು ಕೊಡುವುದಿಲ್ಲವೆಂದು ಬೆದರಿಸಿದರು. 1849 ರಲ್ಲಿ 22 ವಯಸ್ಸಿನ ಜ್ಯೋತಿಭಾ ಮತ್ತು 18 ವಯಸ್ಸಿನ ಸಾವಿತ್ರಿಬಾಯಿಯವರು ಮನೆ ಬಿಟ್ಟು ಹೊರಡುತ್ತಾರೆ.

ಸುಧಾರಣಾವಾದಿಗಳು ಜ್ಯೋತಿಭಾ ಫುಲೆ ದಂಪತಿಗಳ ಕಂಗೆಡದ ಉತ್ಸಾಹಕ್ಕೆ ದೇಣಿಗೆ ನೀಡುವ ಮೂಲಕ ಶಿಕ್ಷಣ ನೀಡುವ ಕಾರ್ಯಕ್ಕೆ ಬೆನ್ನೆಲುಬಾಗಿ ನಿಲ್ಲುತ್ತಾರೆ. 17–9–1851 ರಲ್ಲಿ ರಾಸ್ತಾಪೇಟೆಯಲ್ಲಿ ಎರಡನೆಯ ಶಾಲೆ ಪ್ರಾರಂಭವಾಯಿತು. 4 ಶಿಕ್ಷಕರು ಮತ್ತು 48 ವಿದ್ಯಾರ್ಥಿನಿಯರಿದ್ದರು. 3 ನೆಯ ಶಾಲೆ 15–3–1852 ರಲ್ಲಿ ಪಾತಾಳಪೇಟೆಯಲ್ಲಿ ಪ್ರಾರಂಭವಾಯಿತು. ಸಾವಿತ್ರಿಬಾಯಿಯವರು ತಮ್ಮ ಕೆಲಸಕ್ಕೆ ಸಂಭಾವನೆ ಪಡೆಯುತ್ತಿರಲಿಲ್ಲ. ಲೆಕ್ಕಪತ್ರಗಳು ಅಚ್ಚುಕಟ್ಟಾಗಿ, ಪಾರದರ್ಶಕವಾಗಿಯೂ ಇರುತ್ತಿತ್ತು. ಮಕ್ಕಳಿಗಾಗಿ ಶಾಲೆಯಲ್ಲಿ ಮದ್ಯಾಹ್ನದ ಊಟ ಹಾಗೂ ಇನ್ನಿತರ ಬೆಂಬಲ ವ್ಯವಸ್ಥೆಯನ್ನೂ ಅಂದಿನ ದಿನಗಳಲ್ಲಿ ವ್ಯವಸ್ಥೆಗೊಳಿಸಿದ್ದರು. ಇವರು ನಡೆಸುತ್ತಿದ್ದ ಶಾಲೆಗಳ ಶಿಕ್ಷಣದ ಗುಣಮಟ್ಟ ಮೆಚ್ಚುಗೆಗೆ ಪಾತ್ರವಾಗಿತ್ತು. ಪಠ್ಯಕ್ರಮ ನಿಗಧಿ, ಪರಿಪೂರ್ಣ ಶಿಕ್ಷಣ ಕ್ರಮ, ವೈಜ್ಞಾನಿಕವಾಗಿಯೂ ಇದ್ದುದನ್ನು ಅಂದಿನ ಪುಣೆ ಮಹಾವಿದ್ಯಾಲಯದ ಶಾಲಾ ಪರಿವೀಕ್ಷಣಾಧಿಕಾರಿಗಳಾಗಿದ್ದ ಮೇಜರ್ ಕ್ಯಾಂಡಿಯವರ ಪ್ರಶಂಷೆಗೂ ಒಳಗಾಗಿತ್ತು. 1853 ರಲ್ಲಿ 237

ವಿದ್ಯಾರ್ಥಿನಿಯರು ಪುಣೆಯ ಕಾಲೇಜಿನಲ್ಲಿ ಪರೀಕ್ಷೆ ಬರೆಯವಾಗ 3000 ಜನರು ಕಾಲೇಜು ಆವರಣದಲ್ಲಿ ನಿಂತು ಹೆಣ್ಣು ಮಕ್ಕಳು ಪರೀಕ್ಷೆ ಬರೆಯುವುದನ್ನು ವೀಕ್ಷಿಸಿದ್ದರು. ಶಾಲೆಯು ದೇಣಿಗೆ ಪಡೆಯುವುದರಲ್ಲಿಯೂ ಯಶ ಕಂಡಿತು. 1857 ರವೇಳೆಗೆ 258 ದಲಿತ [ಅಂದಿನ ದಿನಗಳಲ್ಲಿ ಅಸ್ಪೃಷ್ಯ] ವಿದ್ಯಾರ್ಥಿನಿಯರು ಈ ಶಾಲೆಗಳಲ್ಲಿ ಓದುತ್ತಿದ್ದರು. ಇಲ್ಲಿ ಕಲಿತ ಮಕ್ಕಳು ಪ್ರಗತಿಪರರಾಗಿ ಸಂಪ್ರದಾಯವಾದಿಗಳಿಗೆ ಸೆಡ್ಡು ಹೊಡೆಯುವಂತೆ ಬೆಳೆದು ನಿಂತಿದ್ದರು.

1855 ರಲ್ಲಿ ಕಾರ್ಮಿಕರು, ರೈತರು, ಅನಕ್ಷರಸ್ಥ ಯುವತಿ ಯುವಕರಿಗಾಗಿ ಸಾವಿತ್ರಿಬಾಯಿ ಫುಲೆ ದಂಪತಿಗಳು ರಾತ್ರಿ ಶಾಲೆಗಳನ್ನು ಕೂಡಾ ತೆರೆದರು. ಇಲ್ಲಿ ಕಲಿಕೆಯಲ್ಲಿ ಸಾಮಾಜಿಕ ತಿಳುವಳಿಕೆಯನ್ನು ಮೂಡಿಸುತ್ತಿದ್ದರು. ಮುಂಬೈ ಪ್ರಾಂತ್ಯದ ಬ್ರಿಟೀಷ್ ಸರಕಾರ 1852ರಲ್ಲಿ ಜ್ಯೋತಿಭಾ ಮತ್ತು ಸಾವಿತ್ರಿ ಬಾಯಿ ಫುಲೆಯವರನ್ನು ಸನ್ಮಾನಿಸುತ್ತದೆ. ಶಾಲೆಗೆ ಅನುದಾನದ ಬೇಡಿಕೆ ಇಡದಿದ್ದರೂ ಸರಕಾರ ತಾನಾಗಿಯೇ ಅನುದಾನ ಮತ್ತು ಸಹಾಯಧನವನ್ನು ಬಿಡುಗಡೆ ಮಾಡುತ್ತದೆ. ಅಂದಿನ ದಿನಗಳಲ್ಲಿ ಶಾಲೆಗಳಿಗೆ ಭೇಟಿನೀಡಿ ಪರಿಶೀಲಿಸುತ್ತಿದ್ದ ಶಿಕ್ಷಣಾಧಿಕಾರಿಗಳು ಮಕ್ಕಳ ಪ್ರತಿಭೆಯನ್ನು ಕಂಡು ಬೆರಗಾಗಿದ್ದರು. "ಸರಕಾರ ಈ ಶಾಲೆಗಳಿಂದ ಕಲಿಯುವುದು ಬಹಳಷ್ಟಿದೆ" ಎಂಬ ಅಭಿಪ್ರಾಯವನ್ನು ತಮ್ಮ ವರದಿಯಲ್ಲಿ ವ್ಯಕ್ತಪಡಿಸಿದ್ದರು.ಇಂತಹಾ ವರದಿಯನ್ನು ಗಮನಿಸಿದ ಇಂಗ್ಲೆಂಡಿನ ರಾಣಿ ಎಲಿಜಬೆತಳು " ಒಂದು ಸರಕಾರ ಮಾಡಬೇಕಾಗಿರುವ ಕೆಲಸ ನೀವು ಮಾಡುತ್ತಿದ್ದೀರಿ" ಎಂದು ಫುಲೆ ದಂಪತಿಗಳನ್ನು ಅಭಿನಂದಿಸಿದ್ದರು. " ಸಮಾಜದ ವಿರೋಧವನ್ನೂ ಲೆಕ್ಕಿಸದೆ ಸಾಮಾನ್ಯ ಜನರಿಗೆ ಶಿಕ್ಷಣ ಕೊಡುತ್ತಿರುವುದು ಮತ್ತು ಮೂಢನಂಬಿಕೆ, ಕಂದಾಚಾರದ ವಿರುದ್ಧ ಸೆಣಸಿ ಗೆದ್ದಿರುವ ನೀವು ಕ್ರಾಂತಿಕಾರಿಗಳು" ಎಂದು ಉಲ್ಲೇಖಿಸಿದ್ದರು.

ಸಾವಿತ್ರಿಬಾಯಿಯವರು ಲೇಖನಗಳು, ಕವನ ಸಂಕಲನಗಳು, ಸಾಹಿತ್ಯ ಕೃತಿಗಳನ್ನು ಹೊರತರುವ ಮೂಲಕ ಜನಜಾಗೃತಿಗಾಗಿ ಇವುಗಳನ್ನು ಬಳಸಿದರು. ಹೆಣ್ಣು ಮಕ್ಕಳು ಹಾಗೂ ವಯಸ್ಕರ ಶಿಕ್ಷಣ ಕ್ರಾಂತಿಗಾಗಿ ದುಡಿಯುವುದರೊಂದಿಗೆ ಚಿಂತಾಜನಕವಾಗಿದ್ದ ಮಹಿಳೆಯರ ಸ್ಥಿತಿಗತಿಗಳನ್ನು ಬದಲಾಯಿಸುವಲ್ಲಿಯೂ ಕ್ರಾಂತಿಕಾರಕ ಹೆಜ್ಜೆಗಳನ್ನಿರಿಸಿದರು. ಅಂದಿನ ದಿನಗಳಲ್ಲಿ ಹೆಣ್ಣುಮಕ್ಕಳು ಕಡ್ಡಾಯವಾಗಿ ಬಾಲ್ಯವಿವಾಹಕ್ಕೊಳಪಡುತ್ತಿದ್ದರು. ವಿಧವಾ ಮರುವಿವಾಹದ ನಿಷೇಧಿಸಲ್ಪಟ್ಟಿತ್ತು. ಸತಿಸಹಗಮನ ಪದ್ಧತಿಗಳನ್ನು ಪ್ರೋತ್ಸಾಹಿಸುತ್ತಿದ್ದರು. ಚಿಕ್ಕವಯಸ್ಸಿನಲ್ಲಿ ಹೆಣ್ಣುಮಕ್ಕಳು ವಿವಾಹಿತರಾಗುತ್ತಿದ್ದ ಕಾರಣ ವಿಧವೆಯರಾಗುತ್ತಿದ್ದ ಸಂದರ್ಭಗಳು ಅಧಿಕವಾಗಿದ್ದವು. ಸಣ್ಣ ವಯಸ್ಸಿನಲ್ಲಿ ವಿಧವೆಯರಾಗುತ್ತಿದ್ದವರು ಮರುವಿವಾಹವಾಗುವ ಅವಕಾಶಗಳನ್ನು ತಪ್ಪಿಸಲು ಕಡ್ಡಾಯವಾಗಿಯೂ ವಿಧವೆಯರ ತಲೆ ಬೋಳಿಸುತ್ತಿದ್ದರು. ಅವರಿಗೆ ಮನೆಯಿಂದ ಹೊರಹೋಗುವ ಅವಕಾಶವಿರಲಿಲ್ಲ. ಅಲಂಕಾರ ನಿಷಿದ್ಧ. ಗಂಡನ ಚಿತೆಯಲ್ಲಿ ಬಲವಂತವಾಗಿ ಬೇಯುವಂತೆ ಮಾಡಿ ಮಹಾಸತಿಯೆಂದು ವೈಭವೀಕರಿಸಲಾಗುತ್ತಿತ್ತು. ಮನೆಯ ಪುರುಷರಿಂದಲೇ ವಿಧವೆಯರು ಬಲಾತ್ಕಾರವಾಗಿ ಗರ್ಭಧರಿಸುತ್ತಿದ್ದರು. ಇಂತಹವರನ್ನು ಗುಪ್ತವಾಗಿ ಹೆರಿಗೆ ಮಾಡಿಸಿ ಮಗುವನ್ನು ಕೊಂದುಹಾಕುವುದು ನಡೆಯುತ್ತಿದ್ದವು. ಗರ್ಭಿಣಿಯರಾದ ವಿಧವೆಯರು ಮನೆಯಿಂದ ಓಡಿಹೋಗಿ ಆತ್ಮಹತ್ಯೆ ಮಾಡಿಕೊಳ್ಳುವುದು ವಾಡಿಕೆಯಲ್ಲಿತ್ತು. ಇಂತಹಾ ವಿವಾಹ ಬಾಹಿರ ಗರ್ಭಿಣಿಯರು ಮತ್ತು ಕಷ್ಟದಲ್ಲಿರುವ ಮಹಿಳೆಯರಿಗಾಗಿ 'ಬಾಲಹತ್ಯಾ ಪ್ರತಿಬಂಧಕ ಗೃಹ' ಮತ್ತು 'ಪ್ರಸೂತಿ ಗೃಹ'ವನ್ನು ಸ್ಥಾಪಿಸಿದರು. ತೊಟ್ಟಿಲಮನೆ ಎಂಬ ಅನಾಥಾಲಯವನ್ನು ಕೂಡಾ ಸ್ಥಾಪಿಸಿದರು. ಬಾಲ್ಯವಿವಾಹವನ್ನು ಸಾವಿತ್ರಿಬಾಯಿ ಫುಲೆಯವರು ವಿರೋಧಿಸಿದ್ದು, ವಿಧವಾ ಪುನರ್ವಿವಾಹ ಮತ್ತು ಅಂತರ್ಜಾತಿ ಹಾಗೂ ಅಂತರ್‌ಧರ್ಮೀಯ ವಿವಾಹಗಳಿಗೆ ಪ್ರೋತ್ಸಾಹ ನೀಡಿದ್ದರು. ತಲೆಬೋಳಿಸುವ ಪದ್ಧತಿಯನ್ನು ಬಹಿಷ್ಕರಿಸುವಂತೆ ಕ್ಷೌರಿಕರನ್ನು ಸಂಘಟಿಸಿದ್ದರು. ಮಹಿಳೆಯರು ಮನೆಗಳಲ್ಲಿ ಬಂಧಿತರಾಗಿದ್ದ ಕಾಲದಲ್ಲಿ ಮಹಿಳೆಯರ ಹಕ್ಕುಗಳ ಪ್ರತಿಪಾದನೆಗಾಗಿ 1863ರಲ್ಲಿ ಮಹಿಳಾ ಮಂಡಳಿಯೊಂದನ್ನು ಸ್ಥಾಪಿಸಿದರು. ಕಟ್ಟಾ

ಸಂಪ್ರದಾಯವಾದಿಗಳ ವಿರೋಧವನ್ನು ಲೆಕ್ಕಿಸದೆ ಮಹಿಳಾ ವಿಮೋಚನೆಗಾಗಿ ಕ್ರಾಂತಿಕಾರಕ ಹೆಜ್ಜೆಗಳನ್ನಿರಿಸಿದ್ದರು.

1890 ರ ನವೆಂಬರ್ 28 ರಂದು ಜ್ಯೋತಿಭಾಫುಲೆಯವರು ಮರಣ ಹೊಂದುತ್ತಾರೆ. ಆಗ ಅವರ ಅಂತಿಮ ಸಂಸ್ಕಾರಕ್ಕೆ ಸಂಬಂಧಿಕರು ತಡೆಯೊಡ್ಡಿದರು. ಫುಲೆ ದಂಪತಿಗಳಿಗೆ ಮಕ್ಕಳಿಲ್ಲದ ಕಾರಣ ಅವರು ದತ್ತು ಪಡೆದಿದ್ದ ಯಶವಂತ ರಕ್ತ ಸಂಬಂಧಿಯಲ್ಲ, ವಿಧವೆಗೆ ಅನೈತಿಕ ಸಂಬಂಧದಿಂದ ಹುಟ್ಟಿದ ದತ್ತು ಪುತ್ರನಿಗೆ ಅಗ್ನಿಸ್ಪರ್ಶ ಮಾಡುವ ಹಕ್ಕಿಲ್ಲವೆಂದರು. ಈ ಸಂದರ್ಭದಲ್ಲಿ ಸಾವಿತ್ರಿಬಾಯಿಯವರು ಸ್ವತಃ ತಾವೇ ಅಗ್ನಿಸ್ಪರ್ಶ ಮಾಡಿ ಸನಾತನವಾದಿಗಳ ನಂಬಿಕೆಯನ್ನು ಧಿಕ್ಕರಿಸಿದ್ದರು.

1897 ರಲ್ಲಿ ಮಹಾರಾಷ್ಟ್ರ ಮಾರಣಾಂತಿಕ ಪ್ಲೇಗ್ ರೋಗಕ್ಕೆ ಈಡಾಯಿತು. ವಿದೇಶಿ ಸೈನ್ಯದ ಸೇವೆಯಲ್ಲಿದ್ದ ವೈದ್ಯ ಮಗ ಯಶವಂತನನ್ನು ಜನಸೇವೆಗಾಗಿ ಸಾವಿತ್ರಿಬಾಯಿಫುಲೆಯವರು ಕರೆಸಿಕೊಂಡಿದ್ದರು. ತಾವೂ ಪ್ಲೇಗ್ ನಿರತ ರೋಗಿಗಳ ಸೇವೆಯಲ್ಲಿ ತೊಡಗಿಸಿಕೊಂಡಿದ್ದರು. ಗುಡ್ಡದ ಮೇಲಿರುವ ಮನೆಯೊಂದರಲ್ಲಿ ಪುಟ್ಟ ಮಗುವೊಂದು ಪ್ಲೇಗ್ ರೋಗದಿಂದ ನರಳುತ್ತಿದ್ದಾಗ ಮಗುವನ್ನೆತ್ತಿಕೊಂಡು ಬಂದ ಸಾವಿತ್ರಿಬಾಯಿ ಫುಲೆಯವರು ಮಗುವಿನ ಸೇವೆ ಮಾಡುತ್ತಾರೆ. ಅದೇ ಸಮಯದಲ್ಲಿ ಸಾವಿತ್ರಿಬಾಯಿಯವರು ಪ್ಲೇಗ್ ರೋಗಕ್ಕೆ ತುತ್ತಾಗಿ  ಮಾರ್ಚ್ 1, 1897 ರಲ್ಲಿ ಮರಣ ಹೊಂದುತ್ತಾರೆ. ಹೀಗೆ ಅದಮ್ಯ ಚೇತನವೊಂದು ಕಣ್ಮರೆಯಾಯಿತು.

ಸಾವಿತ್ರಿಬಾಯಿ ಫುಲೆಯವರು ನಮ್ಮೊಂದಿಗಿಲ್ಲ. ಅವರು ವಿರೋಧಿಸಿದ ಸನಾತನಿಗಳು ನಮ್ಮ ಮಧ್ಯೆ ಇಂದಿಗೂ ವಿಫುಲವಾಗಿದ್ದಾರೆ. ಇಂದಿಗೂ ಧರ್ಮ, ದೇವರು, ಜಾತಿಯ ಹೆಸರಿನಲ್ಲಿ ದಮನಿತರ ಮೇಲೆ ದೌರ್ಜನ್ಯವೆಸಗುತ್ತಿದ್ದಾರೆ. ಸಾವಿತ್ರಿಬಾಯಿಯವರ ಧೈರ್ಯ, ಶಿಕ್ಷಣ, ಜಾಗೃತಿ, ಸಂಘಟನೆ, ಹೋರಾಟದ ಮಾದರಿ ಇಂದಿಗೂ ಪ್ರಸ್ತುತ.

ಸಂಗ್ರಹ : ವಿವಿಧ ಮೂಲಗಳಿಂದ.

--------------------

# ಮನೆಯಲ್ಲಿ ಸಮಾನತೆ:

**ಮೇಘಾ.ಪಿ.ಕೆ ಲಿಂಗಸೂಗೂರು**

**ಶಾಸ್ತ್ರದಲ್ಲಿ ದೋಷವಿದ್ದರೆ ಹೃದಯದಲ್ಲಿ ತಿದ್ದಬಹುದು,**

**ಹೃದಯದಲ್ಲಿ ದೋಷವಿದ್ದರೆ ಶಾಸ್ತ್ರ ಏನು ಮಾಡುವುದು?**

ದತ್ತಾತ್ರೇಯ ರಾಮಚಂದ್ರ ಬೇಂದ್ರೆ ಅವರು ಹೇಳಿದಂತೆ, ಕಾನೂನು, ನೀತಿ ನಿಯಮಗಳು ಸಾವಿರ ಹೇಳಿದರು! ಈ ಸಮಾನತೆ ಅನ್ನುವ ಭಾವನೆ ಗಂಡು, ಹೆಣ್ಣು ಎಲ್ಲರ ಹೃದಯದಲ್ಲಿ ಸಮಾನವಾಗಿ ಮೂಡಬೇಕಾಗಿದೆ. ಇದೇ ವಿಷಯದ ಸುತ್ತ ನನ್ನ ಒಂದು ಸಣ್ಣ ಸಮಾನ ಅನಿಸಿಕೆ.

ಕುಟುಂಬವು ತರಗತಿಯಂತೆ ಸದಾ ಸಕ್ರೀಯವಾಗಿರುತ್ತದೆ ಆದ್ದರಿಂದ ಕುಟುಂಬದಲ್ಲಿನ ನಡೆನುಡಿ, ಮನೆಯ ಜವಾಬ್ದಾರಿ ಈ ಎಲ್ಲವೂ ಸಮಾನತೆ ಸಾರುವಲ್ಲಿ ಬಹುಮುಖ್ಯ ಪಾತ್ರ ವಹಿಸುತ್ತವೆ. ಮನೆಯಲ್ಲಿನ ಸಣ್ಣ ಸಣ್ಣ ವಿಷಯಗಳೂ ಸಹ ಎಲ್ಲರೂ ಸಮಾನರೂ ಎನ್ನುವ ಹಾಗೇ ಇರಬೇಕಾಗುತ್ತದೆ. ಏಕೆ! ಅಂತಿರಾ? ಏಕೆಂದರೆ, ಭಾರತದ ಒಟ್ಟು ಜನಸಂಖ್ಯೆಯಲ್ಲಿ ಅರ್ಧದಷ್ಟು ಜನಸಂಖ್ಯೆ ಮಹಿಳೆಯರೇ ಇದ್ದಾರೆ. ಅವರಿಗೆ ನೀಡುವ ಮೀಸಲಾತಿ, ಅವರ ಆರ್ಥಿಕ ಆಧಾಯವನ್ನು ದೇಶದ ಪ್ರಗತಿಯಲ್ಲಿ ಸೇರಿಸುವುದಾದರೆ ಅವರ ಸ್ಥಾನಮಾನ, ಅವರು ನಿಭಾಯಿಸುವ ಒತ್ತಡ, ಮನೆ, ಮಕ್ಕಳು, ಸಮಾಜ, ವೃತ್ತಿ ಎಲ್ಲವೂ ಅವಳು ಪ್ರಗತಿಯತ್ತ ಸಾಗುವ ಮತ್ತು ಸಂತೃಪ್ತಿಯಿಂದ ನಾನೂ ಮಾಡಬಲ್ಲೆ ಎಂದು ಆತ್ಮಸ್ಥೈರ್ಯ ಕೊಟ್ಟು ಎಲ್ಲಾ ಮಹಿಳೆಯರಿಗೂ ಮುಖ್ಯವಾಹಿನಿಗೆ ಬರುವಂತೆ ಮಾಡಬೇಕಾಗಿದೆ. ಹೇಗಾಗಿದೆ ಎಂದರೆ, ಮೀಸಲಾತಿ ಇದ್ದರು ಮತ್ತು ಶಿಕ್ಷಣ ಪಡೆದುಕೊಂಡರು ಮಹಿಳೆಯರ ಸಮಾನತೆ ಮನೆಯಲ್ಲಿ ಅದರಲ್ಲೂ ಕುಡುಕುಂಟುಂಬ ಇದ್ದರಾಯಿತು ಗಂಡುಮಕ್ಕಳ ಊಟ ಆದಮೇಲೆನೆ ಹೆಂಗಸರ ಊಟ, ಮನೆಯಲ್ಲಿ ಯಾವುದಾದರೂ ಕಾರ್ಯಕ್ರಮ ಇದ್ದರೆ ಏ! ನೀನು ಇರ್ಲಿ ಬಿಡು, ನಾವು ಇರದ ಜವಾಬ್ದಾರಿ ತೊಗೋತಿವಿ ನೀನು ಅಡುಗೆ ಮನೆದು ನೋಡ್ಕೊ ಅನ್ನೋ ಕುಟುಂಬಗಳು ನಮ್ಮ ಉತ್ತರ ಕರ್ನಾಟಕದಲ್ಲಿ ನೋಡೋದು ಸಹಜ.

ಇದಕ್ಕೆ ನನ್ನ ಅನುಭವಕ್ಕೆ ಬಂದ ಎರಡು ಸನ್ನಿವೇಶಗಳನ್ನ ನೋಡುವುದಾದರೆ, ಸನ್ನಿವೇಶ 1: ಬೆಳಗ್ಗೆ ರಂಗೋಲಿ ಹಾಕ್ತಾ ಪಕ್ಕದ ಮನೆಯವರಿಗೆ ಕೆಲಸ ಆಯ್ತೇನ್ರಿ ಅಂತ ಇನ್ನೊಬ್ಬ ಪಕ್ಕದಮನೆಯವರು ಕೇಳಿದರೆ ಹೂಂ ರೀ ನಮ್ಮ ಯಜಮಾನ್ರು ತರಕಾರಿ ಹೆಚ್ಚತಾಯಿದಾರೆ, ಇಬ್ಬರಿಗೂ ಲೇಟಾಗುತ್ತೆ ಡ್ಯೂಟಿ ಹೋಗಬೇಕು ಮತ್ತು ಮಕ್ಕಳಿಗೆ ನಮ್ಮ ಯಜಮಾನ್ರು ರೇಡಿ ಮಾಡ್ತಾರೆ ಅಂತಾ ಹೇಳುವ ಕುಟುಂಬ ಒಂದು ಕಡೆ ಆದರೆ, ಸನ್ನಿವೇಶ 2: ನಿಮ್ಮ ಮನೆಯ ಕೆಲಸ ಆಯ್ತಾ ಅಂತ ಅವರು ಕೇಳಿದ್ರೆ ನಮ್ಮ ಯಜಮಾನ್ರು ನಿಮ್ಮ ಯಜಮಾನ್ರ ಥರ ಕೆಲಸ ಮಾಡಲ್ಲ ರೀ ನಮ್ಮ ಅತ್ತೆ ಇರ್ಲಿ, ನಾನು ಮಾಡ್ತಿನಿ ಬಿಡು ಎನ್ನುವ ಈ ಎರಡು ಸನ್ನಿವೇಶದಲ್ಲಿ ಸಮಾನ ಜವಾಬ್ದಾರಿ, ಸಮಾನ ನಿರ್ಧಾರಗಳನ್ನು ತೆಗೆದುಕೊಳ್ಳುವ ಕುಟುಂಬಗಳು ಯಾವುದಿರಬಹುದೆಂದು ನೀವೆ ಆಲೋಚಿಸಿ!

ಈಗಲು 50% ಮಹಿಳಾ ಮೀಸಲಾತಿ ಕೊಟ್ಟು, ಮಹಿಳಾ ದಿನಾಚಾರಣೆ, ಮಹಿಳಾ ಸಬಲೀಕರಣ,ಮಹಿಳಾ ಜಾಗೃತಿ ಕಾರ್ಯಕ್ರಮಗಳು ಮಾಡಿ ತಾಸು ಗಟ್ಟಲೆ ಭಾಷಣ ಮಾಡಿದರೂ ಎಸ್.ಡಿ.ಎಂ.ಸಿ ಯಲ್ಲಿ ಅಧ್ಯಕ್ಷರು ಮಹಿಳೆಯರು ಇದ್ದರೆ ಅವರ ಪತಿರಾಯರದ್ದೇ ಕಾರುಬಾರು.ಹಾಗೆಯೇ ಪಂಚಾಯಿತಿಯಲ್ಲಿಯೂ ಹಾಗೆನೇ ಇದಕ್ಕೆ ಒಂದು ಉದಾಹರಣೆ ಹೇಳುವುದಾದರೆ, ಹೆಬ್ಬಟ್ಟು ರಾಮಕ್ಕ ಸಿನಿಮಾ.ಮಹಿಳೆಗೆ ಜವಾಬ್ದಾರಿ ಕೊಟ್ಟು ಅವಳ ನಿರ್ಧಾರಗಳಿಗೆ ಅವಕಾಶ ಕೊಡಬೇಕಾಗಿದೆ.



ಆದ್ದರಿಂದಲೇ ಮೊದಲು ಮಹಿಳೆಗೆ ಮನೆಯಲ್ಲಿ ಅವಳಿಗೆ ಅವಕಾಶ ಕೊಟ್ಟರೆ ಸಮಾಜದಲ್ಲಿಯೂ ತಾನಾಗಿಯೇ ಅವಕಾಶ ದೊರೆಯುತ್ತಾ ಹೋಗುತ್ತವೆ.ಮತ್ತು ಮನೆಯಲ್ಲಿ ಸಮಾನ ಚಿಂತನೆಯುಳ್ಳ ಒಬ್ಬ ಮಹಿಳೆ ಇದ್ದರೆ ಅವಳ ಇಡೀ ಸುತ್ತ ಮುತ್ತ ಮತ್ತು ಕುಟುಂಬವನ್ನು ಉತ್ತಮ ರೀತಿಯಲ್ಲಿ ನಡೆಸಲು ಸಾಧ್ಯವಾಗುತ್ತದೆ.ಆದ್ದರಿಂದ ಮನೆಯಲ್ಲಿ, ಕುಟುಂಬದಲ್ಲಿ ಯಾವುದೇ ತಾರತಮ್ಯವಿಲ್ಲದ ಆಧಾರದ ಮೇಲೆ ಸಕಾರಾತ್ಮಕ ಮೌಲ್ಯಗಳನ್ನು ಉತ್ತೇಜಿಸಿ ಬಾಲಕ,ಬಾಲಕಿಯರ ಪ್ರಬುದ್ಧತೆಗೆ ಅನುಗುಣವಾಗಿ ಅವರ ಜೊತೆ ವರ್ತಿಸಿ ಸ್ನೇಹಿತರಂತೆ ಇರಬೇಕಾಗಿದೆ.ಪೂರ್ವಾಗ್ರಹ ಪೀಡಿತರಾಗದೇ ವಿಭಿನ್ನ ಸಮಾಜದ ಬದಲಾವಣೆಗಳನ್ನು ಅರಿತು ನಾವು ಬದಲಾಗಬೇಕಾಗಿದೆ ಮತ್ತು ಮಹಿಳೆ ಪುರುಷರ ಸಮಾನ ಕೊಡುಗೆ ಸಮಾಜಕ್ಕೆ ಅವಶ್ಯಕವಿದೆ.ಆದ್ದರಿಂದಲೇ ಅದು ನಮ್ಮ ಕುಟುಂಬ ಮತ್ತು ಮನೆಯಿಂದ ಸಾಧ್ಯ ಎನ್ನುವುದು ನನ್ನ ಅಭಿಪ್ರಾಯ.

# جشنِ یوم

**Mohammed Ismail**
**Vijayapura DI**

26 جنوری کو ہمارے ملک میں یوم جمہوریہ کے طور پر منایا جاتا ہے۔ اسی دن 1950 میں ہمارے

ملک کا آئین رسمی طور پر اپنایا گیا اور **جمہوریہ**

ہندوستان ایک مکمل خودمختار ریاست بن گیا۔ ملک کا بنیادی قانون، آئین، مہاتما گاندھی جیسے عظیم آدمیوں اور ہمارے ملک کی آزادی کے لیے لڑنے اور اپنی جانوں کا نذرانہ پیش کرنے والے بے شمار آزادی پسندوں کی محنت سے بنایا ہے۔ لہذا، 26 جنوری کو قومی تعطیل کا اعلان کیا گیا اور تب سے اسے ہندوستان کے یوم جمہوریہ کے طور پر تسلیم کیا جاتا ہے اور منایا جاتا ہے

آزادی کے بعد، ملک کا کوئی خود ساختہ سرکاری آئین نہیں تھا، اس کے بجائے، اس کے قوانین ترمیم شدہ نوآبادیاتی اعمال پر مبنی تھے۔ لہٰذا، حکومت ہند کے سامنے اپنے ملک کے لیے ایک باضابطہ آئین قائم کرنا سب سے اہم کام تھا۔ ہمارا آئین **ڈاکٹر راجندر پرساد** کی صدارت میں آئین ساز اسمبلی کے معزز ممبران کی محنت اور جدوجہد کا نتیجہ ہے۔ **ڈاکٹر امبیڈکر** ہمارے آئین کے باپ تھے۔ دوسرے ممالک کے مختلف آئینوں کا گہرائی سے مطالعہ کرنے کے بعد ہمارے بانیوں نے ہمارا آئین بنایا اور یہ دنیا کا سب سے طویل آئین ہے۔ یہ ان عظیم انسانوں کی لگن اور دور اندیشی کی عکاسی کرتا ہے۔ اس طرح آئین وجود میں آیا۔ آئین کو مکمل ہونے میں دو سال، گیارہ ماہ اور اٹھارہ دن لگے۔ اگرچہ اسے آئین ساز اسمبلی نے 26 نومبر 1949 کو نافذ کیا اور اپنایا لیکن یہ 26 جنوری 1950 کو نافذ کیا گیا۔

ہندوستان کی جدوجہد میں 26 جنوری کی بڑی اہمیت تھی۔ 29 دسمبر 1929 کو لاہور میں کانگریس کے اجلاس میں ایک قرارداد منظور کی گئی تھی جس میں پورن سوراج (مکمل آزادی) کو ہندوستان کا ہدف قرار دیا گیا تھا۔ یہ بھی فیصلہ کیا گیا کہ 26 جنوری کو پورے ہندوستان میں پورن سوراج ڈے کے طور پر منایا جائے۔ مکمل یوم جمہوریت پہلی بار 26 جنوری 1950 کو منایا گیا۔ ۔ آزادی کے حصول کے بعد 15 اگست ہمارا یوم آزادی بن گیا

تاہم، 26 ویں سال ہندوستان کی جدوجہد آزادی میں ایک عظیم واقعہ ہے۔ اس لیے سب کے حق میں یہ تھا کہ 26 جنوری کو نئے آئین کے آغاز کی تاریخ کے طور پر منتخب

کیا جائے۔ اس لیے اس دن کو قومی اہمیت کے دن کے طور پر بڑی خوشی اور فخر سے منایا جاتا ہے۔

ہندوستانی یوم جمہوریہ کو پورے ملک میں بڑے جوش و خروش کے ساتھ مناتے ہیں۔ یہ دن ایک آزاد ملک کے طور پر ہندوستان کے آئین کا احترام کرتا ہے۔ یوم جمہوریہ پر اسکولوں اور کالجوں میں قومی پرچم لہرایا گیا۔ ہندوستان کی جدوجہد آزادی کا جشن منانے والی ثقافتی تقریبات کا پورے ملک میں اہتمام کیا جاتا ہے۔ ہندوستان کے صدر نے نئی دہلی میں انڈیا گیٹ پر قومی پرچم لہرایا۔ نئی دہلی میں، سب سے زیادہ پر وقار پریڈ راج پتھ پر ہوتی ہے۔ ایک ہندوستانی صدر اس پریڈ کا انعقاد کر رہا ہے، جس کا انتظام وزارت دفاع کرتا ہے۔ یہ تقریب نہ صرف ہندوستان کی فوجی صلاحیت کو ظاہر کرتی ہے بلکہ اس کی متنوع ثقافت کو بھی فروغ دیتی ہے۔ اس کے علاوہ اس تقریب میں ملک کے لیے اپنی جانیں قربان کرنے والوں کو خراج تحسین پیش کیا جاتا ہے۔ ہندوستان کے وزیر اعظم نے انڈیا گیٹ کی امر جوان جیوتی پر انگوٹھی رکھ کر شہداء کو خراج عقیدت پیش کیا۔ تقریب 21 توپوں کی سلامی، قومی ترانے اور قومی پرچم لہرانے کے ساتھ جاری ہے۔ نتیجے کے طور پر، بہادر سپاہیوں کو پرم ویر چکر، اشوک چکر، اور ویر چکر سے نوازا جاتا ہے۔ مشکل حالات میں ہمت کا مظاہرہ کرنے والے بچوں اور عام شہریوں کو بھی ایوارڈز سے نوازا جاتا ہے



طیارے جن پتھ سے گزرتے ہیں تو تقریب کا اختتام ہوتا ہے۔ یوم جمہوریہ کی تقریبات پورے ملک میں منعقد کی جاتی ہیں، لیکن دہلی سب سے بڑے جشن کا مرکز ہے۔ ہر سال لاکھوں لوگوں کو یوم جمہوریہ پریڈ کا لائیو ویب کاسٹ دیکھنے کا موقع ملتا ہے۔ 'ویڈیو آن ڈیمانڈ' کو ایونٹ کے بعد خصوصی فوٹیج دیکھنے کے طریقے کے طور پر

دستیاب کرایا جاتا ہے۔ جھنڈا ریاستی دارالحکومتوں میں بھی لہرایا جاتا ہے، اگرچہ چھوٹے پیمانے پر، جہاں گورنر پرچم لہراتے ہیں۔ ضلع ہیڈکوارٹر، سب ڈویژن، تعلقہ اور پنچایتوں میں تقریبات اسی طرح سے ہوتی ہیں

یوم جمہوریہ کی تقریبات کا باضابطہ اختتام بیٹنگ دی ریٹریٹ ہے، جو تمام تقریبات کے ختم ہونے کے بعد ہوتا ہے۔ 26 سے 29 تاریخ تک سرکاری عمارتوں کو چمکتی دمکتی روشنیوں میں خوبصورتی سے جگایا جاتا ہے۔ یوم جمہوریہ کے تیسرے دن 29 جنوری کو بیٹنگ ریٹریٹ کی تقریب منعقد کی جاتی ہے۔ ڈرمر کی کال کے دوران، ڈرمر سولو پرفارمنس پیش کرتے ہیں۔ بینڈ مقبول مارشل دھن، سارا جہاں سے اچھا بجاتے ہوئے واپس مارچ کرتے ہیں۔ ٹھیک شام 6 بجے، یوم جمہوریہ کی تقریبات کے اختتام پر قومی پرچم کو نیچے اتارا جاتا ہے اور قومی ترانہ گایا جاتا ہے.



ہندوستان میں یوم جمہوریہ بہت جوش و خروش کے ساتھ منایا جاتا ہے، اور ہمیں آزادی کے طویل سفر اور ملک کو ایک خودمختار ملک میں تبدیل کرنے کے لیے اپنے آباؤ اجداد کی جدوجہد کو یاد رکھنا چاہیے۔ یہ تمام ہندوستانیوں کے لئے آزادی کے جوہر کا جشن منانے اور ہندوستان کو اس کے آزادی کے جنگجوؤں کے خوابوں کو پورا کرنے میں مدد کرنے کا دن ہے۔ یوم جمہوریہ کے موقع پر شہریوں کو حوصلہ افزائی کی جاتی ہے کہ وہ اپنی حب الوطنی اور فخر کا مظاہرہ کریں۔ طلباء اچھے شہریوں کے طور پر زندگی گزارنے اور اپنے ملک کو زیادہ خوش اور پرامن بنانے میں مدد کرنے کا عہد کرتے ہیں.

# ಧರ್ಮದ ನಡೆ ಸಮಾನತೆಯ ಸಮನ್ವಯದೆಡೆಗೆ

**Darshitha C L Raichur**

ಜಗತ್ತಿನ ಇತಿಹಾಸದ ಪುಟಗಳನ್ನು ತಿರುವಿದಾಗ ಧರ್ಮದ ಕುರಿತಾದ ಪುಟಗಳ ಸಂಖ್ಯೆಗಳು ಹೆಚ್ಚಿನವುಗಳಿವೆ. ಒಂದು ಧರ್ಮವು ಹುಟ್ಟಲು ಮತ್ತು ಧರ್ಮ ನಶಿಸಲು ಕಾರಣವಾದ ಅಂಶಗಳನ್ನು ವಿಮರ್ಶಿಸಿದಾಗ, ಬಹುತೇಕ ಒಂದು ನಾಣ್ಯದ ಎರಡು ಮಗ್ಗುಲಲ್ಲಿ ಬರೆದ ಅನುಭವವಾಗಬಹುದು. ಅಂದರೆ ಧರ್ಮ ಹುಟ್ಟಿಗೆ ಕಾರಣವಾದ ಅಂಶವೇ ಭಿನ್ನರಾಗ ತಳೆದಾಗ ಧರ್ಮ ನಶಿಸಲು ಕಾರಣವಾಗುತ್ತದೆ ಎಂಬುದು ಕ್ಲಿಷ್ಟ ಸತ್ಯ.

ಬನ್ನಿ ಸ್ವಲ್ಪ ವಿವರವಾಗಿ ನೋಡೋಣ, ಜನರು ಸಾಮಾನ್ಯವಾಗಿ ತಮ್ಮ ಧರ್ಮವನ್ನು ಒಪ್ಪಿಕೊಂಡು ಅಪ್ಪಿಕೊಂಡು ಆಚರಿಸಲು ಕೆಲವು ಮೂಲಾಂಶಗಳಿವೆ. ಅವುಗಳೆಂದರೆ, **ಜನರಿಗೆ ಧರ್ಮದ ಆಚರಣೆಯು ಸರಳವಾಗಿರಬೇಕು. ಎಲ್ಲರನ್ನೂ ಸಮಾನವೆಂದು ಸಾರಿರಬೇಕು. ವ್ಯಕ್ತಿಯ ವೈಯಕ್ತಿಕ ಘನತೆಯನ್ನು ಎತ್ತಿ ಹಿಡಿದಿರಬೇಕು. ಮನುಷ್ಯತ್ವದ ನಡತೆಯನ್ನು ಮತ್ತು ಮಾನವೀಯತೆಯನ್ನು ಪ್ರತಿಪಾದಿಸುವ** ಧರ್ಮವು ಸದಾಕಾಲ ಉಳಿಯಬಲ್ಲದು.

ಉದಾಹರಣೆಯೊಂದಿಗೆ ಹೇಳುವುದಾದರೆ, ಜೈನಧರ್ಮದಲ್ಲಿನ ಬಟ್ಟೆಯನ್ನು ತ್ಯಜಿಸುವುದು. ದೀರ್ಘ ಉಪವಾಸ, ಸಲ್ಲೇಖನ ವ್ರತದಲ್ಲಿನ ಅಂತ್ಯ ಇದು ಜನಸಾಮಾನ್ಯರಿಗೆ ಆಚರಿಸಲು ಕಷ್ಟವಾಗುವುದು. ಒಬ್ಬ ವ್ಯಕ್ತಿಯ ದೈನಂದಿನ ಬದುಕಿನಲ್ಲಿ ತನಗೆ ಆಚರಿಸಲು ಕ್ಲಿಷ್ಟವೆನಿಸುವ ಅಂಶಗಳಿಂದ ತನ್ನ ಧರ್ಮದ ಮೇಲಿನ ನಂಬಿಕೆಗಳನ್ನು ಕಳೆದುಕೊಳ್ಳುವ ಸಾಧ್ಯತೆಗಳನ್ನು ಕಾಣಬಹುದು. ಹಾಗೆಯೇ ಕಾಲಕ್ಕೆ ತಕ್ಕಂತೆ ಬದಲಾಗದ ಧರ್ಮಗಳು ತಮ್ಮ ಅಸ್ತಿತ್ವವನ್ನು ಪ್ರಶ್ನಿಸಿಕೊಳ್ಳಬೇಕಾಗುತ್ತದೆ. ಜೈನ ಧರ್ಮವು ಈ ಕಾರಣಕ್ಕಾಗಿಯೇ ಹೆಚ್ಚು ಅನುಯಾಯಿಗಳನ್ನು ದೀರ್ಘಕಾಲಕ್ಕೆ ಉಳಿಸಿಕೊಳ್ಳಲು ಸಾಧ್ಯವಾಗಿಲ್ಲವೆಂಬುದು ನಮ್ಮ ಕಣ್ಣೆದುರಿನ ಸತ್ಯವಾಗಿದೆ. ಹಾಗೆಯೇ ಹಿಂದು ಧರ್ಮದಲ್ಲಿನ ಅಸ್ಪೃಶ್ಯತೆಯ ಅಂಶವು ಅಲ್ಲಿನ ಎಲ್ಲರೂ ಒಂದೇ ಎಂಬ ಒಗ್ಗಟ್ಟನ್ನು ಸದಾ ಪ್ರಶ್ನಿಸುತ್ತಾ ಬಂದಿದೆ. ಮುಸಲ್ಮಾನ್ ಮತದಲ್ಲಿನ ಹೆಣ್ಣಿನ ಬಗೆಗಿನ ತೀವ್ರತರದ ನಿರ್ಬಂಧವೆನಿಸುವ ಆಚರಣೆಗಳು ಸದಾ ಆಕೆಯನ್ನು ಪ್ರಶ್ನೆಗೀಡುಮಾಡುತ್ತಾ ಬಂದಿವೆ.

ಧರ್ಮದ ವಿಷಯದಲ್ಲಿ ಸರಳ ಸುಂದರ ಸತ್ಯವೆಂದರೆ, ''ಮನುಷ್ಯನಿಂದ ಧರ್ಮವೇ ಹೊರತು ಧರ್ಮದಿಂದ ಮನುಷ್ಯ ಅಲ್ಲ''. ಹೇಳಲು ಮತ್ತು ಬರೆಯಲು ಈ ಸಾಲು ಸುಲಭ ಆದರೆ ಅದನ್ನು ನಮ್ಮ ದೈನಂದಿನ ಜೀವನದ ಸನ್ನಿವೇಶಗಳಲ್ಲಿ ಅರ್ಥಮಾಡಿಕೊಳ್ಳುವ, ಅನುಸರಿಸುವ ಪ್ರಬುದ್ಧತೆಯ ಅವಶ್ಯಕತೆಯಿದೆ. ಈ ಪ್ರಬುದ್ಧತೆಯು ಹೇಗೆ? ಎಲ್ಲಿಂದ ಬರುತ್ತದೆ? ಎಂಬ ಪ್ರಶ್ನೆಯನ್ನಿಟ್ಟಾಗ...

ಬಹುಮುಖ್ಯವೆನಿಸುವುದು, ತಾನು ದಿನನಿತ್ಯದಲ್ಲಿ **ನನ್ನ ಧರ್ಮದಿಂದ ಹೊರನಿಂತು ಅನ್ಯಧರ್ಮೀಯರ ಆಚರಣೆಗಳನ್ನು, ಸನ್ನಿವೇಶಗಳನ್ನು ನೋಡುವ ಪ್ರಯತ್ನ ಮಾಡಬೇಕು.** ಅನುಭವದ ಒಂದು ಉದಾಹರಣೆಯೊಂದಿಗೆ ಹೇಳುವುದಾದರೆ, ಹೀಗೆ ನಾನು ಚಿಕ್ಕಮಗಳೂರಿನಿಂದ ನನ್ನೂರಿಗೆ(ಶೃಂಗೇರಿ) ಬಸ್ಸಿನಲ್ಲಿ ಹೊರಟಿದ್ದೆ. ನನ್ನ ಪಕ್ಕದಲ್ಲಿ ಒರ್ವ ಮುಸ್ಲಿಂ ಮೌಲಿಯೊಬ್ಬರು ಕುಳಿತ್ತಿದ್ದರು. ಅವರು ತಮ್ಮ ಧರ್ಮದ ಗೀತೆಗಳನ್ನು ಅವರ ಮೊಬೈಲಿನಲ್ಲಿ ಕೇಳುತ್ತಾ ಬಂದರು(ನನಗೆ ಕೇಳುವಷ್ಟು ಜೋರು ಹಾಕಿದ್ದರು). ನನಗೆ ಅಂದು ನಿಜವಾಗಲೂ ಕಿರಿಕಿರಿ ಎನಿಸಿತು. ಆ ಸಂದರ್ಭದಲ್ಲಿ ನನಗೆ ಕೆಲವು ಯೋಚನೆಗಳು ಬಂದವು. ಹಲವು ಬಾರಿ ನಮ್ಮ ಖಾಸಗಿ ಬಸ್ಸುಗಳಲ್ಲಿ ಹಿಂದೂ ಧರ್ಮದ, ಕ್ರಿಶ್ಚಿಯನ್ ಧರ್ಮದ ಹಾಡು ಹಾಕುತ್ತಾರೆ ಆಗ ಈ ಮೌಲಿಗೆ ಖಂಡಿತವಾಗಿಯೂ ಕಿರಿಕಿರಿ ಎನಿಸುತ್ತದೆಯೆಂದು. ನಾನಿಲ್ಲಿ ಸ್ಪಷ್ಟಪಡಿಸಲು ಬಂದ ವಿಷಯ, ನಮಗೆ ಬೇರೆಯವರ ಆಚರಣೆಗಳು ಅಡಚಣೆಯೆಂದು ಅನಿಸಿದ ಸಂದರ್ಭಗಳಲ್ಲಿ, **ನಮ್ಮ**

**ಆಚರಣೆಗಳು ಬೇರೆಯವರಿಗೆ ಕಿರಿಕಿರಿಯೆನಿಸಬಹುದಾದ ಸಂದರ್ಭದಲ್ಲಿ ಬೇಕಾಗುವ ಧನಾತ್ಮಕ ಮುಂಜಾಗೃತ ಮೌಲ್ಯಗಳನ್ನು** ನಾವು ಖಂಡಿತವಾಗಿಯೂ ಬೆಳೆಸಿಕೊಳ್ಳಬೇಕಾಗುತ್ತದೆ.

ನಮ್ಮ ಸರ್ಕಾರಿಸ್ವಾಮ್ಯದ ಬಸ್ಸುಗಳಲ್ಲಿ ಕೆಲವು ಧರ್ಮಕ್ಕೆ ಸೀಮಿತ ಫೋಟೋಗಳನ್ನು (ಡ್ರೈವರನ ಧರ್ಮಕ್ಕೆ ತಕ್ಕಂತೆ) ಅಂಟಿಸಿರುವುದನ್ನು ಗಮನಿಸಿರಬಹುದು. ಇಲ್ಲಿ ನಾವು ಏನು ಮಾಡುವುದು? ಏನು ಬೇಡ...! ಈ ವಿಷಯದ ಕುರಿತು ನಮ್ಮ ಸಮಾನಮನಸ್ಕರೊಂದಿಗೆ ಸರಳ ಮಾತುಕತೆಯಲ್ಲಿ ತೊಡಗುವುದು ಮುಖ್ಯವೆನಿಸಬಹುದು. ಆ ಮಾತುಕತೆಯು, **ನನ್ನದಲ್ಲದ ಧರ್ಮಕ್ಕೆ ಸಂಬಂಧಿಸಿದ ಫೋಟೋಗಳನ್ನು ಒಪ್ಪಿಕೊಳ್ಳುವ ವಿಶಾಲದೃಷ್ಟಿಕೋನಕ್ಕೆ ಬದಲಾದರೆ** ಇದಕ್ಕಿಂತ ದೊಡ್ಡ ಬದಲಾವಣೆ ಬೇಕಿಲ್ಲ ಅಲ್ಲವೇ?

ಭಾರತದ ವಿಭಜನೆಯ ಬಗೆಗೆ ಹಲವು ವಿಚಾರ ಲಹರಿಗಳಿವೆ. ಇಲ್ಲಿ ವಿಭಜನೆಯ ಸಂದರ್ಭದಲ್ಲಿನ ಎರಡು ಪ್ರಮುಖ ಧರ್ಮಗಳು ತಾವು ಇನ್ನೊಂದು ಧರ್ಮದವರ ನೆಲೆಯಲ್ಲಿ ನಿಂತು ನೋಡುವ ವಿಶಾಲಭಾವನೆಯನ್ನು ತಳೆಯಬೇಕು ಅಷ್ಟೆ. ಬಹುಸಂಖ್ಯಾತರ ನೆಲದಲ್ಲಿ ನಾವು ನಡೆದುಕೊಳ್ಳಬೇಕಾದ ಜರೂರನ್ನು ಅರಿಯಬೇಕು. ಅದೇ ಸಮಯದಲ್ಲಿ ಬಹುಸಂಖ್ಯಾತರು ನಾನೊಬ್ಬ ಅಲ್ಪಸಂಖ್ಯಾತನಾಗಿದ್ದರೆ ನಾನು ಹೇಗೆ ಯೋಚಿಸುತ್ತಿದ್ದೇನೆಂಬ ಉನ್ನತಭಾವ ತಾಳಬೇಕಾದುದು ತುರ್ತಾಗಿ ಬೇಕಾಗಿದೆ.

ಭಾರತವು ನಾವು ಸಂವಿಧಾನದಲ್ಲಿ ಸೂಚಿಸಿದಂತೆ ಜಾತ್ಯತೀತ (ಸೆಕ್ಯೂಲರ್ ಪದ ಬಳಕೆಯ ಅರ್ಥದ) ರಾಷ್ಟ್ರ. ನಮ್ಮದು ಧರ್ಮ ನಿರಪೇಕ್ಷ ರಾಷ್ಟ್ರ. ಅಂದರೆ **ಭಾರತದ ಸರ್ಕಾರಕ್ಕೆ ಯಾವುದೇ ಅಧಿಕೃತ ಧರ್ಮವಿಲ್ಲ.** ಸರ್ವಧರ್ಮದ ಅಸ್ತಿತ್ವವನ್ನು ಒಪ್ಪಿಕೊಂಡಿರುವ ಪ್ರಬುದ್ಧತೆಯ ಭಾರತ ನಮ್ಮದು. ಈ ಜಗತ್ತಿನಲ್ಲಿ ಎಲ್ಲ ಜೀವಿಗಳಿಗೆ **ಸ್ವಾಭಾವಿಕವಾಗಿ ಬದುಕುವ ಸಮಾನ ಹಕ್ಕಿದೆ,** ಹೀಗಿದ್ದರೂ ಮನುಷ್ಯನ ವಿಚಾರದಲ್ಲಿ ಅದೆಲ್ಲವೂ ಅತಿಯೆನ್ನುವಷ್ಟು ಮಿಥ್ಯವೆನಿಸಿದೆ. ಮೇಲುಕೀಳೆಂಬ ಭಾವಕ್ಕೆ ಬಿದ್ದು ಒದ್ದಾಡುತ್ತಿದ್ದಾನೆ. ಸಮಾನತೆಯನ್ನು ಆಳವಾಗಿ ಭರತಖಂಡದಲ್ಲಿ ಗಿಡವಾಗಿ, ಮರವಾಗುವಂತೆ ಬೀಜವನ್ನು ಬಿತ್ತಿದವರು ಬುದ್ಧ, ಬಸವ ಮತ್ತು ಅಂಬೇಡ್ಕರ್.

ಸರಳ ಜೀವನ ನಡೆಸುವ ಸುಂದರ ಸತ್ಯವನ್ನು ಮೊದಲು ತೆರೆದಿಟ್ಟ ಶ್ರೇಯ ಭಗವಾನ್ ಬುದ್ಧನಿಗೆ ಸಲ್ಲುತ್ತದೆ. ಅದರಲ್ಲೂ ಜನ ಸಾಮಾನ್ಯನಿಗೆ ಆಸೆಯು ದುಃಖಕ್ಕೆ ಕಾರಣವಾಗುತ್ತದೆಯೆಂಬ ಸಣ್ಣ ಸತ್ಯವನ್ನು ನೇರವಾಗಿ ಹೇಳಿದವನು ಅವನೇ ಇರಬೇಕು. ಸರಳತೆ ಮತ್ತು ಅಹಿಂಸೆಯು ಜೀವನದ ಅವಿಭಾಜ್ಯವಾಗಬೇಕೆಂದು ಮೃದುವಾಗಿ ಹೇಳಿದ್ದು ಬುದ್ಧ. ಜರ್ಮನಿಯ ಒಬ್ಬ ಪ್ರಸಿದ್ಧ ವಿಜ್ಞಾನಿ "ನಾನು ಇನ್ನೊಮ್ಮೆ ಹುಟ್ಟುವುದಾದರೆ, ಭಾರತದಲ್ಲಿ ಹುಟ್ಟುವೆ ಏಕೆಂದರೆ, **ಕಾಯಕವೇ ಕೈಲಾಸ** ಎಂಬ ಸರಳಜೀವನ ಸತ್ಯವ ಮೊದಲು ತೆರೆದಿಟ್ಟಿದ್ದು ವಿಶ್ವಗುರು ಬಸವಣ್ಣನವರು" ಎನ್ನುತ್ತಾನೆ. ಜೀವನದ ಸಾರ್ಥಕತೆ ನಮ್ಮ ಪ್ರತಿ ಕ್ಷಣದಲ್ಲಿ ಅಡಗಿದೆ. ಕಾಯಕವನ್ನು ಮಾಡುವ ಮೂಲಕ ಮುಕ್ತಿ ಸಾಧಿಸಬಹುದು ಎಂದು ಅನುಭವ ಮತ್ತು ಅನುಭಾವದಿಂದ ಹೇಳಿದ್ದು ಬಸವಣ್ಣ.

ಮನುಷ್ಯನನ್ನು ಪ್ರಾಣಿಗಿಂತ ಕಡೆಯಾಗಿ ಕಾಣುತ್ತಿದ್ದ ಸಮಾಜದಿಂದ ಬಂದ ಅಂಬೇಡ್ಕರ್ 'ಆಧುನಿಕ ಸಮಾಜದ ಸಮಾನತೆಯ ಹರಿಕಾರ' ಎನ್ನಬಹುದು. ಶೋಷಿತರನ್ನು, ಸಮಾಜದಿಂದ ಕಡೆಗಣನೆಗೆ ಒಳಗಾದ ಜನಾಂಗವನ್ನು ಸಮಾಜದಲ್ಲಿ ಇತರರಂತೆ ಬದುಕಲು ಅನುವು ಮಾಡಿಕೊಟ್ಟು, ಅವರಿಗೆ ದಕ್ಕಬೇಕಾದ ಹಕ್ಕನ್ನು ಸಂವಿಧಾನದ ಮೂಲಕ ನೀಡಿದ ಶ್ರೇಯ ಅಂಬೇಡ್ಕರ್ ಅವರಿಗೆ ಸಲ್ಲುವುದು. ಮಹಿಳೆಯರನ್ನು ಮತ್ತು ದಲಿತರನ್ನು ಎರಡನೇ ದರ್ಜೆಯಾಗಿ ಕಂಡ ಈ ಸಮಾಜದಲ್ಲಿ ಸಮಾನತೆಯ ಸವಿ ಗಾಳಿಯನ್ನು ಸೃಷ್ಟಿಸಿದ ಕೀರ್ತಿ ಅಂಬೇಡ್ಕರರದು. ಸಮಬಾಳು–ಸಮಪಾಲು ಎಂಬ ತತ್ವದಡಿಯಲ್ಲಿ ಸಮಾಜದ ಉನ್ನತಿಗೆ ಮತ್ತು ಮಾನವೀಯತೆಯ ಸಮಾಜವನ್ನು ಕಟ್ಟಲು ಶ್ರಮಿಸಿದ 'ಸಮಾನತೆಯ ಬೌದ್ಧಿಕ ದಿವ್ಯ ಚೇತನಗಳಿಗೆ'

ನಮೂನಗಳು. ಈ ಭವ್ಯ **ಭಾರತವನ್ನು ಒಂದು ಶತಮಾನದ ಬೌದ್ಧಿಕ ಆಲೋಚನೆಯಷ್ಟು ಮುಂದುವರೆಯುವಂತೆ, ತೆರೆದಿಡುವಂತೆ** ಮಾಡಿದ ಸಂಪೂರ್ಣ ಶ್ರೇಯ ಈ ತ್ರಿಮೂರ್ತಿಗಳದ್ದು.

ಯಾವುದೇ ಕ್ಷೇತ್ರದ ವಿಚಾರವು ಶ್ರೇಷ್ಠ–ಕನಿಷ್ಠದ ಭಾವ ತಳೆದ ತಕ್ಷಣ ಸಮಸ್ಯೆಯ ಮೊಳಕೆಯೊಡೆಯುವುದು. ಧರ್ಮದ ವಿಷಯದಲ್ಲಿ ಅದು ಹೆಚ್ಚೆನ್ನಬಹುದೇನೋ, ಧರ್ಮಸಂಕಟವೆಂದರೂ ತಪ್ಪಿಲ್ಲ. ನನ್ನ ಧರ್ಮವು ಶ್ರೇಷ್ಠವೆಂದ ತಕ್ಷಣ ಎಲ್ಲ ತಾಪತ್ರ್ಯಗಳು ಮುಂಚೂಣಿಯಲ್ಲಿ ಬಂದು ನಿಲ್ಲುವುದು. ಈ ಕಾರಣದಿಂದ ಧರ್ಮದ ಆಚರಣೆಗಳ ಕುರಿತಾದ ಸನ್ನಿವೇಶಗಳು ಬಂದಾಗ ಶಾಲೆಗಳಲ್ಲಿ ಶಿಕ್ಷಕನ ಪಾತ್ರ ಬಹುಮುಖಿಯಾಗಿರಲೇಬೇಕಾಗುತ್ತದೆ. ಆತನು ಸಾಧ್ಯವಾದಷ್ಟು ತನ್ನ ಧರ್ಮದ ಪ್ರಭಾವದಿಂದ ಹೊರತಾಗಿ ಯೋಚಿಸಿ, ಸಂವೇದಿಸುವ ಜರೂರು ಇದೆ. ಕೊನೆಯಲ್ಲಿ, ಎಲ್ಲಾ ಧರ್ಮವು ಒಂದೇ ಎನ್ನುವ, ದಯವೇ ಧರ್ಮದ ಮೂಲವೆನ್ನುವ ಯಾವುದೇ ವ್ಯಕ್ತಿಗೆ, ವಿಚಾರಕ್ಕೆ ಸದಾ ಸಮಾಜ (ನಾವು) ತೆರೆದುಕೊಳ್ಳುತ್ತಿರಬೇಕು. ನನ್ನ ಧರ್ಮದ ಶ್ರೇಷ್ಠತೆಯನ್ನು ಆಚರಿಸುವುದಕ್ಕೆ, ಸಂಭ್ರಮಿಸುವುದಕ್ಕೆ ನನ್ನ ಮನೆಯಿದೆ, ನನ್ನ ಮನವಿದೆ ಅಲ್ಲಿ ಅದನ್ನು ಪುರಸ್ಕರಿಸೋಣ. ಹೊಸ್ತಲಿನಾಚೆಗೆ ನಮ್ಮ ಮನೋಧೋರಣೆಗಳು ಶಾಂತಿಯುತ ಸಮಾಜಕ್ಕೆ ಬೇಕಾದ ಪರಿಕರಗಳನ್ನು ಸಿದ್ಧಗೊಳಿಸುವ, ಸಿದ್ಧಿಸಿಕೊಳ್ಳುವತ್ತ ಸಾಗಲಿ... ಇತಿಹಾಸದ ಪುಟಗಳಲ್ಲಿ ಸಾಮರಸ್ಯದ ಬೀಜ ಬಿತ್ತುವವರ ಸಂಖ್ಯೆಯು ಏರುಗತಿ ಪಡೆದುಕೊಳ್ಳಲಿ. ಸರ್ವ ಜನಾಂಗದ ಶಾಂತಿಯ ತೋಟದ ಸ್ವಾಸ್ಥ್ಯವು ಸದಾ ಹಸಿರಾಗಿರಲಿ...

# Gender equality/inequality?

**-Shruti S P Chittapur**

Gender equality or inequalities starts from childhood in the minds of children. Is it impacting equality or inequality by our practical lifestyle? Hope we need to ask ourselves by thinking our surrounding children. Gender equality is sexual equality, is the state of equal rights, opportunities, and resources regardless of gender but is it happening? In this today's world being a fundamental human rights are essential to achieve potential, peaceful society for sustainable development. This has been shown that empowering women helps productivity and economic growth for our betterment. many of the examples given for this.

When it comes to childhood what kind of language are we using with respect to gender equality? When we talk about gender and language many of the professions are represented for men itself for example doctor, conductor, driver, scientist. These are gender neutral professions which represents both male and female but many of us add the prefixes to those professions like lady doctor, male doctor, lady conductor, male conductor etc. Is this necessary to add a prefix to the gender-neutral professions?

With respect to this One best example, I quote here is that, in our daily school visits when I enter a classroom children start greeting with good morning, ma’am.... When Mr.xyz teacher enters the class greets that good morning, sir.... By looking at it once I asked children that why you said ma'am to me? And why sir to Mr.xyz? The children replied that ನೀವು ಹುಡುಗಿ ಇದ್ದೀರಿ ಅದಕ್ಕೆ ma’am, ಅವರು ಹುಡುಗ ಅದಾರ್ರಿ ಅದಕ್ಕೆ sir ಅಂತಿವ್ರಿ. Then I was quite surprised then again, I asked them that what you people will wish me and Mr.XYZ on “Teachers Day”? Children replied that “Happy Teachers Day.” Then again, I asked them that why you people wished same to both of us? why not happy ma’am's day and happy Sir’s Day? Then 4 to 5 students sat quiet and started thinking then one of the students replied that ಹೌದ್ರೀ ಅವರು ನಮ್ಗ ಕಲಸ್ತಾರೆ ನೀವು ನಮ್ಗ ಕಲಿಸ್ತೀರಿ ಅದಕ್ಕೆ ಟೀಚರ್ಸ್ ಡೇ ಅಂತೀವ್ರಿ, Sir ಮತ್ತ Ma’am ಯಾಕ ಅಂತಿವಿ ಗೊತ್ತಾಗಲಿಲ್ಲರಿ.

This is the one example where I go through every day. As teacher is a gender-neutral word but we differentiate Ma’am and sir. is this need to bring changes with respect to this. No sir, no ma'am in some of Kerala school students to use the gender-neutral term teacher. Very recent news came on January 2nd, 2023, Karnataka High court says use general word to refer to ex-service men to ex-service personal to make it gender neutral.

**Gender and education:**

According to NSO National Statistical Office data as of the year 2021 about literacy rate: -

| % | Male | Female | Average |
|---|---|---|---|
| **Karnataka** | 83.4 | 70.5 | 77.2 |
| **India** | 84.70 | 70.30 | 77.70 |

As this, it reflects India states with lowest literacy rate. Gender inequality index says out of 146 countries India ranks 135. Wage gap has decreased in some extent in as compared to the previous years but never been closed in fact according to global gender gap report 2022, it will take another 132 years to close the global gender gap, currently in 2022 the pay gap difference still at 17% so these kind of inequalities might be the one of the reason of lack of education with this even many of crime cases are increasing like Rape, violence, wife battering, divorce and child marriage etc all issues affecting/revolving around women's life and her growth.

For example, various kinds of harassment exploitation and violence is happening to women if a couple given birth to baby girls one after another continuously. Husband points out to the wife itself or in laws blame on the daughter in laws itself and starts harassing her by words by physically, by mentally I do not understand how husband determines the fault in wife without understanding scientifical reason. more than 50% of father's genes determines baby sex. Since man’s sperm carries equal number of X and Y chromosomes, females have two X chromosomes and males have 1 X & 1 Y chromosome.

Man’s X and women’s X combines to become a girl. Man's Y with women’s X combine to become a boy. If this is the condition how men/husbands are deciding the female/wife is the reason and why that baby girl and baby boy that differentiation in the minds? So, lack of education leading this kind of issues.

**Gender and opportunities:**

In Karnataka out of total population 29. 9% of women’s searching for employment according to 2018-19 survey. Even we can see inequalities in the wage. Especially in Karnataka women's economic involvement is very low and which is affecting on the growth of GDP.

- In the state level, women IAS officers - 28%.
- Women High court judges 28.46%.
- Women in state Vidhana Sabha just 3.5 1%
- Chairperson ratio in different academies like art music literature language academics ratio of female and male is 2:16.
- Members ratio in different academies is 30:151 (female and male)

This is what the condition is, many of the politician says that women will not win in the election so they themselves decide not to give the tickets. Is this the equality?

I went across some of the incidents that a boy tells another boy that ಹೆಂಗಸಗತೆ ಕೈಯಾಗ ಬಳಿ ಹಾಕೊಂಡಿ ಏನು? ನೀನು ತಿರುಗಿ ಹೊಡಿಬೇಕಿತ್ತು In this statement women and bangle, is it mean that it represents women’s are weak? No.... But why this kind of statements represent to women I did not get it. And one more sentence heard back-to-back that ಹೆಂಗಸಗತೆ ಯಾಕ್ ಅಳಲಿಕತ್ತಿ? Crying is one kind of emotion why it is tagged with women? There are some gender sensitive statements we hear in our surroundings. These are small statements but impacting further badly on women’s growth.

I had a session on gender equality in one of the high schools by conducting activity. i.e., I took some of the materials and kept it on table and called to one girl and one boy and made them to stand in front of the table then called another boy and told him to distribute these materials to Shruti and Shreyas. Shreshth started distributing the materials one after another.

**Shruti received**- Teddy bear, stove, mirror, powder.
**Shreyas received** -Ball, bat, bike, tractor.
**Me:** Then I asked Shreshth that why you have given mirror, powder, teddy bear to Shruti itself.
**Shretha:** ಅವರು ಅಡುಗೆ ಮಾಡ್ತಾರೆ, ಮೇಕಪ್ ಮಾಡ್ಕೋತಾರೆ, ಹುಡುಗಿಯರಿಗೆ ಟೆಡ್ಡಿ ಇಷ್ಟರೀ ಅದಕ್ಕೆ.
**Me:** Then why these to Shreyas?
**Shretha:** ಬ್ಯಾಟ ಬಾಲ್ ಅದಾಪ್ರಿ ಬೈಕ್ ಟ್ರ್ಯಾಕ್ಟರ್ ಇವೆಲ್ಲ ಹುಡುಗರು! ಅದಕ್ಕ ಶ್ರೇಯಸ್ಸಗೆ ಕೊಟ್ಟೈನಿರಿ.
**Me:** See this is the difference which is raising in the minds of the children then I asked Shreshta do you feel that Shruti cannot play bat ball?
**Shretha:** ಅದು ಹುಡುಗುರ ಆಡೋದ್ರಿ.
**Me:** Then why Girls Indian cricket team is there? children were mum. Shrestha, before coming to school do not you look at mirror and come? while combing, don't you see your face? all says yes but one brilliant says we see but frequently seen by girls. I accepted then my question was why stove given to Shruti?
**Shretha:** ಅಡಗಿ ಅವರು ಮಾಡ್ತಾರೆ ಮತ ಅವರಿಗೆ ಕೊಡಬೇಕ್ರಿ. Very politely he said.

I thank those three for demo. Stove is not only meant for girls/women. Cooking is not meant for women I have given example that many of star hotels/local hotels chefs are male, many of women are leading businesses/agriculture/finance/sports etc. For example, Nirmala Sitharaman, Kiran Majumdar Shah, Kalpana Chawla, Harman Preet Kaur……list goes on. Many of the women's work at home as well as work in different fields. Women are not only meant for kitchen, cooking and household activities and this is also one skill. even by knowing of many examples many of us differentiate in materials, sports, professions etc.

In this way many of the examples are there so this is need of hour to address, such practicality should be spread to the society for sustainable development and these aspects need to change in the state of mind and thought process. In this present scenario we need to ask ourselves that are we really gender sensitive in our homes, in public? question is left on us.

*****Change our words to change the world*****

**Re'new'ing Resolutions**

**Mathumitha. Chamrajnagara DI.**

Early in 2021, when I joined as an associate, I had come across Kamala Mukunda' s book, 'What did you ask in school today?' and I was very fascinated by the thoughts and perspectives that she had shared. One of the perspectives that she shared and that which stayed with me since then is this, she talks about how she stumbled across this perspective of a developmental psychologist, Alison Gopnik, who in an interview in 2017, stated that an adult's attention is like that of a focused beam of spotlight. We find it very easy to tune-out the interruptions the flow of thoughts and switch our attention back to the specific situation. But she says, the children's attention is like that of a lantern that casts light to a wider area.

> This thought then leads as to how, when we say that the children are bad at paying attention, do we actually mean that the children are bad at **"not"** paying attention, because their attention captures a lot of other information simultaneously which we may miss? And may be that is more important for them, in a way that they learn by themselves to filter out and focus, or maybe their lack of attention may also help us stop and see if we need to reflect on our practices or engagements?

I have held this thought at the back of my head in my everyday school practices. Time and again, when I hold space for the children, their thought, their expression, and communication, it just makes me feel so happy at the end of the day. To do just the basic of giving the children their space, that they are entitled to in the school, makes a difference in their life, and in my perspective and the way I work too. I would like to talk about a particular experience I had with regards to my classroom practice.

When I began to do school visits in Sagar, Madhya Pradesh, the children there spoke, Bundelkhandi, which is their local language. I did speak, but in the initial days to build the relation with the children in a language that is not their own, I thought would be difficult. I was very apprehensive, but then these children! They just understood my helplessness, and made efforts to include me, relate my Hindi with their Bundelkhandi words, taught me in the process, and I made them aware of my signs, expression, and body-language too. I strongly believe that these are modes of communication too, and slowly the children picked up, so did I, and our wavelengths began to match, it took time, naturally so because it was children, but then this is very less compared to that with that of the adults. Children pick up so much, by looking, observing, imitating, laughing about it, but gradually learning about it. The way they pick up language is not systematic at times, but that is how they picked up!

End of 2022, in December I was transferred to Chamrajnagara, yet another challenge of a new language found itself before me, and again I was apprehensive even more, because in MP atleast I knew Hindi so as to somehow manage along, but here Kannada is entirely a new language, and how do I do it. Slowly grappling along I picked up bits and pieces of verbs that are used in the school, talked to the children. I told to the children that I do not understand the language, and that I cannot communicate back. The beautiful aspect of that of the children that warms my heart is that they never leave you alone. They are always fascinated to know about this new strange being in their classroom, some call it children being distracted and playful, but I see it as an inquisitive nature of the child, to know, to be aware, so as to accept. That is what they did, they communicated, they saw my clueless face, they got a Tamil friend in their class to translate, they showed it to me to by actions, they communicated slowly and repeatedly so that I can understand, and that is how they have given me space in their classroom and accepted. This is what makes me, I do not have a word to that feeling, because it is so beautiful. Like I imagine and also have been part of situations where I as an adult did not know the language of the major group, and I was left alone, with a certain sense of shyness and I felt isolated. I have seen this happen to many adults too, like they feel awkward and out-of-place when they could not communicate and belong along in a particular language. But this never happens with the children, they always tug at my dress, hold my hand, pull me towards them, and somehow make me feel belonged.

Thinking back this is something that I want to take ahead in my new location of work. Like appreciate the skills that the children show, it may not be big, but they are trying in their own capacities. Like learning a language is something that will benefit them in their further education, but that of picking up the action, reading expressions, inclusive practices is that what will go a long way in socio-emotionally enhancing the quality of their life. Learning is language is all about communication and expression, and learning the words, the grammar, the right spellings, etc. is just a part of it, so look for ways the child communicates to you. Look for the ways it expresses itself to you. Be more open, be more acceptive, be more appreciative. I am writing this to tell myself, to hold space for the child to not just learn subject matter in the classroom, but also to grow and live a better life.

# ಆ ಪ್ರಶ್ನೆಗಳಿಗೆ ನಮ್ಮ ಕೆಲಸವೇ ಉತ್ತರ……

**(ಅಂಗನವಾಡಿಗಳೊಂದಿಗಿನ ಅನುಭವ–1)**

**C.Sannathaayanna ECE Team**

ಯಾವುದೇ ಕ್ಷೇತ್ರದಲ್ಲಾಗಲೀ ಕೆಲಸಮಾಡಬೇಕಾದರೆ ನಾವು ಆ ಕ್ಷೇತ್ರದ ಸಂಪೂರ್ಣ ಮಾಹಿತಿ ತಿಳಿಯಬೇಕಾಗುತ್ತೆ. ಈ ನಿಟ್ಟಿನಲ್ಲಿ ನಮ್ಮ ಸಂಸ್ಥೆಯು ಕೂಡಾ ಕಳೆದ 20 ವರ್ಷಗಳಿಂದ ಶಿಕ್ಷಣ ಕ್ಷೇತ್ರದಲ್ಲಿ ಪ್ರಾಥಮಿಕ ಮತ್ತು ಹಿರಿಯ ಪ್ರಾಥಮಿಕ ಶಾಲೆಗಳೊಂದಿಗೆ ಕೆಲಸ ಮಾಡಿ ಇದರ ಅನುಭವಗಳು ಹೇಳುವಂತೆ ಶಾಲಪೂರ್ವ ಶಿಕ್ಷಣವು ಸಹ ಮಕ್ಕಳ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರವಹಿಸುತ್ತದೆ ಎಂದು ತಿಳಿಸುತ್ತದೆ. ಅದಕ್ಕಾಗಿ ಸಂಸ್ಥೆಯು ಕಳೆದ 8 ವರ್ಷಗಳಿಂದ ಸಂಗಾರೆಡ್ಡಿಯಲ್ಲಿ ಈ ಕ್ಷೇತ್ರದಲ್ಲಿ ಕೆಲಸಮಾಡುತಿದ್ದು ಇದರ ಅನುಭವಗಳ ಆಧಾರವಾಗಿ ಕಲಬುರಗಿ ಶಾಲಾಪೂರ್ವ ಶಿಕ್ಷಣ ಕ್ಷೇತ್ರದಲ್ಲಿ ಕೆಲಸ ಮಾಡಲು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಗ್ರಾಮೀಣ ವಲಯ ಸಹಯೋಗದೊಂದಿಗೆ ಕೆಲಸ ಮಾಡಲು ಪ್ರಾರಂಬಿಸಿ ಇಲ್ಲಿನ ಕಾರ್ಯಕ್ಷೇತ್ರದ ಪ್ರಸ್ಥುತ ಸ್ಥಿತಿಗತಿಗಳನ್ನು ಅರ್ಥೈಸಿಕೊಳ್ಳಲು ಮೊದಲು ನಾವು ಇಲಾಖೆಯ ಸಿ.ಡಿ.ಪಿ.ಓ ಮತ್ತು ಮೇಲ್ವಿಚಾರಕಿಯರೊಂದಿಗೆ ಚರ್ಚಿಸಿ ಗ್ರಾಮೀಣ ವಲಯದಲ್ಲಿನ 4 ಸರ್ಕಲ್‌ನಲ್ಲಿ ಬರುವ ಅಂಗನವಾಡಿಗಳ ಪ್ರೋಪೈಲ್ಸ್ ಸಂಗ್ರಹಿಸಿ ಮುಂದಿನ ಹಂತದಲ್ಲಿ ಕಾರ್ಯನಿರ್ವಹಿಸಲು ಯೋಜನೆಯನ್ನು ರೂಪಿಸಿಕೊಂಡೆವು.




ಅಂಗನವಾಡಿಗಳನ್ನು ಮತ್ತು ಅಲ್ಲಿನ ಶಿಕ್ಷಕಿಯರನ್ನ ಅರ್ಥೈಸಿಕೊಳ್ಳಲು ಪ್ರೋಪೈಲ್ಸ್‌ನ ಬಾಗವಾಗಿ ಕೇಂದ್ರದ, ಮಕ್ಕಳ, ಶಿಕ್ಷಕಿ ಮತ್ತು ಸಹಾಯಕಿಯರ ಮಾಹಿತಿಯನ್ನು ಕೇಳಿದಾಗ ಹಲವು ವಿಮರ್ಶೆಗಳು, ಧನಾತ್ಮಕ ಮತ್ತು ಋಣಾತ್ಮಕ ಅಭಿಪ್ರಾಯಗಳು ಶಿಕ್ಷಕಿಯರಿಂದ ವ್ಯಕ್ತವಾದವು. ಈ ಅಭಿಪ್ರಾಯಗಳು ಮೇಲ್ವಿಚಾರಿಕಿಯರ ಗಮನಕ್ಕೆ ಬಂದ ನಂತರ ಅವರು ಇದುವರೆಗೂ ಸಿ.ಡಿ.ಎಫ್ ಸಂಸ್ಥೆಯು ಕೂಡಾ ಈ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿದೆ, ನೀವು ಕೂಡಾ ಇದೇ ಕ್ಷೇತ್ರದಲ್ಲಿ ಕೆಲಸ ಮಾಡುವುದು ಎಂದಾಗ ನಮಗೂ ಸಹ ಅಂತಹ ಹಲವಾರು ಗೊಂದಲಗಳಿವೆ ಎಂದು, ನೀವು ಸಹ ಅವರಂತೆ ನಮಗೆ ಟ್ರೈನಿಂಗ್ ಕೊಡುತ್ತೀರಾ? ಅಂಗನವಾಡಿಗಳಿಗೆ ವಸ್ತುಗಳನ್ನು ಕೊಡುಸುತೀರಾ? ಹೀಗೆ ಹಲವು ಪ್ರಶ್ನೆಗಳ ಮೂಲಕ ಅವರ ಗೊಂದಲಗಳನ್ನ ವ್ಯಕ್ತಪಡಿಸಿದರು. ನಾವು ಅವರ ಗೊಂದಲಗಳನ್ನು ಪರಿಹರಿಸಲು ಪ್ರಯತ್ನಿಸಿದರೂ ಅವರು ಒಪ್ಪಲು ಸಿದ್ದವಿರಲಿಲ್ಲ. ನಂತರ ನಾವು ನಾಲ್ಕು ವಲಯಗಳಲ್ಲಿನ ಕೇಂದ್ರಗಳ ಬೇಟಿ ಮಾಡಿ ಶಿಕ್ಷಕಿಯರೊಂದಿಗೆ ಶಾಲಪೂರ್ವ ಶಿಕ್ಷಣ, ಮಕ್ಕಳ ಸಂಖೆ ಮತ್ತು ಸಮುದಾಯದ ವಿಚಾರಗಳ ಕುರಿತು ಚರ್ಚಿಸಿ ನಾಲ್ಕು ವಲಯಗಳಿಂದ ಒಟ್ಟು 50 ಕೇಂದ್ರಗಳನ್ನು ಆಯ್ಕೆ ಮಾಡಿಕೊಂಡು ಅಲ್ಲಿನ ಶಿಕ್ಷಕಿಯರ ಸಾಮಾರ್ಥ್ಯ ಅಭಿವೃದ್ಧಿಗೆ ಸಹಕರಿಸಲು ತಿಂಗಳಿಗೆ 3–4 ಬಾರಿ ಕೇಂದ್ರ ಬೇಟಿ ಮಾಡಿ ಮಕ್ಕಳ ಅಭಿವೃದ್ಧಿಗೆ ಸಹಕಾರಿಯಾಗು ವಿವಧ ಚಟುವಟಿಕೆಗಳನ್ನು ಪ್ರದರ್ಶನ ಮಾಡುವುದರ ಮೂಲಕ ಶಿಕ್ಷಕಿಯರಿಗೆ ಹಿಮ್ಮಾಹಿತಿ ನೀಡುತ್ತಾ ಅವರು ಸಹ ಶಾಲಾಪೂರ್ವ ಶಿಕ್ಷಣವನ್ನು ಇನ್ನು ಉತ್ತಮವಾಗಿ ನಡೆಸಲು ಪ್ರೋತ್ಸಾಹಿಸುತ್ತಾ ಬಂದಿದ್ದೇವೆ.

ಇದರ ಮುಂದುವರೆದ ಬಾಗವಾಗಿ 50 ಶಿಕ್ಷಕಿಯರಿಗೆ ತಿಂಗಳಿಗೊಮ್ಮೆ ಕಾರ್ಯಗಾರವನ್ನು ಹಮ್ಮಿಕೊಂಡು ಆರಂಭದಲ್ಲಿ ನಮ್ಮ ಸಂಸ್ಥೆ,ಮಕ್ಕಳ ಸರ್ವತೋಮುಖ ಬೆಳವಣಿಗೆ ಸಂಬಂದಿಸಿದ ಹಲವು ವಿಷಯಗಳ ಬಗ್ಗೆ




ಚರ್ಚೆ, ವಿಡಿಯೋ, ಚಿತ್ರ, ಮತ್ತು ಪ್ರದರ್ಶನಗಳ ಮೂಲಕ ಶಿಕ್ಷಕಿಯರ ಸಾಮಾರ್ಥ್ಯ ಅಭಿವೃದ್ಧಿಗೆ ಸಹಕರಿಸುವುದು ಕಂಡು, ಶಿಕ್ಷಕಿಯರು ಕಾರ್ಯಗಾರದ ಮತ್ತು ಕೇಂದ್ರ ಬೇಟಿಯ ಸಂಬಂಧಿಸಿದ ಅನಿಸಿಕೆ, ಅಭಿಪ್ರಾಯಗಳನ್ನು ಹೇಳುತ್ತಾ ಸಂಸ್ಥೆಯವರು ನಮಗೆ ಮತ್ತು ಮಕ್ಕಳ ಉತ್ತಮ ಬೆಳವಣಿಗೆಗೆ ಸಹಕರಿಸಲು ಕಾರ್ಯನಿರ್ವಹಿಸುತ್ತಿದ್ದಾರೆಂದು ಮೇಲ್ವಿಚಾರಕಿಯರೊಂದಿಗೆ ಹಂಚಿಕೊಂಡರು. ಈ ವಿಷಯಗಳನ್ನು ಗ್ರಹಿಸಿಕೊಂಡ ಮೇಲ್ವಿಚಾರಕಿಯರು ಕಾರ್ಯಗಾರಗಳು ಮತ್ತು ಬೇಟಿಗಳು ಶಿಕ್ಷಕಿಯರ ಮತ್ತು ಮಕ್ಕಳ ಬೆಳವಣಿಗಗೆ ಸಹಕಾರಿಯಾಗುತ್ತಿವೆನ್ನುವುದನ್ನು ಕೇಂದ್ರಗಳಲ್ಲಿ ನೋಡಲು ಕಾಣುತಿದ್ದವು.

ನಂತರ ಆರಂಭದ ವರ್ಷದಲ್ಲಿ ಮೇಲ್ವಿಚಾರಕಿಯರಿಗೆ ಮೊದಲನೇ ಹಂತದಲ್ಲಿ ಶೈಕ್ಷಣಿಕ ಕ್ಷೇತ್ರಬೇಟಿ ಸಮೇತ ಕಾರ್ಯಾಗಾರವನ್ನು ತೆಲಂಗಾಣದ ಸಂಗಾರೆಡ್ಡಿಯಲ್ಲಿ ಹಮ್ಮಿಕೊಂಡು ಅದರಲ್ಲಿ ಸಂಸ್ಥೆಯ ಪರಿಚಯ, ಎನ್ ಇ ಪಿ, ಶಾಲಾಪೂರ್ವ ಶಿಕ್ಷಣದ ಪ್ರಾಮುಖ್ಯತೆ ಬಗ್ಗೆ ಚರ್ಚಿಸಿದ ಅಂಶಗಳು ಮತ್ತು ಸಂಗಾರೆಡ್ಡಿಯಲ್ಲಾದ ಹಲವಾರು ಬದಲಾವಣೆಗಳು ಮತ್ತು ನಮ್ಮ ಕಾರ್ಯವಿಧಾನವನ್ನು ಕಂಡು ಮೇಲ್ವಿಚಾರಕಿಯರೆಲ್ಲರು ನಮ್ಮ ಬಾಗದಲ್ಲೂ ಸಹ ಈ ವಿಧವಾದ ಬದಲಾವಣೆ ತರಲು ಕೆಲಸ ಮಾಡಬೇಕೆನ್ನುವ ಭರವಸೆಯನ್ನು ವ್ಯಕ್ತಪಡಿಸಿದರು. ಮುಂದಿನ ಬೆಳವಣಿಗೆಗಾಗಿ ಇಲಾಖೆಯು ಪ್ರತಿ ತಿಂಗಳು ಆಯೋಜಿಸುವಂತಹ ವಲಯ/ ಕ್ಷೇತ್ರ ಸಭೆಗಳಲ್ಲೂ ಸಹ ನಾವು ಶಿಕ್ಷಕಿಯರಿಗೆ ವಿಷಯವಾರು ಶಾಲಾಪೂರ್ವ ಶಿಕ್ಷಣದ ಚಟುವಟಿಕೆಗಳನ್ನು 2–3 ಗಂಟೆಗಳ ಕಾಲ ಪ್ರದರ್ಶನ ಮಾಡುವುದಕ್ಕೆ ಮೇಲ್ವಿಚಾರಕಿಯರು ಸಹಕರಿಸುವುದರೊಂದಿಗೆ ಅವರು ಸಹ ಸಕ್ರಿಯವಾಗಿ ಪಾಲ್ಗೊಳ್ಳುತ್ತಿದ್ದು, ಶಿಕ್ಷಕಿಯರು ವಿಷಯವಾರು ಚಟುವಟಿಕೆಗಳನ್ನು ಆಯೋಜಿಸಿಕೊಂಡು ಮಕ್ಕಳನ್ನು ಸಕ್ರಿಯವಾಗಿ ತೊಡಗಿಸಿಕೊಳ್ಳಬೇಕೆಂದು ಹೇಳುತ್ತಿದ್ದಾರೆ.




ಮೇಲ್ವಿಚಾರಕಿಯರ ಸಾಮಾರ್ಥ್ಯ ಅಭಿವೃದ್ದಿಗಾಗಿ ಮಕ್ಕಳ ಕಲಿಕೆ, ಶಿಕ್ಷಕಿಯರ ಮಾರ್ಗದರ್ಶನ ಮಾಡುವುದು, ಇತ್ಯಾದಿ ವಿಷಯಗಳ ಮೇಲೆ ಕಾರ್ಯಾಗಾರವನ್ನು ಹಮ್ಮಿಕೊಂಡ ನಂತರ, ಅವರು ಸಹ ಅಂಗನವಾಡಿ ಕೇಂದ್ರಗಳ ಅಭಿವೃದ್ದಿಗೆ ಸಹಕರಿಸಲು ಕೇಂದ್ರಗಳ ಬೇಟಿ ನೀಡುವುದು, ಪ್ರತಿ ತಿಂಗಳ ಶಿಕ್ಷಕಿಯರ ಕಾರ್ಯಾಗಾರದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವುದು, ಮತ್ತು ವಲಯ/ಕ್ಷೇತ್ರ ಸಭೆಗಳ, ಕಾರ್ಯಾಗಾರಗಳನ್ನು ಆಯೋಜಿಸಲು ಸಹಕರಿಸುತ್ತಿದ್ದಾರೆ.ತಮ್ಮ ತಮ್ಮ ವಲಯಗಳಲ್ಲಾದ ಬದಲಾವಣೆಗಳನ್ನು ಇತರ ವಲಯದ ಮೇಲ್ವಿಚಾರಕಿಯರೊಂದಿಗೆ ಹಂಚಿಕೊಂಡು ಅಲ್ಲಿನ ಬೆಳವಣಿಗೆಯಲ್ಲೂ ಸಹಕಾರಿಯಾಗುತ್ತಿದ್ದಾರೆ.

# ಭಾರತದ ಗಣರಾಜ್ಯೋತ್ಸವದ ಸಂಕ್ಷೇಪ್ತ ನೆಡೆದುಬಂದ ದಾರಿ.

ಮೊಹಮ್ಮದ್ ಹುಸೇನ್.ಮಾಡಗಿರಿ ಮಾನವಿ

ಭಾರತ ಸ್ವತಂತ್ರ ಬಂದು ಸಂವಿಧಾನ ಅಳವಡಿಸಿಕೊಂಡ ನಂತರ ಬಹಳಷ್ಟು ಅಭಿವೃದ್ಧಿಯಾಗಿದೆ. ಆದರೆ ಇತಿಹಾಸ ತಿರುಗಿ ಹಾಕಿ ನೋಡಿದಾಗ ಸ್ವತಂತ್ರಕ್ಕಿಂತ ಪೂರ್ವದಲ್ಲಿ ಭಾರತ ಹಲವಾರು ಸಣ್ಣ ಸಣ್ಣ ಸಂಸ್ಥಾನಗಳಾಗಿ ವಿಂಗಡಿಣೆಗೊಂಡಿದ್ದವು. ಅವುಗಳು ತನ್ನದೇ ಆದ ಸ್ವತಂತ್ರ ರಾಜ್ಯಗಳು ಎನ್ನುವ ಉದ್ದೇಶದಿಂದ ವಂಶಪಾರಂಪರಿಕ ರಾಜ್ಯವನ್ನು ಆಳ್ತಾ ಇದ್ದವು ತಮ್ಮ ಸಂಸ್ಥಾನಗಳೇ ತಮ್ಮ ಸ್ವತಃ ಸ್ವಂತ ರಾಜ್ಯಗಳು ಎನ್ನುವ ಪರಿಕಲ್ಪನೆಯ ಮೂಡಿತ್ತು, ಅದರಲ್ಲಿ ಉದಾಹರಣೆ ಹೇಳಬೇಕೆಂದರೆ ಗುಪ್ತರು ಮೌರ್ಯರು ರಾಷ್ಟಕೂಟರು ಮೊಘಲರು ಮತ್ತು ಅದೇ ಸಂದರ್ಭದಲ್ಲಿ ಇರುವಂತಹ ಇನ್ನಿತರ ಸಣ್ಣ ಸಣ್ಣ ಸಂಸ್ಥಾನಗಳು ಕೂಡ ಅಲ್ಲಿ ತಲೆ ಎತ್ತಿ ಆಡಳಿತ ನಡೆಸುತ್ತಿದ್ದರು.

ಅದೇ ಈ ಸಂದರ್ಭದಲ್ಲಿ ಬಂದಿರುವಂತ ವಿದೇಶಿ ವ್ಯಾಪಾರಿಗಳು ವಿಶೇಷವಾಗಿ ಇಂಗ್ಲೀಷರು ನಮ್ಮನ್ನ ಒಡೆದು ಹಾಳುವ ನೀತಿಯಿಂದ ಇಡೀ ರಾಷ್ಟದ ಸಣ್ಣ ಸಣ್ಣ ಸಂಸ್ಥಾನಗಳಲ್ಲಿ ತಮ್ಮೊಳಗೆ ಜಗಳವನ್ನ ಹಚ್ಚಿ ತಾವು ಬೆಳೆಯನ್ನು ಬೆಳೆಸಿಕೊಳ್ಳುವುದನ್ನ ಪ್ರಾರಂಭಿಸಿದವು ಮುಂದಿನ ಸಂದರ್ಭದಲ್ಲಿ ಇಡೀ ಆಡಳಿತ ವ್ಯವಸ್ಥೆಯನ್ನು ತಮ್ಮ ಕೈಯಲ್ಲಿ ಇಡಿದುಕೊಂಡವು. ಮುಂದೆ ಭಾರತ ಸ್ವತಂತ್ರಕ್ಕಾಗಿ ಹೋರಾಟ ಪ್ರಾರಂಭವಾದವು. ಹಲಾವರು ಸ್ವತಂತ್ರ್ಯಹೊರಾಟಗಾರರ ಬಲಿದಾನದ ಪ್ರತಿಫಲ ಫಲ ಸ್ವತಂತ್ರ ಕೂಡ ಬಂತು. ಈ ಸ್ವಂತಂತ್ರ್ಯಕ್ಕಿಂತ ಮುಂಚೆ ಭಾರತಕ್ಕೆ ಒಂದು ಸಂವಿಧಾನ ಬೇಕು ಎನ್ನುವಂತಹ ಒಂದು ಕೂಗು ಕೇಳು ಬಂದಿತ್ತು. ಹಾಗಾಗಿ 1946 ಡಿಸೆಂಬರ್ 9ರಂದು ಸಚ್ಚಿದಾನಂದ ಸಿನ್ಹಾ ತಾತ್ಕಾಲಿಕ ಅಧ್ಯಕ್ಷರ ನೇತೃತ್ವದಲ್ಲಿ ಸಂವಿಧಾನ ರಚನಾ ಸಭೆ ಪ್ರಾರಂಭವಾಯಿತು. ನಂತರ 1946 ಡಿಸೆಂಬರ್ 11ರಂದು ಬಾಬು ರಾಜೇಂದ್ರ ಪ್ರಸಾದ್ ಅವರ ಅಧ್ಯಕ್ಷತೆಯಲ್ಲಿ ಸಂವಿಧಾನ ರಚನಾ ಸಭೆ 389 ಸದಸ್ಯರನ್ನೊಳಗೊಂಡ ಸಮಿತಿಯು ರಚನೆಯಾಯಿತು. ಇದು ಭಾರತ ವಿಭಜನೆಯಾದ ನಂತರ 299 ಸದಸ್ಯರು ಈ ರಚನಾ ಸಮಿತಿಯಲಲಿ ಇದ್ದರು.



ಈ ಸಂವಿದಾನ ರಚನಾ ಸಮಿತಿ ಮಾದರಿ ರಚನೆ ಸಮಿತಿಯಾಗಿತ್ತು. ಕಾರಣ ಈ ಒಂದು ರಚನಾ ಸಮಿತಿಯಲ್ಲಿ ವಿಶೇಷವಾಗಿ ಮಹಿಳೆಯರು ಕೂಡ ಸದಸ್ಯರಾಗಿ ಪಾಲ್ಗೊಂಡಿದ್ದರು ಅವರುಗಳು ಈ ಕೆಳಗಿನಂತಿದ್ದಾರೆ. ಸರೋಜಿನಿ ನಾಯ್ಡು ವಿಜಯಲಕ್ಷ್ಮಿ ಪಂಡಿತ್ ಸುಚೇತನ ಕೃಪಾಲಿನಿ, ರಾಜಕುಮಾರಿ ಅಮೃತ್ ಕೌರ್, ಕಮಲಾ ಚೌದರಿ, ಹಂಸ ಜೀವನರಾಜ್, ಲೀಲಾ ರಾಮ್, ಆನಿ ಮಾಸ್ಕರೇನ್, ಅಮ್ಮು ಸ್ವಾಮಿನಾಥನ್, ದುರ್ಗಾ ಭಾಯಿ ದೇಶಮುಖ್, ಮಾಲತಿ ಚೌದರಿ, ರೇಣುಕಾ ಖಾರೆ, ದಾಕ್ಷಾಯಿಣಿ ವೇಲಾಯುದನ್, ಪೂರ್ಣಿಮಾ ಬ್ಯಾನರ್ಜಿ ಹಾಗೂ ಬೇಗಂ ಐಜಾಜ್ ರಸೂಲ್. ಈ ರೀತಿಯಾಗಿ 15 ಜನ ಮಹಿಳೆಯರು ಈ ಸಮಿತಿಯಲ್ಲಿ ತಮ್ಮದೇ ಆದ ಸೇವೆ ನೀಡಿದ್ದಾರೆ.

ಜೊತೆಗೆ ಈ ಸಂವಿಧಾನ ರಚನೆ ಸಮಿತಿಯಲ್ಲಿ ಕನ್ನಡಿಗರು ಕೂಡ ಸದಸ್ಯರಾಗಿದ್ದರು ಅವರುಗಳು ಈ ರೀತಿಯಾಗಿದ್ದಾರೆ. ಬಿ.ಎನ್ ರಾವ್, ಕೆಸಿ ರೆಡ್ಡಿ, ಕೆಂಗಲ ಹನುಮಂತಯ್ಯ, ಟಿ ಸಿದ್ದಲಿಂಗಯ್ಯ, ಟಿ ಚೆನ್ನಯ್ಯ, ಆರ್.ದಿವಾಕರ, ಎಸ್ ನಿಜಲಿಂಗಪ್ಪ, ಎಚ್ ಆರ್ ಗುರುದೇವರೆಡ್ಡಿ, ಕೆ.ಎಂ ಪುನ್ನಚ್ಚ, ಎಸ್.ವಿ

ಕೃಷ್ಣಮೂರ್ತಿರಾವ್ ಹಾಗೂ ಹೆಚ್ ಸಿದ್ಧವೀರಪ್ಪ ಇವರುಗಳು ಕೂಡ ಕರ್ನಾಟಕದಿಂದ ಸಂವಿಧಾನ ರಚನಾ ಸಂಇತಿಯಲ್ಲಿ ಪಾಲ್ಗೊಂಡು ತಮ್ಮ ಸೇವೆ ನೀಡಿದ್ದಾರೆ. ರೀತಿಯಾಗಿ ಪ್ರತಿ ರಾಜ್ಯದಿಂದ ಹಲವಾರು ಪ್ರಾತಿನಿಧ್ಯತೆಯನ್ನು ಈ  ಸಮಿತಿಯು ಸದಸ್ಯರನ್ನು ಹೊಂದಿತು.

ಮುಂದೆ 1947 ಆಗಸ್ಟ್ 29ರಂದು ಏಳು ಜನ ಸದಸ್ಯರ ಒಳಗೊಂಡ ಸಮಿತಿ ಅಂಬೇಡ್ಕರ್ ಅವರ ಅಧ್ಯಕ್ಷತೆಯಲ್ಲಿ ಸಂವಿಧಾನ ಕರಡು ಸಮಿತಿಯನ್ನು ರಚನೆ ಮಾಡಲಾಯಿತು. ಆದರೆ ಈ ಸಮಿತಿಯಲ್ಲಿನ ಸದಸ್ಯರು ಬೇರೆಬೇರೆ ಕಾರಣಗಳಿಂದ ಆರು ಸದಸ್ಯರು ಕೈಬಿಟ್ಟೆದ್ದರಿಂದ ಇಡೀ ಒಂದು ಸಂವಿಧಾನ ಕರಡು ಸಮಿತಿಯ ಎಲ್ಲಾ ಜವಾಬ್ದಾರಿಯನ್ನು ಡಾ. ಬಿಆರ್ ಅಂಬೇಡ್ಕರ್ ಹೆಗಲಿಗೆ ಬಿದ್ದಿತು ಇದರಿಂದ ಇಡೀ ಒಂದು ಸಂವಿಧಾನವನ್ನು  ಇವರ ಪೂರ್ಣ ಪ್ರಮಾಣದಲ್ಲಿ ಕರಡು ಸಮಿತಿಯಲ್ಲಿ ಜವಾಬ್ದಾರಿಯಿಂದ ಪಾಲ್ಗೊಂಡು ತಮ್ಮ ಕೆಲಸವನ್ನು ಬಹಳ ಅಚ್ಚುಕಟ್ಟಾಗಿ ಮಾಡಿದರು. ಈ ಮೂಲ ಸಂವಿಧಾನ ಆಂಗ್ಲ ಭಾಷೆಯಲ್ಲಿ ಬರೆಯಲ್ಪಟ್ಟಿದ್ದು 395 ವಿಧಿಗಳು, 8 ಪರಿಚ್ಛೇದಗಳು, 22 ಭಾಗಗಳು ಮತ್ತು 1,17,369 ಪದಗಳನ್ನು ಹೊಂದಿದೆ. ಈ ಸಂವಿಧಾನವನ್ನು 2 ವರ್ಷ, 11 ತಿಂಗಳು, 18 ದಿನಗಳ ಅವಧಿಯಲ್ಲಿ ಬರೆಯಲ್ಪಟ್ಟಿದೆ. ಈ ಒಂದು ಸಂವಿಧಾನವನ್ನು 1949 ಜನವರಿ 26ರಂದು ಸಂವಿಧಾನ ಸಮಿತಿಯಲ್ಲಿ ಅಂಗೀಕರಿಸಲಾಯಿತು. ಅದರೆ ಈ ದಿನವನ್ನು 2015 ರಿಂದ ಭಾರತ ಸರಕಾರ 'ಸಂವಿಧಾನ ದಿವಸ' ಎಂದು ಆಚರಿಸುತ್ತಿದೆ.

ಸಂವಿಧಾನ ಜನವರಿ 26 ರಂದೆ ಏಕೆ ಜಾರಿಗೊಳಿಸಿದರೇಂದರೆ 1930 ಲಾಹೋರ್ ಅಧಿವೇಶನದಲ್ಲಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನದಲ್ಲಿ ಪೂರ್ಣ ಸ್ವರಾಜ್ (ಸಂಪೂರ್ಣ ಸ್ವಂತಂತ್ರ್ಯ) ಘೋಷಣೆಯ  ನೆನಪಿನಾರ್ಥ 1950 ಜನವರಿ 26ರಂದು ಭಾರತ ಸಂವಿಧಾನವನ್ನು ಜಾರಿಗೊಳಿಸಲಾಯಿತು. ಈ ದಿನವನ್ನು ನಾವು 'ಗಣರಾಜೋತ್ಸವ ದಿನ' ಎಂದು ಆಚರಿಸಿಲಾಗಿತ್ತದೆ. ಅದೇರೀತಿ 1952ರಲ್ಲಿ ಸಾರ್ವತ್ರಿಕ ಚುನಾವಣೆಯಾಗಿ ಚುನಾಯಿತ ಮೊತ್ತಮೋದಲ ಸರ್ಕಾರ ರಚನೆಯಾಗಿತ್ತು. ಆಗಿನಿಂದ ಇಲ್ಲಿಯವರೆಗೆ 17 ಲೋಕಸಭಾ ಚುನಾವಣೆಯನ್ನು ನಾವು ಕಂಡಿದ್ದೇವೆ. ಇಷ್ಟೆಲ್ಲ ಇತಿಹಾಸ ನಮ್ಮ ಗಣರಾಜ್ಯ ಹೊಂದಿದೆ.

ಆದರೂ ನಮ್ಮ ಸರಕಾರಗಳ ಭರವಸೆ ಹಾಗೂ ಕಾರ್ಯ ಅನುಷ್ಠಾನದ ನಡುವೆ ದೊಡ್ಡ ಕಂದಕವೇ ಉಂಟಾಗಿದೆ ಬಂಡಿಗಟ್ಟಲೆ ಬರವಸೆಗಳನ್ನು ನೀಡಿದರು ಕಾರ್ಯನುಷ್ಟಾನದಲ್ಲಿ ಕೊರತೆಗೆ ಸಾಕ್ಷಿಯಾಗಿದೆ.



ಏನೆ ಇದ್ದರು ಗಣರಾಜ್ಯ ಈ ರೀತಿ ಸಮಗ್ರತೆ ಸಂಪೂರ್ಣ ಬದ್ಧವಾಗಿದ್ದು ಕೊಂಡೆ ವೈವಿಧ್ಯತೆಯನ್ನ ಗುರುತಿಸುವುದು ಗೌರವಿಸುವುದು ಹಾಗೂ ಅದನ್ನು ಸಂಭ್ರಮಿಸುವುದು ಗಣರಾಜ್ಯದ ಮುಖ್ಯ ಉದ್ದೇಶವಾಗಿರುತ್ತದೆ. ಇಂದು ನಾವೆಲ್ಲರೂ ಕೂಡ ಗಣರಾಜ್ಯದ ಮುಖಾಂತರವಾಗಿ ಪ್ರತಿಯೊಬ್ಬ ಪ್ರಜೆಯೂ ಸಮಾನವಾಗಿ ತಮ್ಮ ಹಕ್ಕುಗಳನ್ನ ಚಲಾಯಿಸುವ ಮತ್ತೆ ಸರಕಾರದಿಂದ ಬರುವ ಎಲ್ಲಾ ಸೌಲಭ್ಯಗಳನ್ನು ಪಡೆಯುವಂತಾಗಲಿ ಈ ಒಂದು ಗಣರಾಜ್ಯದ ಮೂಲ ಉದ್ದೇಶ ಇಡೇರುವಂತಾಗಲಿ  ಎನ್ನುವುದೇ ನನ್ನ ಒಂದು ಆಶಯ.

# ಯುವಶಕ್ತಿ

ಅಮೃತಾ ಹೆಗಡೆ ರಾಯಚೂರು

ದೇಶದಾದ್ಯಂತ ರಾಷ್ಟ್ರೀಯ ಯುವ ದಿನವಾಗಿ ಜನವರಿ ೧೨ನ್ನು ಆಚರಿಸಲಾಗುತ್ತದೆ. ದೇಶ ಕಂಡಂತಹ ಮಹಾನ್ ಸಂತ ಸ್ವಾಮಿ ವಿವೇಕಾನಂದರ ಜನ್ಮದಿನವನ್ನು ಯುವ ದಿನವನ್ನಾಗಿ ಆಚರಿಸಲಾಗುತ್ತದೆ. ಭಾರತಕ್ಕೆ ಸ್ವಾಮಿ ವಿವೇಕಾನಂದರ ಕೊಡುಗೆ ಗಣನೀಯವಾದದ್ದು. ೧೯೮೪ರಲ್ಲಿ ಮೊದಲ ಬಾರಿಗೆ ಭಾರತ ಸರ್ಕಾರವು ಸ್ವಾಮಿ ವಿವೇಕಾನಂದರ ಜನ್ಮದಿನವನ್ನು ಯುವ ದಿನವನ್ನಾಗಿ ಆಚರಿಸಲು ಘೋಷಿಸಿತು.

ದೇಶದ ಯುವಕರಲ್ಲಿ ಜಾಗೃತಿ ಮೂಡಿಸಲು ಮತ್ತು ಯುವಕರನ್ನು ದೇಶದ ಬಗೆಗಿನ ಚಿಂತನೆಗೆ ಪ್ರೇರೇಪಿಸಲು ರಾಷ್ಟ್ರೀಯ ಯುವ ದಿನದ ಆಚರಣೆ ಉಪಯುಕ್ತವಾಗಿದೆ. ಸ್ವಾಮಿ ವಿವೇಕಾನಂದರ ಆದರ್ಶವನ್ನು ಯುವಕರು ಮೈಗೂಡಿಸಿಕೊಂಡಲ್ಲಿ ಇವರಿಂದ ಒಟ್ಟಾರೆ ದೇಶದ ಅಭಿವೃದ್ಧಿಯು ವೇಗದಲ್ಲಿ ಸಿಗುತ್ತದೆ. ಭಾರತದ ಒಟ್ಟೂ ಜನಸಂಖ್ಯೆಯ ಶೇಕಡಾ ೬೫ ರಷ್ಟು ೨೫ ವರ್ಷದೊಳಗಿನವರಿದ್ದಾರೆ. ಸರಾಸರಿ ಭಾರತೀಯನ ವಯಸ್ಸು ೨೯. ಹಾಗಾಗಿ ಯುವಕರೇ ದೇಶದ ಭವಿಷ್ಯವೆಂದು ಹೇಳಬಹುದು.

ಸ್ವಾಮಿ ವಿವೇಕಾನಂದರ "ಏಳಿ ಎದ್ದೇಳಿ, ಗುರಿ ಮುಟ್ಟುವ ತನಕ ನಿಲ್ಲದಿರಿ" ಎಂಬ ಮಾತನ್ನು ಕೇಳದವರು ಯಾರಿದ್ದಾರೆ? ದೇಶದ ಯುವಕರಿಗೆ ಉತ್ತಮ ಮಾದರಿಯೆಂದರೆ ಅದು ಸ್ವಾಮಿ ವಿವೇಕಾನಂದರು. ಅವರ ಜನ್ಮದಿನದಂದು ಯುವಕರೆಲ್ಲರೂ ಜಾಗೃತಗೊಂಡು ನಾವೆತ್ತ ಸಾಗುತ್ತಿದ್ದೇವೆ ಎಂದು ಯೋಚಿಸಿ ದೇಶದ ಒಳಿತಿನ ಬಗ್ಗೆ ಆಲೋಚಿಸಿ ದೇಶದ ಏಳಿಗೆಯ ಬಗ್ಗೆ ಆಲೋಚಿಸಿ ದೇಶದ ಏಳಿಗೆಗೆ ಸಹಕಾರಿಯಾಗುವಂತಹ ಕಾರ್ಯಗಳನ್ನು ಕೈಗೆತ್ತಿಕೊಳ್ಳಬೇಕು.

ದೇಶದ ಯುವಕರು ಜಾಗೃತಗೊಂಡಲ್ಲಿ ಜಗತ್ತಿನ ಮುಂದುವರೆದ ದೇಶಗಳಿಗೆ ಭಾರತವು ಸೆಡ್ಡು ಹೊಡೆಯುವ ದಿನ ದೂರವಿಲ್ಲ. ಶಾಲಾ ಕಾಲೇಜುಗಳಲ್ಲಿ, ಮನೆ ಮನಗಳಲ್ಲಿ ಸ್ವಾಮಿ ವಿವೇಕಾನಂದರ ಚಿಂತನೆಗಳನ್ನು ಪಸರಿಸುವ ಕೆಲಸ ಆರಂಭವಾಗಬೇಕಿದೆ. ಇಂದು ದೇಶದ ವಿವಿಧೆಡೆ ಯುವ ದಿನವನ್ನು ವಿಜೃಂಭಣೆಯಿಂದ ಆಚರಿಸಲಾಗುತ್ತಿದೆ. ಸ್ವಾಮಿ ವಿವೇಕಾನಂದರು ಹೇಳಿದಂತೆ "ಉಕ್ಕಿನ ದೇಹದ, ಕಬ್ಬಿಣದ ನರಮಂಡಲದ, ದೃಢ ಮತ್ತು ಕಠಿಣ ಮನಸ್ಸನ್ನು ಭಾರತದ ಯುವಶಕ್ತಿ ಹೊಂದಲಿ" ಎಂದು ಆಶಿಸೋಣ.

# On Makara Sankranti

**Rajesh S Mahantmath Vijayapura D**

India is a land of people fond of celebrations. People across the country celebrate a number of festivals throughout the year. Almost all these festivals have agricultural, seasonal, or astronomical relevance in addition to their social and cultural significance. One such festival which occurs every year at the beginning of the calendar year is Makara Sankranti. As a child I used to wonder how and why Makar Sankranti occurs on 14th of January every year. For many years I did not have clarity about it until one day in college a friend explained to me that Makara Sankranti occurs during the transition of Sun from the constellation of Dhanu (Sagittarius) to Makara (Capricorn) which is a precise astronomical event occurring almost always on 14th January every year and on 15th January before a leap year.

Makara Sankranti is a festival of harvest in most parts of the country or 'Suggi habba' as farmers refer to it in most parts of Karnataka. The usage of sesame, turmeric, jaggery and other items around the time of Sankranti have a great importance. In most households, in Northern Karnataka the no moon day in the month before Sankranti is observed as 'Ellu Amavasya' which is also essentially a festival of thanksgiving to Mother Earth for a good harvest. Farmers sprinkle sesame and jaggery along with bits of a variety of dishes all over their fields in the belief that it will act as a food for the worms in the soil. On the day of Sankranti as well as the previous day people apply a mixture of ground sesame seeds and turmeric all over their body and then bathe. This is supposed to protect the skin from infections during winter which is normally at its peak at this time.

Ellu (sesame) and Bella (jaggery) are liberally used in a variety of preparations in different states. Both sesame and jaggery contain a wide range of nutrients and are supposed to provide warmth and fortify the body during winter. This is an example of age-old culinary wisdom. Sesame denotes humility and jaggery denotes sweetness. There is a practice of distributing sesame and jaggery laddus on Makar Sankranti and requesting each other to forget the past and speak good and pleasant words. In addition to observing rituals and feasting people also engage in donating to the poor and feeding birds and animals in their surroundings. This also shows how our ancestors tried to spread peace harmony in the society and in the surroundings through such practices.

As I mentioned in the beginning, Sankranti is a period of transition for the Sun from one constellation to the other. It is also a period of seasonal transition. The

days gradually begin to become longer and the climate less severe, slowly signaling the onset of spring. There are lessons for us in these slow and gradual changes here. The Sun beckons us to overcome the mists of winter, overcome the darkness of our lethargy and become more active. Sankranti teaches us that everything in our lives and our surroundings changes for the better. It tells to wait hopefully

and patiently and accept the change when it happens. It tells us to bury the past, forgive and accept each other, and live in harmony with all.

Wish you all a Very Happy Makara Sankranti…

# ನಂಬಿಕೆ ಬದಲಾವಣೆ ಎಂದರೇನು?

**ಲಕ್ಷ್ಮಣ ಪಾಟೀಲ ನಡಿಹಾಳ ಯಾದಗಿರ**

ನಂಬಿಕೆ ಎಂಬುದು ಒಬ್ಬ ಮನುಷ್ಯನಲ್ಲಿ ಬಲಗೊಳ್ಳಲು ಹಲವಾರು ಘಟನೆಗಳು ಸಹಾಯಕವಾಗಿರುತ್ತವೆ ಒಬ್ಬ ಮನುಷ್ಯನಲ್ಲಿ ಒಂದು ಬಾರಿ ಬಲಗೊಂಡ ನಂಬಿಕೆಗಳನ್ನು ಬದಲಾಯಿಸುವುದು ಅಷ್ಟೆ ಕಷ್ಟದ ಕೆಲಸ. ಈ ನಂಬಿಕೆಗಳು ರೂಪಗೊಂಡು ಆಕಾರ ಪಡೆದು ಬ್ರಹತ್‌ಗಾತ್ರದಲ್ಲಿ ಆ ವ್ಯಕ್ತಿಯ ಮನಸು ಮತ್ತು ಹೃದಯದಲ್ಲಿ ಮನೆಮಾಡಿಕೊಂಡಿರುತ್ತದೆ. ಹೀಗೆ ಅವು ಬೆಳೆಯಲು ಹಲವಾರು ಅಂಶಗಳು ಕಾರಣವಾಗಿರುತ್ತವೆ ಅದರಲ್ಲಿ ಪ್ರಮುಖವಾಗಿ ಸಂಪ್ರದಾಯಗಳು, ಆ ಸಮೂಹದ ರೂಢಿಗಳು, ಹಿಂದಿನವರು ನೀಡಿದ ತಪ್ಪು ನಂಬಿಕೆಗಳು, ಅವನು/ಳು ಬೆಳೆದು ಬಂದ ಪರಿಸರ , ಅವನ/ಳ ಮೇಲೆ ಬೀರಿದ ಘಟನೆ, ಅವನ ಸಹವಾಸಗಳು, ಸಮಾಜದಲ್ಲಿ ನಡೆಯುವ ಘಟನೆಗಳು, ಅವನ ತಿಳುವಳಿಕೆಗೆ ವಿರುದ್ಧವಾಗಿ ನಡೆದ ಘಟನೆಗಳು, ಅನ್ಯಾಯವಾಗಿ ಅವನು ಅನುಭವಿಸಿದ ಯಾತನೆಗಳು, ಅಹಿತಕೆರ ಘಟನೆಗಳು, ಅವನ/ಳಿಗಾದ ಮೋಸ, ವಂಚನೆ, ನೋವುಗಳು, ಸಾಮಾಜಿಕ ಮತ್ತು ರಾಜಕೀಯ ವ್ಯೆವಸ್ಥೆ ಅಲ್ಲದೆ, ಪ್ರೋತ್ಸಾಗಳು, ಮರೆಯಲಾಗದ ಕ್ಷಣಗಳು, ಜೀವನದಲ್ಲಾದ ತಿರುವುಗಳು ಹೀಗೆ ಹಲವಾರು ಘಟನೆಗಳು ಒಬ್ಬ ವ್ಯಕ್ತಿಯಲ್ಲಿ ನಂಬಿಕೆಗಳು ರೂಪಗೊಳ್ಳು ಕಾರಣವಾಗುತ್ತವೆ ಆಗ ನೀವು ಏನೆ ಹೇಳಿದರು ಅದನ್ನು ಚನ್ನಾಗಿ ಆಲಿಸುತ್ತಾನೆ ಆದರೆ ಯಾವಾಗ ತಾನು ಇಲ್ಲಿಯವರೆಗೂ ನಂಬಿಕೊಂಡು ಬೆಸಿಕೊಂಡು ಬಂದ ನಂಬಿಕೆಗಳಿಗೆ ದಕ್ಕೆ ಬರುತ್ತದೆಯೋ ಆವಾಗ ಅದನ್ನು ಬಲವಾಗಿ ಪ್ರತಿಭಟಿಸುತ್ತಾನೆ/ಳೆ.

ಕಳೆದ ವರ್ಷ ನಾವು ಹೆಚ್.ಡಿ. ಕೋಟೆಯಲ್ಲಿ ಬೆಸಿಗೆ ಶಿಕ್ಷರ ಕಾರ್ಯಾಗಾರದ ಶಿಬಿರದಲ್ಲಿ ನನಗಾದ ಎರಡು ಅನುಭವಗಳನ್ನು ನಿಮ್ಮ ಮುಂದಿಡಲು ಪ್ರಯತ್ನಿಸಿದ್ದೇನೆ ಇದು ನನ್ನ ಅನುಭವ ಮತ್ತು ಅಭಿಪ್ರಾಯವೇ ಹೊರತು ತಂಡದ ಅಭಿಪ್ರಾಯವಲ್ಲ. ಇದು ತಾವು ಒಪ್ಪಬಹುದು ಇಲ್ಲವೆ ಬಿಡಬಹುದು. ಸಮಾಜ ವಿಜ್ಞಾನ ವಿಷಯದಲ್ಲಿ ನಮ್ಮೊಂದಿಗೆ ಸುಮಾರು 8–9 ವರ್ಷಗಳಿಂದ ಒಡನಾಟವಿದ್ದ ಶಿಕ್ಷಕರೊಬ್ಬರು ಅದರಲ್ಲಿ ಭಾಗವಹಿಸಿದ್ದರು, ನಾನು ಇತಿಹಾಸದ ದೃಷ್ಠಿಕೋನದ ಮೇಲೆ ಮಾತನಾಡುತ್ತಾ ಪಠ್ಯಯಲ್ಲಿರುವುದನ್ನು ಯತಾವತ್ತಾಗಿ ಕೊಡವುದು ಶಿಕ್ಷಣದ ಉದ್ದೇಶವಲ್ಲ ಅಥವಾ ಆ ವಿಷಯದ ಉದ್ದೇಶವು ಅಲ್ಲ, ಪಠ್ಯಯಲ್ಲಿರುವುದನ್ನೇ ಯತಾವತ್ತಾಗಿ ಕೊಡುವುದಾದರೆ ಶಿಕ್ಷಕರು ಬೇಕಿಲ್ಲ ಅಕ್ಷರ ಜ್ಞಾನವೊಂದಿದ್ದರೆ ಸಾಕು ಮಕ್ಕಳು ಓದಿಕೊಳ್ಳುತ್ತಾರೆ ಎಂದು ಹೇಳುತ್ತಾ, ಪ್ರತಿಯೊಂದು ವಿಷಯದ ಬೋಧನೆಯ ಹಿಂದೆ ಒಂದು ಉದ್ದೇಶವಿದೆ ಅದನ್ನು ಅರಿತುಕೊಂಡು ಬೋಧಿಸಿದರೆ ಮಾತ್ರ ಅದರ ಆಶಯವನ್ನು ಇಡೇರಿಸಲು ಸಾಧ್ಯ, ಎಂದು ಹೇಳಿದೆ'. ಅದಕ್ಕೆ ಅವರು **"ಹಾಂಗಂದರ ಮಾಸ್ತರಗೋಳನ್ನ ತುಂಬುದು ಬ್ಯಾಡಂತ ಹೇಳ್ರಿ ಮತ್ತು ಪುಸ್ತಕದೊಳಗಿಂದು ಹೇಳುವುದು ಬ್ಯಾಡ ಅಂದ್ರ ಪುಸ್ತಕಗೋಳನ್ನ ತಗಿಲಿಕ್ಕೆ ಹೇಳ್ರಿ ಸಾಲಿಗಳನ್ನ ಮುಚ್ಚಲಿಕ್ಕೆ ಹೆಳ್ರಿ"** ಅಂದರು. ಅಷ್ಟೆ ಅಲ್ಲ ಅವರು ಎದ್ದು ಹೋಡೆಯುತ್ತಾರೆನ್ನುವ ಮಟ್ಟಕ್ಕೆ ಪ್ರತಿಭಟಿಸಿದರು, ಅದಕ್ಕೆ ಹಿಂದಿನವರು ಶಿಕ್ಷಕರು ಕೂಡಾ ಬೆಂಬಲ ನೀಡಿದರು. ಅವರನ್ನು ಸಮಾಧಾನ ಮಾಡಿ ನಾವು ಹೇಳುವುದು ತಾತ್ಪರ್ಯ ತಿಳಿಸಬೇಕಾದರೆ ತುಂಬಾ ಕಷ್ಟ ಪಡಬೇಕಾಯಿತು. ಹಾಗೆ ಆ ಸೆಶನ್ ಮುಗಿದ ನಂತರ ಬಂದು ಕ್ಷೆಮಿಸಿ ಸರ್ ನೀವು ಹೇಳುವ ಉದ್ದೇಶವರಿಯದೆ ಪ್ರತಿಭಟಿಸಿದೆವು. ಎಂದು ಹೇಳಿ ಕ್ಷೇಮೆ ಕೇಳಿದ್ದು ಉಂಟು. ಇಲ್ಲಿ ಅವರು ಹಾಗೆ ಮಾಡಬಾರದಿತ್ತು ಎಂದು ಹೇಳುವ ಉದ್ದೇಶ ನನ್ನದಲ್ಲ. ಅಥವಾ ಕ್ಷೆಮೆ ಕೆಳಿದ ಮಾತ್ರಕ್ಕೆ ಅವರು ಬದಲಾದರೆಂದು ಹೇಳಲಾಗುವದಿಲ್ಲ, ನಮ್ಮಿಂದ ಹೊರಬಂದಾಗ ಅವರ ಮೇಲೆ ಪ್ರತಿದಿನ ಅವರ ಜೋತೆಗಾರರು ಪ್ರಭಾವವಿರುವುದು ಹಾಗೂ ತುಂಬಾ ವರ್ಷದಿಂದ ಪಠ್ಯ ಪುಸ್ತಕವಿಡಿದು ಬೋಧಿಸಿದವರಿಗೆ ಅದನ್ನು ಬಿಟ್ಟು ವಿಷಯದ ದೃಷ್ಠಿಕೋನದಲ್ಲಿ ಯೋಚಿಸಿ ಎಂದಾಗ ಇದೇನು ಹೊಸದು ಹೇಳುತ್ತಾರೆ ಎಂದು ಅರಗಿಸಿಕೊಳ್ಳುವುದು ಸಾಧ್ಯವಾಗಲಿಲ್ಲ. ಇಲ್ಲಿ ನೋಡಬೇಕಾದುದು ಅವರು ಹಿಂದೆ ಕಲಿತದ್ದು, ಕಲಿಕೆ ಎಂದರೆ ಹೀಗೆ ಎಂದು ನಂಬಿಕೊಂಡದ್ದು, ಅವರ ಹಿರಿಯ ಶಿಕ್ಷಕರು

ಅವರ ಮೇಲೆ ಬಿರಿದ ಪ್ರಭಾವ ಹಾಗೂ ಈಗಿರುವ ವ್ಯವಸ್ಥೆ ಮುತಾದವು ಆ ನಂಬಿಕೆಗಳನ್ನು ನೀರೆರೆದು ಪೋಷಿಸಿದ್ದು. ಅದಕ್ಕೆ ಬಿಳುವ ಪೆಟ್ಟನ್ನು ಸಹಿಸಲಾಗಲಿಲ್ಲ.

ಹಾಗಾದರೆ ಬದಲಾಯಿಸಲು ಸಾಧ್ಯವಿಲ್ಲವೆ? ಖಂಡಿತ ಸಾಧ್ಯವಿದೆ. ಯಾವುದೇ ಒಬ್ಬ ವ್ಯಕ್ತಿಯ ನಂಬಿಕೆಗಳು ಸರಳವಾಗಿ ಬದಲಾಯಿಸಲು ಸಾದ್ಯವಿಲ್ಲ ಎನ್ನುವುದೇನೋ ನಿಜ. ಕಾರಣ ಇದು ಒಬ್ಬ ವ್ಯಕ್ತಿಯ ಆ ನಂಬಿಕೆಗಳು ಅವನ ಮೇಲೆ ಎಷ್ಟು ಒಬ್ಬ ವ್ಯಕ್ತಿಯ ಮೇಲೆ ಆಳವಾಗಿ ಪ್ರಭಾವ ಬೀರುತ್ತವೆಯೋ ಅದಕ್ಕಿಂತ ಹೆಚ್ಚು ಪ್ರಭಾವ ನಾವು ಆ ವ್ಯಕ್ತಿಯ ಮೇಲೆ ಬೀರಿದಾಗ ಮಾತ್ರ ಅವನನ್ನು ಬದಲಾಯಿಸಲು ಸಾದ್ಯವಿದೆ. ಹೆಚ್ಚು ಪ್ರಭಾವ ಬೀರುವುದು ಎಂದರೆ ಹೇಗೆ? ಇದು ಕೂಡಾ ಸವಾಲಿನ ಪ್ರಶ್ನೆ ಕಾರಣ ನಂಬಿಕೆ ಬದಲಾವಣೆ ಎನ್ನುವುದು ಒಬ್ಬ ವ್ಯಕ್ತಿಯ ಮಾನಸಿಕ ಬದಲಾವಣೆಯಾಗಬೇಕು ಅಂದಾಗ ಅವನ ವರ್ತನೆಯಲ್ಲಿ ಬದಲಾವಣೆಯಾಗುತ್ತದೆ. ಈ ಎರಡು ವಿಷಯದಲ್ಲಿ ಬದಲಾವಣೆಯಾಗಲೂ ನಿರಂತರವಾಗಿ ಆ ವ್ಯಕ್ತಿಯೊಂದಿಗೆ ಸಂಬಂಧ ಹಿಂದಿನ ನಂಬಿಕೆಗಳನ್ನು ಮರೆಯುವಷ್ಟು ಪ್ರಭಾವವಾದರೆ ಮಾತ್ರ ಸಾಧ್ಯ. ಎಷ್ಟಾದರೂ ಮಾನವನಲ್ಲವೇ? ಅವನ ಮೇಲೆ ಬೇರೆ ಬೇರೆ ರೀತಿಯ ಪ್ರಭಾವಗಳು ಆಗುತ್ತಲೇ ಇರುತ್ತವೆ ಕುವೆಂಪುರವರು ಒಂದು ಕಡೆ ಹೇಳುವಂತೆ **"ಪರಿಸರದಿಂದ ದುರಾತ್ಮ ಮಹಾತ್ಮನಾಗಬಹುದು ಮಹಾತ್ಮ ದುರಾತ್ಮ ನಾಗಬಹುದು"** ಅಂದರೆ ಒಬ್ಬ ವ್ಯಕ್ತಿಯ ಬದಲಾವಣೆಯಲ್ಲಿ ಪರಿಸರವು ಪ್ರಮುಖ ಪಾತ್ರ ವಹಿಸುತ್ತದೆ ಎನ್ನುವುದು ಅಷ್ಟೇ ಮುಖ್ಯ ಇಲ್ಲಿ ಪ್ರಯತ್ನದ ಜೊತೆಗೆ ಪರಿಸರವು ಮುಖ್ಯ ಎನಿಸುತ್ತಿದೆ. ಅಂದರೆ ಪ್ರಯತ್ನದ ಜೋತೆಗೆ ಪರಿಸರ ಒದಗಿಸುವುದು ಮುಖ್ಯ, ಶಾಲೆಯಲ್ಲಿ ಯಾರಾದರೂ ಶಿಕ್ಷಕರು ಬದಲಾವಣೆಗೆ ಪ್ರಯತ್ನಿಸಿದರೆ ಅದಕ್ಕೆ ಬೆಂಬಲಕ್ಕಿಂತ ನಕಾರಾತ್ಮಕವಾಗಿಯೇ ಸ್ಪಂದಿಸುವವರೆ ಹೆಚ್ಚು, ಅಂತಹ ಸಂದರ್ಭದಲ್ಲಿ ನಮ್ಮೊಂದಿಗೆ ಒಡನಾಟವಿರುವ ವ್ಯಕ್ತಿ ಅವರು ಹೇಳಿದ್ದು ಸರಿ ಎನ್ನುವ ನಿರ್ಧಾರಕ್ಕೆ ಬರಬಹುದು ಹೀಗಾಗಿ ನಾವು ಮಾಡುವ ಪ್ರಯತ್ನಫಲ ತಡವಾಗಿ ಆಗಬಹುದು ಅಥವಾ ಆಗದೆಯು ಇರಬಹುದು.

ಆದರೆ ಒಂದು ಭಾರಿ ವ್ಯಕ್ತಿಯ ನಂಬಿಕೆಯನ್ನು ಬದಲಾಯಿಸಿಕೊಂಡ ನಂತರ ಅವನಲ್ಲಿ ಅಮೂಲಾಗ್ರ ಬದಲಾವಣೆಯಾಗುತ್ತದೆ ಎನ್ನುವುದರಲ್ಲಿ ಎರಡು ಮಾತಿಲ್ಲ ಆದ್ದರಿಂದ ನಮ್ಮ ಮಕ್ಕಳು ನಂಬಿಕೆಗಳನ್ನು ಕಟ್ಟಿಕೊಳ್ಳುವಲ್ಲಿ ನಮ್ಮ ಪ್ರಯತ್ನ ಮತ್ತು ಜಾಗರೂಕತೆ ತುಂಬಾ ಇದೆ. ಅಂದರೆ ಅವರ ನಂಬಿಕೆಗಳನ್ನು ಕಟ್ಟುವ ನಮಗೆ ನಮ್ಮ ನಂಬಿಕೆಗಳ ಬಗ್ಗೆಯೂ ಕೋಲಂಕೂಷವಾಗಿ ನಾವೆ ನೋಡಿಕೊಳ್ಳಬೇಕಾದ ಅಗತ್ಯವಿದೆ, ಯಾವ ಶಿಕ್ಷರು ನಿರಂತರ ತಮ್ಮೊಂದಿಗೆ ಒಡನಾಟ ಹೊಂದಿರುತ್ತಾರೆ ಯಾರು ಅವರ ನಂಬಿಕೆಗಳನ್ನು ರೂಪಿಸಿಕೊಳ್ಳುವಲ್ಲಿ ಪ್ರಭಾವ ಬಿರುತ್ತಾರೋ ಅವರನ್ನು ಮಕ್ಕಳು ಇಷ್ಟಪಡುತ್ತಾರೆ. ಮತ್ತು ಆ ವ್ಯಕ್ತಿ ಯಾರೆ ಏನೆ ಹೇಳಿದರು ನಂಬುತ್ತಾರೆ ಆದ್ದರಿಂಧ ನಂಬಿಕೆಗಳನ್ನು ಕಟ್ಟಿಕೊಳ್ಳುವಾಗ ಅದನ್ನು ಒರೆಗೆ ಹಚ್ಚಿ ನೋಡಿ ಸರಿ–ತಪ್ಪುಗಳ ತುಲನೆ ಮಾಡಿ ನಿರ್ಧಾರ ತೆಗೆದುಕೊಳ್ಳುವ ಮನೋಭಾವವನ್ನು ಬೆಳೆಸಬೇಕಾಗುತ್ತದೆ.

# ಬದುಕು ಕಟ್ಟಿಕೋಳ್ಳುವುದೆಂದರೆ . .

**Suresh G Raichur**

ಇತ್ತೀಚೆಗೆ ನನ್ನೊಂದು ಹೊಮ ಥೇಟರ ರೆಪೇರಿ ಮಾಡಿಸಿಕೊಂಡುಬರಲು ಹೋದಾಗಿನ ಸಂಧರ್ಭ, ಅಂಗಡಿಯ ನಾಲ್ಕು ಗೋಡೆಗಳಿಗೆ ಒರಗಿಕೊಂಡಂತೆ ಟಿವಿ (ದೂರದರ್ಶನ)ಯ ಒಳಭಾಗಗಳು ಸುಮಾರು ದಿನಗಳಿಂದ ಹಾಗೆ ಬಿದ್ದಿರುವಂತೆ ಅನಿಸಿತು, ಇನ್ನೊಂದು ಕಡೆ ದೊಡ್ಡದಾದ ಟೇಬಲ ಅದರ ಹತ್ತಿರ ಒಂದು ಕುರ್ಚಿ, ಕುರ್ಚಿಯ ಸುತ್ತಲೂ ಬಾಗಿಲವರೆಗೆ ಡೂಮ ಟವಿಗಳು, ವಯಸ್ಸಾದ ಮುದುಕರಂತೆ ಡಾಕ್ಟರ ಹತ್ತಿರ ತಮ್ಮ ಸರದಿಗಾಗಿ ಕಾಯುತ್ತಾ ಕುಳಿತಿದ್ದವು. ಟೇಬಲ್ ಮೇಲೆ ಈಗ ತಾನೆ ವಯಸ್ಸಿಗೆ ಬಂದಂತಹ ಯುವಕರ ಹಾಗೆ ಎಲ್ಈಡಿ ಟವಿಗಳು ವಯಸ್ಸಾದ ಟವಿಗಳನ್ನು ಹಂಗಿಸುವಂತೆ ಕಾಣುತ್ತಿತ್ತು. ಇವೆಲ್ಲದರ ಮೇಲೆ ಕುರ್ಚಿಗೆ ಹತ್ತಿರ ಒಂದು ಬಿಳಿಯ ಬಣ್ಣದ ಲ್ಯಾಪಟಾಪ ಓರಣವಾಗಿ ಎಲ್ಲರಿಗೂ ನಾನು ಮಾಸ್ಟರ ಎನ್ನುವಂತೆ ಕುಳಿತಿತ್ತು. ಕೆಲವು ಅಂಗಡಿಯ ಬಾಗಿಲ ಹೊರಗೆ ರಿಪೇರಿ ಮಾಡಲು ಆಗದೆ ಇರುವ ಹಳೆಯ ಕಾಲದ ಟಿವಿಗಳ ಸಾಲು ಉಸಿರು ಬಿಟ್ಟ ಶವಗಳ ಹಾಗೆ ಮಲಗಿದ್ದವು. ಅಂಗಡಿಯಲ್ಲಿ ಯಾವುದೆ ಟವಿಯಲ್ಲಿ, ಹಾಡಿನ ಸಂಗೀತದ ದ್ವನಿ ಕೇಳಿಸುತ್ತಿರಲಿಲ್ಲ. ನನಗೆ ಆಸ್ಪತ್ರೆಯಲ್ಲಿನ ಮೌನದಂತೆ ಆ ಅಂಗಡಿ ಭಾಸವಾಯಿತು.

ನಾನು ಮುಂಚೆಯೇ ಪೋನ್ ಮಾಡಿ ಹೋಗಿದ್ದರಿಂದ, ಪರಿಚಯ ಇರುವ ಆತ್ಮಿಯರೊಬ್ಬರ ರೋಗಿಯನ್ನು ಚಿಕಿತ್ಸೆ ಮಾಡುವಂತೆ, ಬಾಗಿಲ ಹತ್ತಿರಕ್ಕೆ ಬಂದು ಬನ್ನಿ ಸರ್ ಇಲ್ಲಿ ಟೇಬಲ್ ಮೇಲೆ ಇಡಿ (ಮಲಗಿಸಿ) ಎಂದು ಬರ ಬರನೆ ತಮ್ಮ ಉಪಕರಣಗಳಿಂದ ಪರೀಕ್ಷೆ ಸುರವಿಟ್ಟುಕೊಂಡರು. ನನಗೆ ಗೊತ್ತಿರುವ ಹಾಗೆ ಸುಮಾರು 17 ವರ್ಷಗಳ ಹಿಂದೆ ಮುದಗಲ್ಲಿನಂತಹ ಗ್ರಾಮಕ್ಕೆ ಆಗ ತಾನೆ ಬಣ್ಣದ ಟವಿಗಳಿಗೆ ಜಗತ್ತು ತೆರೆದುಕೊಂಡಿದ್ದಿರಬಹುದು ಆಗಿನಿಂದಲೂ ಗ್ರಾಮಕ್ಕೆ ಇವರೊಬ್ಬರೇ ಟವಿಗಳನ್ನು ಬಹು ಯಶಸ್ವಿಯಾಗಿ ಚಿಕಿತ್ಸೆ ಕೊಟ್ಟು ರೆಪೇರಿ ಮಾಡುತ್ತಿದ್ದ ವ್ಯಕ್ತಿ. ಬಹಳ ವರ್ಷಗಳ ನಂತರ ನಾನು ಅವರಲ್ಲಿಗೆ ಹೊಗಿದ್ದು. ಮೊದಲೇ ಪರಿಚಯವಿದ್ದಿರುವ ಕಾರಣ ಹೊಂಮ್ ಥೇಟರ ಪರೀಕ್ಷೆ ಮಾಡುತ್ತಲೇ ಅವರ ಇತಿಹಾಸದ ಬಗ್ಗೆ ಮಾತು ಪ್ರಾರಂಭಿಸಿದೆ, ಪ್ರತಿಯಾಗಿ ಅವರು ಬೇಸರದಲ್ಲೇ ಹೌದ್ರಿ ಏನ್ಮಾಡೋದು ಬಿಡಿ ಸರ್, ನಾನು ಇದರಲ್ಲೇ ಬಹುತೇಕ ಜೀವನ ಕಳೆದು ತುಂಬಾ ನಷ್ಟ ಮಾಡಿಕೊಂಡೆ ಎಂದ. ನಾನು ಕುತೂಹಲದಿಂದ ಏನಾಯಿತು ಈಗಲೂ ಉದ್ಯೋಗ ಚನ್ನಾಗಿ ನಡೆಯುತ್ತಿರಬಹುದಲ್ಲ, ನಡುವಿನಲ್ಲೇ ನನ್ನ ಮಾತನ್ನು ನಿಲ್ಲಿಸಿ ಮೊದಲಿದ್ದಂಗೆ ಈಗಿಲ್ಲ ನಾನು ಸುಮಾರು 7 ವರ್ಷಗಳ ಹಿಂದೇನೆ ಅಪಡೇಟ ಆಗಬೇಕಿತ್ತು ಈವಾಗ ನೋಡಿ ಯಾರು ಈ ಡೂಮ ಟವಿ ಖರೀದಿಸ್ತಾರ? ಎಲ್ಲರೂ ಎಲ್ಈಡಿ ಟವಿ ಖರೀದಿ ಮಾಡ್ತಾ ಇದ್ದಾರ, ಇವು ಅಷ್ಟೋಂದು ರಿಪೇರಿಗೆ ಬರೊದಿಲ್ಲ, ಇನ್ನು ಕೆಲವು ದಿನಗಳಲ್ಲೆ ಒಂದು ಅವಧಿಗೆ ಮಾತ್ರ ಉಪಯೋಗಿಸಬಹುದಾದ ಟಿವಿಗಳು ಬರುತ್ತವೆ ಟೆಕ್ನಾಲಜಿ ತುಂಬಾ ಫಾಸ್ಟ ಇದೆ ಅದಕ್ಕೆ ತಕ್ಕಂತೆ ನಾವು ಅಪಡೇಟ ಆಗದೇ ಇರುವುದರಿಂದ ಮೊದಲಿನಷ್ಟು ದುಡಿಮೆ ಕೆಲಸ ಈಗ ಇಲ್ಲದೇ ಕುಳಿತಿದ್ದೇನೆ, ಈ ಕೆಲಸ ಮಾಡ್ತಾ ನನ್ನ ಒಂದು ಕಣ್ಣನ್ನು ಕಳೆದುಕೊಂಡಿದ್ದೇನೆ, ಬೇರೆ ಯಾವುದಾದರೂ ಉದ್ಯೋಗ ಮಾಡಬೇಕು ಅನ್ನೊಂದ್ದೀನಿ ನೋಡ್ಬೇಕು ಎಂದು ಮಾತು ಮುಗಿಸಿದ. ಅವರ ಮಾತು ಕೇಳಿ ಹೌದಲ್ಲ ಅಪ್‌ಡೇಟ್ ಆಗೋದು ಎಷ್ಟೋಂದು ಮಹತ್ವದ್ದು

ಅನಿಸಿತು, ಕುತೂಹಲದಿಂದ ನೀವು ಹೇಳಿದ್ದು ತುಂಬಾ ಇಷ್ಟ ಆಯಿತು, ಅಪ್‌ಡೇಟ ಆಗೋದಕ್ಕೆ ಅಂತಾನೆ ಈ ಲ್ಯಾಪ್‌ಟಾಪ್ ರೀಪೇರಿ, ಸಾಪ್ಟವೇರ ಬಗ್ಗೆ ತಿಳಿದಕೊಳ್ಳೋಕೆ ಉಪಯೋಗಿಸುತ್ತಿದ್ದೀರೆನೋ? ಇಲ್ಲ ಸರ್ ಅದು ನಾನು ಶೇರು ಮಾರುಕಟ್ಟೆಯಲ್ಲಿನ ವಿಷಯಗಳನ್ನು ತಿಳಿದುಕೊಳ್ಳಲಿಕ್ಕೆ ಮತ್ತು ಹೂಡಿಕೆ ಮಾಡಲಿಕ್ಕೆ ಬಳಸ್ತೀನಿ. ಎರಡು ವರ್ಷದ ಹಿಂದೆ ಲಾಕ್‌ಡೌನ್ ಆಯ್ತಲ್ಲ ಕೆಲಸ ಇಲ್ಲದೇ ಖಾಲಿ ಸುಮ್ಮನೆ ಕುಳಿತಿದ್ದಾಗ ಇದನ್ನು ಯು ಟೂಬನಲ್ಲಿ ನೋಡಿ ಕಲಿತುಕೊಳ್ಳಲು ಸಹಾಯಕವಾಯಿತು. ನನಗೆ ಆತನ ಮಾತು ಕೇಳಿ ನೀನು ಓದಿರೋದು ಪ್ರಾಥಮಿಕ ಶಾಲೆಯ 7 ನೇ ತರಗತಿ ಅದ್ರೂ ಇದು ಹೇಗೆ ಸಾದ್ಯವಾಯಿತು? ನಾನು ಮೊದಲು ಟವಿ ರಿಪೇರಿ ಮಾಡುವುದನ್ನು ಕಲಿತುಕೊಳ್ಳಲು ಹೋದಾಗ ಅದರಲ್ಲಿರುವ ವಾಯರ್ಸ್ ಹಾಗೂ ಬಿಡಿಭಾಗಗಳನ್ನು ನೋಡಿ ಹೆದರಿಕೊಂಡು ನನಗೆ ಆಗೋದಿಲ್ಲ ಅನ್ಕೊಂಡಿದ್ದೆ ಆದ್ರೆ ಇದನ್ನ ಕಲಿತುಕೊಳ್ಳಲೇ ಬೇಕು ಅನ್ನೊ ಛಲ ನನಗೆ ಇದನ್ನು ಕಲಿಸಿತು, ಗೂಗಲ್‌ನಲ್ಲಿ ಏನಿಲ್ಲಾ ಹೇಳಿ? ಒಳ್ಳೇದು, ಕೆಟ್ಟದ್ದು ಸಾಕಷ್ಟಿದೆ ಆದ್ರ ನಾವು ಒಳ್ಳೆದರ ಕಡೆ ಮಾತ್ರ ಗಮನ ಕೊಡಬೇಕು ಅಲ್ವಾ ಸರ್, ನಾನು ಖಾಲಿ ಕುಳಿತಾಗ ಗೂಗಲ್‌ನಲ್ಲಿ ಡಿಮ್ಯಾಟ ಅಕೌಂಟ ಒಪನ್ ಮಾಡೋದು ಹೇಗೆ? ಇನ್‌ವೆಸ್ಟ ಹೇಗೆ ಮಾಡಬೇಕು? ಯಾವ ಕಂಪನಿ ಒಳ್ಳೆಯದು, ಅದರ ಡೆವಲಪ್‌ಮೆಂಟ ಹೇಗಿದೆ ಅನ್ನೊದನ್ನೆಲ್ಲ ನೋಡಿ ಕಲಿತುಕೊಂಡು ಚಿಕ್ಕದಾಗಿ ಹೂಡಿಕೆ ಮಾಡುವುದನ್ನು ಕಲಿತೆ. ಆರಂಭದಲ್ಲಿ ಸ್ವಲ್ಪ ಹಿಂಜರಿಕೆ ಇತ್ತು, ನನ್ನ ಶೇರಿನ ಬೆಲೆ ಸ್ವಲ್ಪ ಹೆಚ್ಚಾದ ತಕ್ಷಣ ಹಿಂತೆಗಿದುಕೊಂಡು ಬಿಡುತ್ತಿದ್ದೆ. ಅದರ ಅದು ತಪ್ಪು ದೀರ್ಘ ಅವಧಿಗೆ ಇದನ್ನು ನೋಡಬೇಕು, ಈ ರೀತಿ ಶೇರು ಮಾರುಕಟ್ಟೆಯ ಬೆಲೆ ಹೆಚ್ಚಾಗುವುದು ಮತ್ತು ಕಡಿಮೆ ಆಗುವ ಪ್ರಕ್ರಿಯೆ ಇದ್ದೇ ಇರುತ್ತದೆ ಎಂಬುದು ಗೊತ್ತಾಯಿತು. ಲಾಕ್‌ಡೌನ ಸಂದರ್ಭದಲ್ಲಿ ಎಮ್‌ಆರ್‌ಎಫ್ ಕಂಪನಿಯ ಶೇರು ಮೌಲ್ಯ 30 ರೂಪಯಿಗೆ ಇಳಿದಿತ್ತು ಆಗ ನಾನು 100 ಶೇರು ಖರಿದಿಸಿದೆ, ಇವತ್ತು ಒಂದು ಶೇರಿನ ಮೌಲ್ಯ 3000 ರೂಪಾಯಿಗಳು ನಾನು ಲಾಭದಲ್ಲಿ ಇದ್ದೇನೆ ಎಂದು ಹೇಳುತ್ತ, ಇನ್‌ಪೋಸಿಸ್ಸ್, ವಿಪ್ರೋ ಹಾಗೂ ಆದಾನಿ ಮತ್ತು ಅಂಬಾನಿ ಕಂಪನಿಗಳ ಬಗ್ಗೆಯೂ ತಾನು ಹೂಡಿಕೆ ಮಾಡಿದ್ದನ್ನು ಲಾಭದಲ್ಲಿ ಇದ್ದುದರ ಬಗ್ಗೆ ವಿವರವಾದ ಮಾಹಿತಿ ನೀಡಿದ. ಅದರಲ್ಲಿ ಆದಾನಿ ಕಂಪನಿ ಬಗ್ಗೆ ಹೇಳುತ್ತ ಸರ್ ಕಂಪನಿ ಇವತ್ತು ನಂ 1 ಇದೆ ಎಂದು ಹೂಡಿಕೆ ಮಾಡಬಾರದು, ಅದು ಎಷ್ಟು ಸಾಲ ಪಡೆದಿದೆ, ಬಂದ ಲಾಭವನ್ನು ಸಾಲಕ್ಕೆ ಕಟ್ಟುತ್ತಿದ್ದರೆ ಹೂಡಿಕೆದಾರರಿಗೆ ಲಾಭವಾಗುವುದಿಲ್ಲ ಅದಕ್ಕೆ ಆ ಕಂಪನಿಗೆ ಹೂಡಿಕೆ ಮಾಡುವುದಿಲ್ಲ. ಹಾಗೆಯೇ ವಿಪ್ರೋ ನೋಡಿ ಅದು ಒಂದು ವರ್ಷದಲ್ಲಿ ಎರಡು ಬಾರಿ ಅಥವಾ ಮೂರು ಬಾರಿ SPILT ಕೊಡ್ತಾರೆ ಎಂದು ಹೇಳಿ ಹಾಗೆಂದರೇನು ಅದರಿಂದ ಹೂಡಿಕೆದಾರರ ಶೇರುಗಳಲ್ಲಿ ಆಗುವ ಲಾಭದ ಕುರಿತು ವಿವರಿಸಿದ. ಹೀಗೆ ನಿಫ್ಟಿ, ಇಕ್ವಿಟಿ, ಕೆಪೆಕ್ಸ್, ಇನ್ನೂ ಅನೇಕ ವಿಷಯಗಳ ಮಾಹಿತಿ ನಿರರ್ಗಳವಾಗಿ ನೀಡಿ, ನಾನು 7 ವರ್ಷಗಳ ಹಿಂದೇನೆ ಅಪ್‌ಡೇಟ್ ಆಗಬೇಕಿತ್ತು ತುಂಬಾ ಲೇಟಾಗಿ ಇದರ ಬಗ್ಗೆ ಯೋಚಿಸಿದೆ ಆದ್ದರಿಂದ ತುಂಬಾ ನಷ್ಟ ಮಾಡ್ಕೊಂಡೆ ಅನಸ್ತಾ ಇದೆ, ಅದ್ರೂ ಪರವಾಗಿಲ್ಲ ನನಗೆ ನನ್ನ ಬಗ್ಗೆ ನಂಬಿಕೆ ಇದೆ, ಇನ್ನು 4 ವರ್ಷಗಳಲ್ಲಿ ಹೊಸ ಬ್ಯುಸಿನೆಸ್ ಸುರು ಮಾಡ್ತೇನೆ ಇಲ್ಲೇ ಎಂದು ಹೇಳುತ್ತ ಸ್ವಲ್ಪ ರಿಪೇರಿ ಕಡೆ ಗಮನ ಹರಿಸಿದ. ನಾನು ಹೇಗೋ ಸ್ವಂತ ಕಲಿತುಬಿಟ್ಟೆ ಅಲ್ಲದೆ ನಮ್ಮ ಮುದಗಲ್ಲಿನಲ್ಲೇ 7 ಜನರಿಗೆ ಮಾಹಿತಿ ನೀಡಿ ಅವರೂ ಹೂಡಿಕೆ ಮಾಡುವುದಕ್ಕೆ ಸಹಾಯ ಮಾಡಿದ್ದೇನೆ. ನಮ್ಮ ದೇಶದಲ್ಲಿ ಬಹಳ ಕಡಿಮೆ ಜನ ಶೇರ್ ಮಾರ್ಕೆಟನಲ್ಲಿ ಹೂಡಿಕೆ ಮಾಡುವುದನ್ನು ತಿಳಿದಿದ್ದಾರೆ ಅದು ಬಹಳ ದುಃಖದ ಸಂಗತಿ. ನೀವೇ ಹೇಳಿ ಪಿಯುಸಿ, ಡಿಗ್ರಿ ಆದ ಅದೆಷ್ಟು ನಮ್ಮ ದೇಶದ

ಯುವಕರಿಗೆ ಇವುಗಳ ಬಗ್ಗೆ ಮಾಹಿತಿಯನ್ನು ಶಿಕ್ಷಣದಲ್ಲಿ ಕೊಡ್ತಿದ್ದಿವಿ? ಅದೆಷ್ಟು ಜನ ಉದ್ಯೋಗ ಮಾಡುವವರು ತಮ್ಮ ತಿಂಗಳ ಸಂಭಾವನೆಯಲ್ಲಿ ಹೂಡಿಕೆ ಮಾಡುವುದಕ್ಕೆ ಇರುವ SIP ಬಗ್ಗೆ ತಿಳಿದುಕೊಂಡಿದ್ದಾರೆ? ಅಲ್ಪ ತೃಪ್ತಿಗೆ ಜೀವನ ಪೂರ್ತಿ ದುಡಿಯೋದು ನಮ್ಮ ಜನರ ಕೆಲಸ ಆಗಿದೆ. ಅಲ್ರಿ ದಿನದ 24 ಗಂಟೆಯಲ್ಲಿ ಅರ್ದ ಬಹಳ ಅಂದ್ರ ಒಂದು ತಾಸು ಇದನ್ನು ಕಲಿಯೊಕೆ ಅಂತ ಕೊಟ್ರೆ ಸಾಕು, ಇದನ್ನ ಮಾಡದೆ ಫೇಸ್‌ಬುಕ್, ವ್ಯಾಟ್ಸಾಪ್, ಟಿಕ್‌ಟಾಕ ಅಂತ ಸಮಯ ಕಳಿತಿವಿ, ಚೀನಾದೋರು ನಮ್ಮ ಯುವಕರು ತಮ್ಮ ಜೀವನ ಕಟ್ಟಿಕೊಳ್ಳೋದರ (ಶೇರ ಮಾರುಕಟ್ಟೆ ಹೂಡಿಕೆ) ಕಡೆ ತಲೆ ಹಾಕದಂಗ ಇವುಗಳಲ್ಲೇ ಬ್ಯುಸಿ ಮಾಡಿಬಿಟ್ಟಾರ. ಇದರಲ್ಲಿ ಹೂಡಿಕೆ ಮಾಡುವುದನ್ನು ಪ್ರತಿಯೊಬ್ಬರು ತಿಳಿದುಕೊಂಡ್ರೆ ನಮ್ಮ ದೇಶದ ಜನ ಬೇಗ ಡೆವಲಪ್ ಆಗ್ತಾರೆ ಹಾಗೆಯೇ ದೇಶವು ಕೂಡ ಅಭಿವೃದ್ಧಿ ಆಗುತ್ತ, ಕೇವಲ ನಮ್ಮದು ಯುವಕರ ದೇಶ ಅಂತ ಹೇಳಿದ್ರ ಏನು ಉಪಯೋಗ ಇಲ್ರಿ, ಅವರಿಗೆ ಈ ರೀತಿಯ ಅನೇಕ ಮಾಹಿತಿ ನಮ್ಮ ಶಿಕ್ಷಣದಲ್ಲಿ ಕೊಟ್ಟರೆ ಮಾತ್ರ ಉಪಯೋಗ ಆಗುತ್ತ ಇಲ್ಲ ಅಂದ್ರ ಹಿಂಗೆ ಹಿಂದೆ ಉಳಿತಿವಿ ಹೌದಲ್ರಿ. ಎಂದು ಪ್ರಶ್ನಿಸಿದ. ನನ್ನ ಬಗ್ಗೆ ಹೆಮ್ಮೆ ಇದೆರಿ ನಾನು ಇದನ್ನೆಲ್ಲ ಯಾರ ಸಹಾಯ ಇಲ್ಲದೆನೆ ಕಲಿತೀನಿ ಏಕಲವ್ಯನ ಥರ ಅಂತ ಹೇಳಿ ಇನ್ನೂ ಸಾಕಷ್ಟು ಹೇಳಲಿಕ್ಕೆ ಇದ್ದರೂ ಮತು ನಿಲ್ಲಿಸಿದ.ಅಷ್ಟೊತ್ತಿಗೆ ನನ್ನ ಹೋಮ್‌ಥೇಟರ್ ಕೂಡ ರಿಪೇರಿಯಾಗಿತ್ತು, ಮನೆ ಕಡೆ ಹೊರಟಾಗ ನನ್ನ ತಲೆಯಲ್ಲಿ ಅವರಾಡಿದ ಒಂದೊಂದು ಮಾತು ನನಗೆ ಯೋಚನೆ ಮಾಡಲಿಕ್ಕೆ ಹಚ್ಚಿತು, ಆಯಾ ಸಮಯಕೆ ಅಪ್‌ಡೇಟ್ ಅಗಬೇಕು, ನಾವು ಯುವ ಜನೋತ್ಸವ ದಿನ ಆಚರಿಸಲಿಕ್ಕೆ ತಯ್ಯಾರಿ ಮಾಡಿಕೊಳ್ತಾ ಇರುವ ಈ ಸಂದರ್ಭದಲ್ಲಿ ದೇಶದ ಯುವಕರ ಬಗ್ಗೆ, ಯುವಕರನ್ನು ತೊಡಗಿಸಿಕೊಂಡು ಅವರು ಜೀವನ ಕಟ್ಟಿಕೊಳ್ಳಲಿಕ್ಕೆ ಸಹಾಯಕವಾಗುವಂತಹ ಮಾರ್ಗೋಪಾಯಗಳ ಬಗ್ಗೆ, ಶೈಕ್ಷಣಿಕ ವ್ಯವಸ್ಥೆಗಳು ಪ್ರಕ್ರಿಯೆಗಳು ಸುಧಾರಿಸಬೇಕಾದ ಅಗತ್ಯತೆಗಳ ಬಗ್ಗೆ ಮಾತನಾಡಿದ್ದು ನೂರಕ್ಕೆ ನೂರು ಸತ್ಯ ಅನಿಸಿತು. ಶೈಕ್ಷಣಿಕ ಗುರಿಗಳಲ್ಲೊಂದಾದ "Learn to Learn, learn to unlearn and relearn capabilities" ನ ಅನುಭವ ಮನಸಿಗೆ ಚಿತ್ರಿಸಿದಂತೆ ಹಾಗೆ ಉಳಿದುಕೊಂಡಿದೆ.

# ಸಂಭ್ರಮದ ಸಂಕ್ರಾಂತಿ

**ದರ್ಶಿತ ಸಿ ಎಲ್ ರಾಯಚೂರು**

ಮುಂಜಾನೆಯ ನಸುಕಿನಲ್ಲಿ
ಮಡಿಯನುಟ್ಟ ನೀರೆಯರು
ಅಂಗಳಕ್ಕೆ ನೀರೆರೆದು ಬಿಡಿಸಿಹರು
ಚಿತ್ತಾರದ ರಂಗವಲ್ಲಿ.

ಪಥವ ಬದಲಿಸುತ್ತಿರವ ದಿವಸ್ಪತಿಯು
ಚಲ್ಲುತಿಹನು ಸ್ವರ್ಣರಶ್ಮಿಯ ಕಾಂತಿ
ಅದುವೇ ಉತ್ತರಾಯಣ ಪುಣ್ಯಕಾಲ
ತಂದಿಹುದು ಮನಕೆ ಚಿಲುಮೆಯ ಹೊಂಬೆಳಕ.

ಎಳ್ಳು ಬೆಲ್ಲದ ಸಿಹಿಯ ಹಂಚುತ್ತಾ
ಸೌಹಾರ್ದ ಸಾರುವ ಚಿಣ್ಣರು
ಕಬ್ಬಿನ ಜಲ್ಲೆಯ ರಸವ ಹೀರುತ್ತಾ
ಹಬ್ಬದ ಸಡಗರದಿ ನಲಿದಿಹರು.

ಸೌರಹಬ್ಬದ ಸಡಗರಕ್ಕೆ
ಪ್ರಪಂಚದ ಜೀವರಾಶಿ ಸಜ್ಜು.
ನಿಶೆಯು ಸರಿದು, ಹಗಲು ಹೆಚ್ಚಿದ ವೈಭವ
ಹರುಷದಿ ಆಚರಿಸುವ ಈ ಸಂಕ್ರಾಂತೋತ್ಸವ.



## ಕಂಡೆ ನಾ ನಿನ್ನನು ನನ್ನ ನಡೆನುಡಿಯಲಿ

**Renuka PB Raichur**

ಕಂಡೆ ನಾ ನಿನ್ನನು ನನ್ನ ನಡೆನುಡಿಯಲಿ
ನಿಂದೆ ನೀ ನನ್ನ ಬಾಲ್ಯದ ನೆನಪುಗಳಲಿ
ಇರುವೆ ನೀ ನೀಡಿರುವ ಆಸರೆಯ ಅಪ್ಪುಗೆಗಳಲಿ
ಬದಲಿವೆ ದಿನಗಳು ಬರಿದಾದ ಆಸೆಗಳಲಿ
ಕಾಯುತಿವೆ ಕಂಗಳು ನಿನ್ನ ಕಂಣ್ಣ್ತುಂಬಲು ಕಾತುರದಲಿ

ಕಳೆವೆ ನಾ ನೆನೆದು ದಿನಗಳ ನಿನ್ನ ಕಾಳಜಿಯ ಮಾತುಗಳಲಿ
ಸೋತೆ ನಾ ಅದನು ಪಾಲಿಸದೆ ಬದುಕಿನಲಿ
ನಿನ್ನ ಆಕಾಂಕ್ಷೆಯಂತೆ ತಲುಪಿರಲು ಗುರಿಯಲಿ
ಆದರೂ ಹುಡುಕುತಿಹೆ ಹಾದಿಯ ಸೇರಲು ನಿನ್ನಾಳದ ಮನದಲಿ
ಒಂಟಿಯಾಗಿಹೆನು ಬಾ ಮತ್ತೊಮ್ಮೆ ಜೀವವ ಬದುಕಿಸಲೊಮ್ಮೆ ಮಮತೆಯ ಒಲವಿನಲಿ.

## *A BOY WHO ASKED 50 $*

***Mohammed Muzamil Devadurga***



SON: "Daddy, may I ask you a question?"

DAD: "Yeah sure, what is it?"

SON: "Daddy, how much do you make an hour?"

DAD: "That's none of your business. Why do you ask such a thing?"

SON: "I just want to know. Please tell me, how much do you make an hour?"

DAD: "If you must know, I make $100 an hour."

SON: "Oh! (With his head down).

SON: "Daddy, may I please borrow $50?"

The father was furious.

DAD: "If the only reason you asked that is so you can borrow some money to buy a silly toy or some other nonsense, then you march yourself straight to your room and go to bed. Think about why you are being so selfish. I work hard every day for such this childish behaviour."

The little boy quietly went to his room and shut the door.

The man sat down and started to get even angrier about the little boy's questions. How dare he ask such questions only to get some money?

After about an hour or so, the man had calmed down, and started to think:

There was something he really needed to buy with that $ 50 and he really did not ask for money very often. The man went to the door of the little boy's room and opened the door.

DAD: "Are you asleep, son?"

SON: "No daddy, I'm awake".

DAD: "I've been thinking, maybe I was too hard on you earlier. It has been a long day and I took out my aggravation on you. Here's the $50 you asked for."

The little boy sat straight up, smiling.

SON: "Oh, thank you daddy!"

Then, reaching under his pillow he pulled out some crumpled up bills. The man saw that the boy already had money, started to get angry again. The little boy slowly counted out his money, and then looked up at his father.

DAD: "Why do you want more money if you already have some?"

SON: "Because I didn't have enough, but now I do.

"Daddy, I have $100 now. Can I buy an hour of your time? Please come home early tomorrow. I want to play with you."

The father was crushed. He put his arms around his little son, and he begged for his forgiveness. It is just a short reminder to all of us working so hard in life.
We should not let time slip through our fingers without having spent some time with those who really matter to us, those close to our hearts.

# IT'S NEVER TOO LATE

**New year resolution in the field.**


**Spoorthi Rao – Kalaburagi**

The world runs behind success and forgets what is given. People tend to achieve everything as early as possible and constantly work under pressure. They do not take a moment to feel grateful for the life given. Only a few understand the true meaning of life. In this article, I want to tell everyone reading that it is okay if you could not begin what you have planned this year from the very first day because it's never too late. It takes a lot to step out from the comfort zone and try out new things. If at all one decides to start something good and adapt in their life, it is already an achievement.

There is this value in NCF – Aims of education that the person should be able to learn, unlearn and relearn things. So, life is a never-ending learning journey. One must keep their hearts open for everything coming their way. As working people, we tend to forget the real things which matter the most.

So, this year I have decided to not to run and to take a pause wherever its necessary and breathe for some time and feel grateful for this beautiful life. I really feel that it is the need of the hour. A dear friend told me that, life is so uncertain, and we never know what is in the box. So, the goal is to live it to the fullest and experience every emotion completely. This does not happen overnight; it takes a lot of time, and it is a process rather than task to complete. I strongly feel that it takes a lot of courage to keep going no matter what. In the end, it is the journey which makes the life more beautiful than the destination.

So, my new year resolution is to be kind to my own self and to others and never rush things. And I hope everyone gets to a live an emotionally rich life. At last, just remember that to start good things you do not need any special days. And it is never too late.



# MAKARA SANKRANTI FESTIVAL



M. NALINI SINDHANUR

*Makara Sankranti is the celebration of the harvest festival. we all know that spring is the most pleasant of all the seasons, it is accompanied by pleasant weather. our ancient tradition followed some rituals during this period.*




*we will celebrate the festival called Makara Sankranti, which is a religious and cultural harvest festival all over the country.*

*Sankranti festival is dedicated to Lord Sun. It also refers to the specific solar day in the Hindu calendar. On this auspicious day, the sun enters from the zodiac sign Sagittarius (Dhanu) to Capricorn (Makar) which marks the end of the winter month and the beginning of the longer days. Many native multi-day festivals are organized on this occasion all over India.*

*As Sankranti is also called as Maghi, Sankramana, Bhogi, Pongal, Til Sankranti, etc. we celebrate this festival by decorating our houses with beautiful colorful Rangoli powders, and flower Kite flying, bonfires fairs, Surya pooja in a river, feast, Cow pooja, etc.*



*This festival is also about good food as it is the peak of winter sesame and jaggery-based sweets are the most consumed. These two ingredients are rich in nutritional value and give warmth to the body.*



*It is believed donating khichdi & sesame seeds sweets brings good fortune.*

*People greet each other with a popular Kannada saying "**Ellu Bella thindu olle mathaadi**" which means eating the mixture of sesame and Jaggery and speaking good words.*

*This Ellu Bella mixture has a lot of other ingredients like peanuts, roasted gram, and desiccated coconuts which makes it a guilt-free healthy snack too.*

*Hence Sankranti in Karnataka, but in other states like Assam it is called Bihu and in Punjab, it is called Lohiri and Tamil Nādu Pongal, Kerala Onam, etc., celebrations also vary from one state to other in food style.*

*I wish everyone a Happy Makara Sankranti; may this year bring you lots of happiness and strength throughout the year.*

# TIRANGA

**Mohammed Ismail Vijayapura**



In all our schools every year National festival will be celebrated. We celebrate our national festivals; we do flag hosting in our schools. We should explain the flag importance in this context and its identity in the students, so that know the value of Flag and its importance. Every Nation has its own flag for its identity.

So, I am writing some of the major key elements of our Symbol of the Nation. It is not only the symbol but also a Unity of Symbol. Here I am talking about the flag, which is mighty for all Indians, for which every Indian is eager to serve, it is the only element for which all Indians think beyond their religion and caste boundaries. So here I am talking about the national flag of India.

**TIRANGA** ans the combination of three colors). The history of Tiranga is very old. Mahatma Gandhi first spoke about the need for an Indian flag in 1921. He proposed a flag with the charkha or spinning wheel at the center and if we talk about its look, it is not always like that as we have seen today. In the nearby time of 1947, it was of three colors in which saffron is at the top, white is in the middle and green is at the bottom.

In the middle of which there is a **Charkha**  that is known as Ashok Chakra. In it saffron represents sacrifice, white represents peace, green color represents progress and charkha represents the spirit of swadeshi. To represent Gandhi Ji's fight for freedom but nowadays we are seeing it as in the same colors with the same message but with chakra, in place of charkha as the symbol of the wheel of duty with 24 spokes it is the only reason for what designers have put it in the flag. The designer who designed the modern flag is Pingali Venkayya. The flag has been designed on the bases of swaraj flag or the flag of Indian National Congress.

Among the student's teacher has to give the knowledge Importance of National Flag, it means a lot not only for the officials of the country but also for civilians. But now people are becoming careless day by day as we can easily see on the occasion of any national festival people buy them and move throughout the day with it but the scenario of next day is like that all those flags will be lying on the grounds and none of us pick them up ,but I think it is not our fault it is the fault of being seniors who told us about good jobs, earning, careers but never told us about Saheed Bhagat Singh, Subhash Chandra Bose and many other martyrs who sacrificed their lives to bring independence

,because if our seniors told us about all of them so then we would have come to know the value of this flag for raising of which our country had lost many precious gems.

ow I think that, from today we shall take the pledge to respect our national flag and follow all its conveyed messages for the betterment of our country and to raise our national flag at the top of the world. We all know that it is India's heritage to see all the countries of the world as a family. So that all countries will see India not only as the world leader but also as the father of all countries. As the work of the father is to guide the family members and maintain harmony. India and its flag also get such opportunity and respect and we all know that it is the heritage of India to see the whole world as the family.

The national flag is a symbol of our country, it gives us the same patriotic feeling where we make our country proud. Currently in entertainment zones and in movie theaters it is mandatory to stand up for the national anthem to show respect for our country, in schools children sing the national anthem every day followed by their regular prayer, any government and private sector of the organization also hoist flags and pay tribute on those special occasions.

No matter where we live it is our integrity towards our nation to celebrate special days i.e., 15 August or 26th January across the world. This shows the love and integrity of India. Our Indian National flag has made a wide existence across the globe. People are making India proud by achieving a good name and fame in various sectors or industries. The national flag of any country is not only the symbol of that nation but also the symbol of the unity of its population. The Indian flag is the one emblem that we all look at and dedicate our lives for serving the nation in some way or the other; the appearance of the flag makes all caste and religion boundaries disappear.

The national flag of India is known as the 'Tiranga' - for the three colors represented in it, saffron, white, and green. It was Mahatma Gandhi in the year 1921 who first spoke of the need for an Indian flag; he always spoke of the need for the spinning wheel or 'charkha' on the flag, although the appearance of the flag has changed many times throughout the years.



Around the year 1947, the flag was mostly finalized - the tricolor, with saffron at the top and green at the bottom, sandwiching the white in the middle with what is known as the Ashoka Chakra upon it. Each element of the flag represents something; the saffron represents sacrifice, white for peace, green for progress, and finally, the charkha represents the spirit of 'swadeshi.' The main difference

made since then is the removal of the charkha and replacing it with the chakra, the wheel of duty with 24 spokes.

The above seen flag is made by the students at my cluster School, they made by using vegetables like cucumber, white radish, carrot, and cuttings in a small part and put in a plate, so it looks like a flag.

For every patriot we find today, there was a freedom fighter who helped make it possible for these patriots to shine today. While it is important to focus on our futures, we must remain aware that such a future would not even be possible without the likes of Shaheed Bhagat Singh, Subhas Chandra Bose, and other martyrs who lived and died fighting for the flag and the freedom it represents, and all the opportunities it brings with it for all citizens of India, past, present, and future.

As students, we must take a pledge to respect our national flag with great veneration and follow all of its prescribed tenets with temerity. It is us as citizens who can bring India up to its true potential and secure its place on the world stage. It is up to us to share our heritage, and we can only do it once we ourselves are aware of it

The national flag exists to give us a united sense of patriotism wherever we go, as it is the foremost symbol of our country; it is emblematic of what India as a country represents.

India as a country of Youth, in India, Youth population is more. the power of youth is a feeling strong, think like India is young and energetic country which feel proud, as made respect for the flag impossible to avoid, and thereby imbibes in people young and old, the importance of this one piece of cloth. It is mandatory to stand up for the national anthem accompanied by the flag whenever one goes for any movie or concert; children in school sing the **national anthem** in praise and respect of the country and its flag. **Feeling proud** to be say

We are Indians. Jai Hind





# मकर संक्रांति

भारती तिवारी **Sindhanur**

मकर संक्रांति का त्योहार, सूर्य के उत्तरायन होने पर मनाया जाता है। इस पर्व की विशेष बात यह है कि यह अन्य त्योहारों की तरह अलग-अलग तारीखों पर नहीं, बल्कि हर साल 14 जनवरी को ही मनाया जाता है, जब सूर्य उत्तरायन होकर मकर रेखा से गुजरता है। यह पर्व हिन्दू धर्म के प्रमुख त्योहारों में शामिल है।




कभी-कभी यह एक दिन पहले या बाद में यानि 13 या 15 जनवरी को भी मनाया जाता है लेकिन ऐसा कम ही होता है। मकर संक्रांति का संबंध सीधा पृथ्वी के भूगोल और सूर्य की स्थिति से है। जब भी सूर्य मकर रेखा पर आता है, वह दिन 14 जनवरी ही होता है, अत: इस दिन मकर संक्रांति का तेहार मनाया जाता है।

भारत के अलग-अलग क्षेत्रों में मकर संक्रांति के पर्व को अलग-अलग तरह से मनाया जाता है। आंध्रप्रदेश, केरल और कर्नाटक में इसे संक्रांति कहा जाता है और तमिलनाडु में इसे पोंगल पर्व के रूप में मनाया जाता है। पंजाब और हरियाणा में इस समय नई फसल का स्वागत किया जाता है और लोहड़ी पर्व मनाया जाता है, वहीं असम में बिहू के रूप में इस पर्व को उल्लास के साथ मनाया जाता है। हर प्रांत में इसका नाम और मनाने का तरीका अलग-अलग होता है।

अलग-अलग मान्यताओं के अनुसार इस पर्व के पकवान भी अलग-अलग होते हैं, लेकिन दाल और चावल की खिचड़ी इस पर्व की प्रमुख पहचान बन चुकी है। विशेष रूप से गुड़ और घी के साथ खिचड़ी खाने का महत्व है। इसके अलावा तिल और गुड़ का भी मकर संक्राति पर बेहद महत्व है।

इस दिन सुबह जल्दी उठकर तिल का उबटन कर स्नान किया जाता है। इसके अलावा तिल और गुड़ के लड्डू एवं अन्य व्यंजन भी बनाए जाते हैं। इस समय सुहागन महिलाएं सुहाग की

सामग्री का आदान प्रदान भी करती हैं। ऐसा माना जाता है कि इससे उनके पति की आयु लंबी होती है।

महाभारत में भीष्म पितामह ने सूर्य के उत्तरायण होने पर ही माघ शुक्ल अष्टमी के दिन स्वेच्छा से शरीर का परित्याग किया था। उनका श्राद्ध संस्कार भी सूर्य की उत्तरायण गति में हुआ था। फलतः आज तक पितरों की प्रसन्नता के लिए तिल अर्घ्य एवं जल तर्पण की प्रथा मकर संक्रांति के अवसर पर प्रचलित है।

इन सभी मान्यताओं के अलावा मकर संक्रांति पर्व एक उत्साह और भी जुड़ा है। इस दिन पतंग उड़ाने का भी विशेष महत्व होता है। इस दिन कई स्थानों पर पतंगबाजी के बड़े-बड़े आयोजन भी किए जाते हैं। लोग बेहद आनंद और उल्लास के साथ पतंगबाजी करते हैं

**ನೋಡು ನೋಡು ಎಂತ ಚೆಂದ**

ಮಾಲತಿ Viajayapur

ನೋಡು ನೋಡು ಎಂತ ಚೆಂದ

ಹಕ್ಕಿಯು ಮರದಲ್ಲಿ ಹಾಡುವುದು ಅಂದ

ಗಿಡದಲ್ಲಿ ಹಣ್ಣು ಇರುವುದು ಚೆಂದ

ಮಕ್ಕಳು ಬೀದಿಯಲ್ಲಿ ಆಡುವುದು ಅಂದ

ನದಿಯಲ್ಲಿ ನೀರು ಹರಿಯುವುದು ಚೆಂದ

ಮಳೆಯಲ್ಲಿ ಮಕ್ಕಳು ನೆನೆಯುವುದು ಅಂದ

ಶಾಲೆಯಲ್ಲಿ ಮಕ್ಕಳು ಇರುವುದು ಚೆಂದ

ಆಡುತ್ತಾ ನಲಿಯುತ್ತಾ ಕಲಿಯುವುದು ಅಂದ

ಶಾಲೆಯ ತೋಟದ ಗಿಡಗಳು ಚೆಂದ

ಅದಕ್ಕೆ ನೀರುಣಿಸುವ ಮಕ್ಕಳು ಇನ್ನು ಅಂದ

ನೋಡು ನೋಡು ಎಂತ ಚೆಂದ

ನಾವು ಇನ್ನೊಮ್ಮೆ ಮಕ್ಕಳಾದರೆ ಅದೇಷ್ಟು ಆನಂದ:


**ಪಿಕಿಲಿಹಾಳ: ಪ್ರಾಗೈತಿಹಾಸಿಕ ಚಿತ್ರಗಳು (ಕರ್ನಾಟಕದ ನವ ಶಿಲಾಯುಗದ ಸ್ಥಳ) – ಡಾ.ಎಚ್. ಮಹದೇವಸ್ವಾಮಿ.**

ಪಿಕಿಲಿಹಾಳವು ರಾಯಚೂರು ಜಿಲ್ಲೆಯ ಲಿಂಗಸೂಗೂರು ತಾಲ್ಲೂಕಿನಲ್ಲಿದೆ. ಇದು ಪ್ರಾಚೀನ ಕಾಲದ ಮಾನವನ ಯೋಗ್ಯ ಸ್ಥಳವಾಗಿತ್ತು. ಪ್ರಸ್ತುತ ಗ್ರಾಮದಿಂದ ಅರ್ಧ ಮೈಲಿ ದೂರ ಹೋದರೆ ಒಂಭತ್ತು ಕಲ್ಲಿನ ಬೆಟ್ಟಗಳನ್ನು ಕಾಣಬಹುದು. ಈ ಬೆಟ್ಟಗಳಲಿ ಐತಿಹಾಸಿಕ ಗುರುಹುಗಳು ಸಾಕಷ್ಟು ದೊರಗುತ್ತದೆ.ಈ ಗ್ರಾಮದ ಇತಿಹಾಸವನ್ನು ನೋಡಿದರೆ ಪ್ರಾಚೀನ ಮಹತ್ವವನ್ನು ಪಡೆದಿದೆ.ಈ ಗ್ರಾಮದ ಬಗ್ಗೆ ಪುರತತ್ವ ಶಾಸ್ತ್ರಜ್ಞರು ಉತನ್ನನ ಮಾಡಿದ್ದಾರೆ. ಅವರಲ್ಲಿ ಪ್ರಮುಖರಾದವರು ರೇಮಂಡ್ ಆಲ್ಚಿನ್ ರವರು ಬ್ರಿಟಿಷ್ ಪುರತತ್ವಶಾಸ್ತ್ರಜ್ಞರು. ಇವರು ಪಿಕಿಲಿಹಾಳದ ಬಗ್ಗೆ ಅದ್ಯಯನ ಮಾಡಿದವರಲ್ಲಿ ಮಾದಲಿಗರು ಎಂದು ಹೇಳಬಹುದು. ಇವರು 1952ರಲ್ಲಿ ನವಶಿಲಾ ಯುಗಕಾಲಕ್ಕೆ ಸೇರಿದ ಮಾನವರ ಅಸ್ತಿತ್ವವು ಪಿಕಿಲಿಹಾಳದಲ್ಲಿ ಇತ್ತು ಎಂಬುದನ್ನು ಪರಿಚಯಸಿದ್ದಾರೆ. ನಂತರ 1960ರಲ್ಲಿ ಈಸ್ಥಳದ ಬಗ್ಗೆ ಪ್ರಕಟಣೆಯನ್ನು ಮಾಡಿದ್ದಾರೆ. ಇವರು ನಾಶವಾದ ಮನೆಯ ಮೂಲವನ್ನು ಸೂಚಿಸುವ ಚದುರಿದ ಕಲ್ಲುಗಳು, ಕಲ್ಲಿನ ಉಪಕಣಗಳು, ಕೆಲವು ಚಿತ್ರಗಳನ್ನು ಗುರುತಿಸಿದ್ದಾರೆ. ಇತಿಹಾಸಕಾರ ಪ್ರಕಾರ ಕ್ರಿ.ಪೂ 2700 ವರ್ಷಗಳ ಕಾಲದ ಒಂದು ತಾಣವಾಗಿದೆ. ಪಿಕಿಲಿಹಾಳದಲ್ಲಿ ದೊರೆತಿರುವ ಪ್ರಾಚೀನ ವಸ್ತುಗಳೆಂದರೆ ಕಲ್ಲಿನ ಚಕ್ಕೆಗಳು, ಜಿಂಕೆಯ ಚಿತ್ತಗಳು, ಕಲ್ಲಿನ ಗುಹೆ, ಪ್ರಾಣಿಯ ಎಲುಬುಗಳು, ಮಡಿಕೆಯ ಚೂರುಗಳು, ಕಬ್ಬಿಣದ ಚೂರುಗಳು, ಒಂದು ಹೊಲದಲ್ಲಿ ಐದು ಎತ್ತರದ ಕಲ್ಲುಗಳು, ಮಾನವನ ಚಿತ್ರಗಳು, ಆನೆಯಚಿತ್ರ, ಗೂಳಿಯ ಚಿತ್ರ, ಮನೆಯ ಅಡಿಪಾಯ ಹಾಕಿರುವಚಿತ್ರ, ಐದು ದೊಡ್ಡ ಕಲ್ಲಿನ ಸಮಾದಿಗಳು ದೊರಗಿವೆ.

ಪ್ರಾಗಿತಿಹಾಸ ಕಾಲದ ಚಿತ್ರಗಳು ಆ ಕಾಲಘಟ್ಟದ ಜೀವನ ಕ್ರಮವನ್ನು ಪ್ರತಿಬಿಂಬಿಸುತ್ತದೆ. ಈ ಚಿತ್ರಗಳು ಮಾನವನ ಬೇಟೆಗಾರಿಕೆ, ಪಶುಪಾಲನೆ, ಶವಸಂಸ್ಕಾರ, ಮತ್ತಿತರ ಘಟನೆಗಳನ್ನು ಚಿತ್ರಗಳ ಸಹಾಯದಿಂದ ಗುರುತಿಸಬಹುದಾಗಿದೆ. ಇಂಥ ಚಿತ್ರಗಳಿಂದ ಆ ಕಾಲದ ಸಂಸ್ಕೃತಿ, ಸಾಮಾಜಿಕ ಜೀವನ ಕ್ರಮಗಳನ್ನು ಅರಿತುಕೊಳ್ಳಲು ಸಾದ್ಯವಾಗುತ್ತದೆ. ಚಿತ್ರಕಲೆ ಬೆಳವಣಿಗೆಯ ವಿಕಾಸವನ್ನು ಶಿಲಾಯುಗದ ಕಾಲದಿಂದ ನೋಡಬಹುದಾಗಿದೆ. ಆ ಕಾಲದ ಮಾನವನು ತನ್ನ ಸುಖ,–ದುಃಖ ಮಾದಲಾದ ಭಾವನೆಗಳನ್ನು ವ್ಯಕ್ತಪಡಿಸಲು ಆತ ತನ್ನ ಆಶ್ರಯ ತಾಣಗಳಾದ ಗುಹೆಗಳು, ಇಲ್ಲವೆ ಕಲ್ಲಾಸರೆಗಳ ಗೋಡೆ ಮತ್ತು ಛತ್ತುಗಳ ಮೇಲೆ ಸಾಂಕೇತಿಕವಾಗಿ ಗೆರೆಗಳನ್ನು ಚಿತ್ರಿಸತೊಡಗಿದನು. ಮುಂದೆ ಆ ಗೆರೆಗಳೇ ಒಂದು ನಿರ್ಧಿಷ್ಟ ರೂಪವನ್ನು ಪಡೆದುಕೊಂಡು ಆಕಾರ ಚಿತ್ರಗಳಾಗಿ ರೂಪಿತಗೊಂಡವು, ಈ ರೀತಿಯಲ್ಲಿ ವಿಕಾಸಗೊಂಡ ಚಿತ್ರಕಲೆಯನ್ನು ನಾವು ಆದಿಮಾನವನ ಚಿತ್ರಕಲೆ ಅಥವಾ ಪ್ರಾಗಿತಿಹಾಸ ಕಾಲದ ಚಿತ್ರಕಲೆ ಎಂಬುದಾಗಿ ಕರೆಯಲಾಗಿದೆ. ಈ ಕಲೆಯು ನೈಸರ್ಗಿಕ ತಾಣಗಳಾದ ಬಯಲು ಬಂಡೆಗಳಲ್ಲಿ ಚಿತ್ರಗಳನ್ನು ಬಿಡಿಸಿರುವುದು ಸಾಕಾಷ್ಟು ಕಡೆ ಕಂಡುಬರುತ್ತದೆ. ಈ ರೀತಿಯ ಬಂಡೆ ಚಿತ್ರಗಳಿಂದ ಸಾಕಾಷ್ಟು ಮಾಹಿತಿಗಳು ಲಭ್ಯವಾಗಿದೆ. ಈ ರೀತಿಯ ಮಾಹಿತಿಗಳಿಂದ ಹೂಸ ಹೂಸದಾಗಿ ಚಿಂತನೆ ಮಾಡಲು ಅವಕಾಶವನ್ನು ಮಾಡಿದೆ. ಪ್ರಸ್ತುತ ಲೇಖನದಲ್ಲಿ ಮುಖ್ಯವಾಗಿ ಪಿಕಿಲಿಹಾಲದಲ್ಲಿರುವ ಗವಿವರ್ಣ ಮತ್ತು ಬಯಲು ಬಂಡೆಗಳ ಚಿತ್ರಗಳನ್ನು ಕುರಿತಾಗಿ ಮಾತ್ರ ಚರ್ಚಿಸಲಾಗಿದೆ.

ಗವಿಚಿತ್ರಗಳಲ್ಲಿ ಸಾಮಾನ್ಯವಾಗಿ ಮನುಷ್ಯರು, ಪ್ರಾಣಿಗಳು, ಸಂಕೇತ ಮತ್ತು ವಿಚಿತ್ರವಾದ ರೇಖಾಚಿತ್ರಗಳಿರುತ್ತವೆ. ಕೆಲವು ಗವಿ, ಕಲ್ಲಾಸರೆಗಳಲ್ಲಿ ಸಮೂಹನೃತ್ಯ, ಪ್ರಾಣಿ ಸಾಲುಗಳು, ಮನುಷ್ಯನ ಜೊಡಿ ಪಶುಪಾಲನೆ, ದೃಶ್ಯದ ಬೇಟೆಗಾರಿಕೆ ದೃಶ್ಯದ ಚಿತ್ರಗಳಿರುತ್ತವೆ.ಮನುಷ್ಯ ಹಾಗೂ ಪ್ರಾಣಿಗಳು ನಿಂತ ಭಂಗಿಯಲ್ಲಿರುವುದು ಸರ್ವೆ ಸಾಮಾನ್ಯ. ಈಚಿತ್ರಗಳನ್ನು ಬಾಹ್ಯರೇಖೆ ಇಲ್ಲವೆ ಛಾಯರೂಪದಲ್ಲಿ ತೋರಿಸಲಾಗಿದೆ. ಅಪರೂಪವಾಗಿ ಕಣ್ಣು, ಕಿವಿ, ಮೂಗು, ಬಾಯಿ, ಕೈಬೆರಳು, ಹಸ್ತ, ಪಾದಗಳನ್ನು ಸೂಚಿಸಲಾಗಿದೆ. ಛಾಯರೂಪದ ಚಿತ್ರಗಳು ಮೈಪೂರ್ತಿ ಬಣ್ಣದಿಂದ ತುಂಬಿದು, ಮನುಷ್ಯರ ಪ್ರಾಣಿಗಳ ನೆರಳಿನಂತೆ ಇರುತ್ತದೆ. ಈ ಆಕೃತಿಗಳು ಒಂದು ನಿರ್ದಿಷ್ಟ ಪ್ರಮಾಣದಲ್ಲಿರುವುದಿಲ್ಲ. ಒಂದು ಗವಿಯಲ್ಲಿ

ಕೇವಲ ಒಂದೇರಡು ಅಥವಾ ಕೆಲವು ಚಿತ್ರಗಳಿರಬಹುದು. ಅಥವಾ ಹಲವು ಚಿತ್ರಗಳುಗಳಿರಬಹುದು. ಎಲ್ಲಾ ಚಿತ್ರಗಳು ಚೆಲ್ಲಾಪಿಲ್ಲಿಯಾಗಿರುವಂತೆ ತೋರುತ್ತದೆ. ಇದಕ್ಕೆ ಮುಖ್ಯ ಕಾರಣ ಚಿತ್ರಗಳನ್ನು ಒಂದೇ ಕಾಲದಲ್ಲಿ ಒಂದೇ ಕಡೆಯಿಂದ ಬರೆದು ಸ್ಥಳವನ್ನು ತುಂಬಿಸದೇ ಬಬ್ಬೊಬ್ಬರು ಒಂದೊಂದು ಸಮಯದಲ್ಲಿ ಅವರಿಗೆ ಅನುಕೂಲವಾದ ದಿಕ್ಕಿಗೆ ಚಿತ್ರಗಳನ್ನು ಬರೆದಿರುವುದಾಗಿದೆ. ಈ ಚಿತ್ತಗಳು ಹೆಚ್ಚಾಗಿ ಕೆಮ್ಮಣ್ಣಿನ ಬಣ್ಣದಲ್ಲಿರುತ್ತದೆ. ಬಣ್ಣದ ಛಾಯೆಯು ಕಾಲ ವೈಪರೀತ್ಯದಿಂದ ಹಾಗೂ ಇತರ ಕಾರಣಗಳಿಂದ ಒಂದೇ ಸಮನಾಗಿರುವುದಿಲ್ಲ. ಅಪರೂಪವಾಗಿ ಕಾಡಿಗೆ ಕಪ್ಪು ಹಾಗೂ ಮಿಶ್ರಹಳದಿ, ಮುಸುಕು ಬಿಳಿಯ ದ್ವಿ ವರ್ಣಗಳಲ್ಲಿಯೂ ಚಿತ್ರಗಳಿರುತ್ತವೆ. ಬಯಲು ಬಂಡೆ ಚಿತ್ರಗಳ ರಚನಾ ಕ್ರಮ ಸಹಜವಾಗಿ ಭಿನ್ನವಾಗಿದೆ. ದೊಡ್ಡದೊಡ್ಡ ಬಂಡೆಗಳ ರಾಶಿಯಂತಿರುವ ಬೆಟ್ಟಗಳ ಮದ್ಯದ ಮತ್ತು ಮೇಲಿನ ಹಂತಗಳಲ್ಲಿ ಬಯಲಿನಲ್ಲಿರುವ ಬಂಡೆಗಳಲ್ಲಿ ಇಲ್ಲವೇ ನೀರಿನ ತಾಣದಲ್ಲಿಯ ಬಂಡೆಗಳಲ್ಲಿ ಇಂಥಹ ಚಿತ್ರಗಳು ಕಂಡುಬರುತ್ತಿವೆ. ಬಡೆಯ ಸಪೂರವಾದ ಮೇಲ್ಮೈಯ ಮೇಲೆ ಬೇಕಾದ ಚಿತ್ರಗಳನ್ನು ಮೂಡಿಸುವುದಕ್ಕೆ ಅನುಕೂಲಕರವಾದ ಸಪೂರವಾದ ಮೊಂಡು ತುದಿಯುಳ್ಳ ಉದ್ದನ ಕಲ್ಲು ತುಡಿನಿಂದ ಏಕಪ್ರಕಾರವಾಗಿ ಕುಟ್ಟಿಕುಟ್ಟಿ ಬಿಡಿಸಿರುವುದು ಇಲ್ಲವೇ ಉಳಿಯಂತಹ ಮೊನಚಾಧ ಉಪಕರಣದಿಂದ ಗೆರೆಗಳನ್ನೂ ಮೂಡಿಸಿ ಚಿತ್ರಗಳನ್ನು ಮೂಡಿಸುತ್ತಿದರು. ಕೊರೆದ ತಂತ್ರಗಳಲ್ಲಿ ಚಿತ್ರಗಳು ಕೇವಲ ಬಾಹ್ಯರೇಖೆಗಳಲ್ಲಿನ ರಚಿಸಲಾಗಿದೆ. ಈ ರೇಖೆಗಳು ಸ್ವಲ್ಪ ಆಳವಾಗಿರುತ್ತದೆ.
ಪಿಕಿಲಿಹಾಳದಲ್ಲಿ ಮಾನವನ ಮತ್ತು ಪ್ರಾಣಿಗಳ ಚಿತ್ರಗಳು ಕಂಡು ಬರುತ್ತದೆ, ಇಲ್ಲಿನ ಮಾನವನ ಚಿತ್ರವನ್ನು ಗಮನಿಸಿದರೆ ಎತ್ತರವಾಗಿವುದನ್ನು ಸೂಕ್ಷ್ಮವಾಗಿ ಹೇಳಬಹುದು. ಇತ್ತೀಚಿಗೆ 7 ಅಡಿ ಎತ್ತರವಿರುವ ಮಾನವನ ಆಸ್ತಿ ಪಂಜರ ಮಸ್ಕಿಯಲ್ಲಿ ಇರುವುದು ಪತ್ತೆಯಾಗಿದೆ. ಮಸ್ಕಿ ಮತ್ತು ಪಿಕ್ಲಿಹಾಲದ ಊರುಗಳ ನಡುವೆ 15–20 ಕಿ,ಮೀ ದೂರ ಇದೆ. ಈ ಹಿನ್ನೆಲೆಯನ್ನು ಸಂಶೋಧಾನ್ಮಕವಾಗಿ ಅಧ್ಯಯನಗಳು ನಡೆದರೆ ಹೆಚ್ಚಿನ ಹೊಸ–ಹೊಸ ವಿಚಾರಗಳು ಬೆಳಕಿಗೆ ಬರುತ್ತದೆ.




**ಮಾನವನ ಚಿತ್ರ:** ಪಿಕಿಲಿಹಾಲದಲ್ಲಿ ದೊರೆತ್ತಿರುವ ಚಿತ್ರಗಳಲ್ಲಿ ಮಾನವನ ಚಿತ್ರವು ಒಂದು. ಈ ಚಿತ್ರವು ಕೆಮ್ಮಣ್ಣಿನಿಂದ ಕೂಡಿದೆ. ಈ ಚಿತ್ರಗಳನ್ನು ಗಮನಿಸಿದಾಗ ಸಾಮಾನ್ಯವಾಗಿ ರೇಖಾಚಿತ್ರಗಳ ಮಾದರಿಯಲ್ಲಿವುದು ಕಂಡು ಬಂದಿದೆ. ಮನುಷ್ಯನ ಚಿತ್ರಗಳು ಒಂದೇ ಕಡೆ ಇಲ್ಲದೆ ಎರಡು ಮೂರು ಬಂಡೆಗಳಲ್ಲಿ ಕೆತ್ತಿರುವುದನ್ನು ಕಾಣಬಹುದು. ಒಂದು ಕಡೆ ಕೇವಲ ಮಾನವನ ಚಿತ್ರವಿದ್ದರೆ, ಇನ್ನೊಂದು ಕಡೆ ಮಾನವನ ಮತ್ತು ಪ್ರಾಣಿಗಳನ್ನು ವೀಕ್ಷಿಸಬಹುದು. ಇಲ್ಲಿ ಚಿತ್ರಗಳನ್ನು ನೋಡಿದಾಗ ಮನುಷ್ಯ ಮತ್ತು ಪ್ರಾಣಿಗಳು ನಿಂತ ಭಂಗಿಯಲ್ಲಿರುವುದು ಸರ್ವೆ ಸಾಮಾನ್ಯವಾಗಿ ಇಲ್ಲಿ ಕಾಣಬಹುದು. ಆಕೃತಿಗಳು ಒಂದು ನಿರ್ಥಿಷ್ಟ ಪ್ರಮಾಣದಲ್ಲಿರುವುದು ಕಂಡು ಬರುತ್ತದೆ. ಇಬ್ಬರು ನೃತ್ಯವನ್ನು ಮಾಡುತ್ತಿರುವಂತೆ ಇವೆ. ಇಬ್ಬರು ಬೇಟೆಯಲ್ಲಿ

ತೋಡಗಿರುವಂತೆ ಬಾಸವಾಗಿದೆ. ಅದರಲ್ಲಿ ಬಬ್ಬ ಮಾನವನು ಚೂಪಾದ ಆಯುಧವನ್ನು ಕೈಯಲ್ಲಿ ಹಿಡಿದಿರುವಂತೆ ಕಾಣಿಸುತ್ತದೆ. ಮತ್ತೊಬ್ಬ ಒಂದು ಕೈಯಲ್ಲಿ ಆಯುಧ ಹಿಡಿದು ಯಾವುದೊ ಪ್ರಾಣಿಗೆ ಒಡೆಯುವ ಹಾಗೆ ಕಾಣುತ್ತದೆ. ಈ ಬಂಡೆಯಲ್ಲಿ ನಾಲ್ಕು ಮಾನವನ ಚಿತ್ರಗಳು ಕೆಂಪು ಬಣ್ಣದಲ್ಲಿರುವುದು ವಿಶೇಷವಾಗಿದೆ.





**ಮಾನವನು ಪ್ರಾಣಿಯ ಮೇಲೆ ಸವಾರಿ ಮಾಡುತ್ತಿರುವ ಚಿತ್ರ :**
ಈ ಬಂಡೆಯಲ್ಲಿ ಎರಡು ಮಾದರಿಯ ಪ್ರಾಣಿಗಳ ಚಿತ್ರ ಇವೆ. ಒಂದು ಪ್ರಾಣಿಯ ಚಿತ್ರದಲ್ಲಿ ಮಾನವನು ಕುಳಿತಿಲ್ಲ. ಎರಡನೇ ಪ್ರಾಣಿಯ ಚಿತ್ರದಲ್ಲಿ ಇಬ್ಬರು ಮಾನವರು ಕುಳಿತ್ತಿರುವುದನ್ನು ನೋಡಬಹುದು. ಆ ಪ್ರಾಣಿಯನ್ನು ಗಮನಿಸಿದಾಗ ನಾಲ್ಕು ಕಾಲುಗಳಿವೆ, ಎರಡು ಕಿವಿಗಳು ಮತ್ತು ಒಂದು ಬಾಲವಿರುವುದನ್ನು ನೋಡಬಹುದು. ಸವಾರಿ ಮಾಡುತ್ತಿರುವ ದೃಶ್ಯವನ್ನು ನೋಡಿದರೆ ಆದಿ ಕಾಲದ ಮಾನವನು ಪ್ರಾಣಿಯನ್ನು ಸಾಕಿ ಅವುಗಳನ್ನು ಸಾರಿಗೆಯ ವಾಹನವಾಗಿ ಮಾಡಿಕೊಂಡಿರಬಹುದು. ಪ್ರಾಣಿಯ ಆಕೃತಿಗಳು ರೇಖಾ ವಿನ್ಯಾಸಗಳು ಗಮನಾರ್ಹವಾಗಿದೆ. ಸರಳವಾದ ರೇಳೆಗಳಲ್ಲಿ ಚಿತ್ರಗಳನ್ನು ಸ್ಪಷ್ಟವಾಗಿ ಮೂಡಿಸಲಾಗಿದೆ. ಕೋಡು ಬಾಲಗಳು ಅತ್ಯಂತ ಸಹಜವಾಗಿದೆ.




**ಇಬ್ಬರು ಮಾನವರು ಮತ್ತು ಒಂದು ಪ್ರಾಣಿಯ ಚಿತ್ರ ಇರುವುದು: ಈ** ಬಂಡೆಯಲ್ಲಿ ಚಿತ್ರವನ್ನು ಗೀರುಗಳ ಸಹಾಯದಿಂದ ಬಿಡಿಸಿರುವುದನ್ನು ಕಾಣಬಹುದು. ಬಂಡೆಯ ಮೇಲೆ ಕೆತ್ತಿರುವುದು ಎದ್ದು ಕಾಣುತ್ತದೆ. ಇದು ಬಿಳಿ ಗೆರೆಗಳ ರೀತಿಯಲ್ಲಿ ಕಂಡು ಬಂದಿದೆ. ಬಬ್ಬ ಮಾನವನು ಎತ್ತರವಾಗಿರುವುದು, ಮತ್ತೊಬ್ಬನು ನಲುಕದ ದೇಹವನ್ನು ಹೊಂದಿರುವಂತೆ ಚಿತ್ರಿಸಲಾಗಿದೆ. ಅವನ ಮುಂದೆ ಒಂದು ಪ್ರಾಣಿಯ ಚಿತ್ರವನ್ನು ಕೆತ್ತಲಾಗಿದೆ. ಇದು ಕೆಂಪು ಬಣ್ಣದಿಂದ ಕೂಡಿಲ್ಲ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಆದಿ ಮಾನವರಿಗೂ ಕೂಡ ಚಿತ್ರಕಲೆಯಲ್ಲಿ ವಿಭಿನ್ನತೆ ಇರುವುದನ್ನು ಬಂಡೆಗಳಲ್ಲಿ ಕಂಡು ಬಂದಿರುವ ಚಿತ್ರಗಳನ್ನು ಗಮನಿಸಿದಾಗ ತಿಳಿಯುತ್ತದೆ. ಒಂದು ಬಂಡೆಯಲ್ಲಿ ಸೂಕ್ಷ್ಮಕೆಂಪು ಬಣ್ಣವನ್ನು ಉಪಯೋಗಿಸುವ ಕಲೆಗಾರಿಕೆಯು ಕಂಡು ಬಂದರೆ ಇನ್ನೂ ಕೆಲವು ಬಂಡೆಗಳಲ್ಲಿ ಯಾವುದೇ ಕುಶಲಗಾರಿಕೆಯನ್ನು ಮಾಡದೇ ಚಿತ್ರವನ್ನು ಬಿಡಿಸಿರುವುದನ್ನು ಎದ್ದು ಕಾಣುತ್ತದೆ.

**ಜಿಂಕೆಗಳ ಚಿತ್ರಗಳು:** ಜಿಂಕೆಗಳ ಚಿತ್ರವು ಪಿಕಲಿಹಾಲದಲ್ಲಿರುವ ಬಂಡೆಯ ಮೇಲೆ ಆದಿ ಮಾನವರು ಕೆತ್ತಿರುವುದು ಇವೆ. ಇಲ್ಲಿನ ಚಿತ್ತಗಳು ರೇಖಾತ್ಮಕವಾಗಿ ಬಿಡಿಸಿರುವುದು ಗೋಚರಿಸುತ್ತದೆ. ಜಿಂಕೆಗಳ ಚಿತ್ರಗಳನ್ನು ಸಮೂಹ ಗುಂಪುಗಳಲ್ಲಿ ಬಿಡಿಸಿದ್ದಾನೆ. ಇವು ಸುಮಾರು ಹತ್ತಕ್ಕಿಂತ ಹೆಚ್ಚು ಚಿತ್ರಗಳು ಕಂಡು ಬಂದಿದೆ. ಇವುಗಳು ಆಕಾರದಲ್ಲಿ ಗಾತ್ರದಲ್ಲಿ ಒಂದೇ ಮಾದರಿಯಲ್ಲಿರುವುದನ್ನು ನೋಡಬಹುದು. ಜಿಂಕೆಗಳ ಕಾಲುಗಳ ಕೆತ್ತನೆಯು ಉತ್ತಮವಾಗಿ ಮೂಡಿಬಂದಿದೆ. ಹಾಗೆಯೇ ಅದರ ಕೊಂಬುಗಳು ಎರಡು ಗೆರೆಗಳಲ್ಲಿ ಮೂಡಿಸಿರುವುದು ವಿಶೇಷವಾಗಿ ಕಂಡು ಬಂದಿದೆ, ಜೊತೆಗೆ ಇವುಗಳನ್ನು ಆದಿ ಮಾನವನು ಬೇಟೆಯಾಡಿ ಈ ಪ್ರಾಣಿಗಳನ್ನು ಆಹಾರವಾಗಿ ಉಪಯೋಗಿಸಿರಬಹುದು. ಈ ಜಿಂಕೆಗಳ ಚಿತ್ರವನ್ನು ಆರವತ್ತು ಅಡಿ ಬಂಡೆಯ ಮೇಲೆ ಬಿಡಿಸಿರುವುದು ಆಶ್ಚಯಕರ ಸಂಗತಿ ಎನ್ನಬಹುದು. ಸಾವಿರಾರು ವರ್ಷಗಳು ಕಳೆದರು ಕೂಡ ಅವುಗಳು ಹಾಗೇಯೆ ಉಳಿದುವುದು ಆದಿ ಮಾನವರ ದೂರದೃಷ್ಟಿಕೋನವನ್ನು ನಾವು ಇಲ್ಲಿ ನೋಡಬಹುದು.





**ಆನೆಯ ಚಿತ್ರ:** ಪಿಕಿಲಿಹಾಲದ ಬಂಡಯ ಮೇಲೆ ಬಿಡಿಸಿರುವ ಚಿತ್ರಗಳಲ್ಲಿ ಆನೆಯನ್ನು ಗುರುತಿಸಬಹುದು. ಜಿಂಕೆಗಳನ್ನು ಬಿಡಿಸಿರುವ ಪಕ್ಕದಲ್ಲಿಯೇ ಒಂದು ಆನೆಯ ಚಿತ್ರವನ್ನು ಬಿಡಿಸಿರುವುದು ಸೋಜಿಕರ ಸಂಗತಿಯಾಗಿದೆ. ಆನೆಯ ಸೊಂಡಿಲು, ನಾಲ್ಕು ಕಾಲುಗಳು ಸಮ ಪ್ರಮಾಣದಲ್ಲಿ ಚಿತ್ರಿಸಿರುವುದು ಎದ್ದು ಕಾಣುತ್ತದೆ. ಈ ಚಿತ್ರವೂ ಕೂಡ ಕೆಂಪು ಬಣ್ಣದಿಂದ ಚಿತ್ರಿಸಲಾಗಿದೆ. ಪ್ರಸ್ತುತ ಪಿಕಿಲಿಹಾಲದ ವಾತವರಣವನ್ನು ನೋಡಿದ ಪಕ್ಷದಲ್ಲಿ ಇಲ್ಲಿ ಯಾವುದೇ ರೀತಿಯ ಆನೆಗಳು, ಮತ್ತು ಜಿಂಕೆಗಳ ಸುಳಿವು ಸಿಗುವುದಿಲ್ಲ. ಆದರೆ ನವಶಿಲಾಯುದಲ್ಲಿ ಈ ಸ್ಥಳದಲ್ಲಿ ಆನೆ, ಜಿಂಕೆಗಳ ಆಸ್ತಿತ್ವದಲ್ಲಿತ್ತು ಎಂಬುದನ್ನು ಬಂಡೆಯ ಮೇಲೆ ಉಳಿದು ಬಂದಿರುವ ಚಿತ್ರಗಳೇ ಸಾಕ್ಷಿಯಾಗಿವೆ.

**ಮರದ ಚಿತ್ರ:** ಬಂಡೆಯಲ್ಲಿ ಬಿಡಿಸಿರುವ ಚಿತ್ರಗಳಲ್ಲಿ ಮರದ ಚಿತ್ರವು ಇದೆ. ಇದು ಜಿಂಕೆಗಳ ಮಧ್ಯಬಾಗದಲ್ಲಿ ಕಂಡುಬರುತ್ತದೆ. ಈ ಮರದ ಚಿತ್ರದಿಂದ ತಿಳಿದು ಬರುವ ಪ್ರಮುಖ ಅಂಶವೆಂದರೆ ಈ ಪ್ರದೇಶವು ಆದಿ ಮಾನವನ ಕಾಲದಲ್ಲಿ ಒಂದು ಅರಣ್ಯಪ್ರದೇಶವಾಗಿತ್ತು.



**ಎತ್ತಿನ ಚಿತ್ರ:**



ಪಿಕಿಲಿಹಾಲದಲ್ಲಿ ಗೂಳಿ ಎತ್ತಿನ ಚಿತ್ರವು ಒಂದು ಬಂಡೆಯ ಮೇಲೆ ಗೆತ್ತಲಾಗಿದೆ. ಕಲ್ಲಾಸರೆಯಲ್ಲಿರುವ ಗೂಳಿಯ ಚಿತ್ರವು ಗಮನಾರ್ಹವಾಗಿದೆ. ಇದು 40 ಸೆಂ, ಮೀ ಉದ್ದವನ್ನು ಹೊಂದಿದೆ. 30ಸೆಂ.ಮೀ ಅಗಲವನ್ನು ಹೊಂದಿದೆ. ನೈಜ ಪ್ರಾಣಿಯ ಅಳತೆಯಲ್ಲಿದೆ. ಇದು ಬಿಳಿ ವರ್ಣದ ರೇಖಾಚಿತ್ರ ಇದಾಗಿದೆ.

ದಷ್ಟಪುಷ್ಟವಾಗಿರುವ ಮೈಕಟ್ಟು ಹೊಂದಿರುವ ಹಾಗೆ ಕಾಣುತ್ತದೆ. ಇದು ಎರಡು ಕೊಂಬುಗಳು, ನಾಲ್ಕು ಕಾಲುಗಳನ್ನು ಗುರುತಿಸಬಹುದು.ಸೂಕ್ಷ್ಮವಾಗಿ ಗಮನಿಸಿದರೆ ಇದು ಆಕಾರದಲ್ಲಿ ದೊಡ್ಡವಾಗಿ ಕಾಣುತ್ತದೆ. ಈ ಪ್ರಾಣಿಯನ್ನು ಸಾಕಿರಬಹುದು. ಇವುಗಳನ್ನು ವ್ಯವಸಾಯಕ್ಕಾಗಿ ಉಯೋಗಿಸಿರಬಹುದು. ಪಶುಗಳನ್ನು ಸಾಕುವುದು ನವಶಿಲಾಯುಗ ಮಾನವನ ಕೆಲಸವಾಗಿತ್ತು. ಜೊತೆಗೆ ಪಶುಪಾಲನೆಯ ಅವರ ವೃತ್ತಿಯಾಗಿತ್ತು. ಈ ಅಂಶವನ್ನು ಪರಿಗಣಿಸಿದಾಗ ಇಲ್ಲಿನ ಆದಿ ಮಾನವನು ಸಹ ಪಶುಪಾಲನೆಯನ್ನು ಮಾಡಿರಬಹುದು.

**ಬಯಲು ಬಂಡೆಯಲ್ಲಿ ಕುಟ್ಟಿದ ಚಿತ್ರಗಳು:** ಬಯಲು ಬಂಡೆಯಲ್ಲಿ ವೃತ್ತಾಕಾರವಾಗಿ ಗುಳಿಗಳನ್ನು ತೊಡಲಾಗಿದೆ.




ಗುಳಿಗಳನ್ನು ನೋಡಿದಾಗ 1ರಿಂದ 2 ಇಂಚು ಆಳವನ್ನು ಕುಟ್ಟಲಾಗಿದೆ. ವೃತ್ತವನ್ನು ನಾಲ್ಕು ಭಾಗಗಳಾಗಿ ವಿಭಾಗಿಸಲಾಗಿದೆ. ಸ್ಥಳೀಯರನ್ನು ಕೇಳಿದಾಗ ಇದು ಪಗಡೆಯಾಡಲು ಆದಿ ಮಾನವನು ಉಪಯೋಗಿಸಬಹುದು. ಇದರ ಬಗ್ಗೆ ಹೆಚ್ಚಿನ ಅಧ್ಯಯನಗಳು ಅದರೆ ಈ ವೃತ್ತವನ್ನು ಪಗಡೆಯಾಡಲು ಬಳಸುತ್ತಿದಾನೋ ಅಥವಾ ಕಾಲಾಗಣನೆಗಾಗಿ ಉಪಯೋಗಿಸಿದನೊ ಎಂಬುದರ ಸತ್ಯವನ್ನು ಹೊರ ತರುವ ಸಾಧ್ಯತೆ ಇದೆ ಎನ್ನಬಹುದು.

**ಮಡಿಕೆಯ ಚೂರು:** ಇಲ್ಲಿ ಎರಡು ರೀತಿಯ ಮಡಕೆಯ ಚೂರುಗಳು ಕಂಡುಬಂದಿದೆ. ಒಂದು ಕೆಂಪು ಮತ್ತು ಕಪ್ಪುಬಣ್ಣದ ಮಾದರಿ, ಎರಡನೇಯದು ಸುಟ್ಟ ಕಪ್ಪುಬಣ್ಣದ ಮಾದರಿಯದು. ಈ ಮಡಿಗೆಯ ಚೂರುಗಳ ಆಧಾರದ ಮೇಲೆ ನಾವು ಇಲ್ಲಿನ ಜನರಿಕೆ ಮಡಿಕೆ ಮಾಡುವ ಕಲೆಗಾರಿಕೆಯು ತಿಳಿದೆ ಎಂದು ಹೇಳಬಹುದು. ಮಡಕೆಗಳನ್ನು ದೈನಂದಿನ ಜೀವನ ಕ್ರಮದಲ್ಲಿ ಉಪಯೋಗಿಸಿಕೊಂಡಿತ್ತಾನೆ. ಈ ಮಡಕೆಗಳನ್ನು ನೀರಿನ ಸಂಗ್ರಹಣೆಗಾಗಿ, ಆಹಾರ ಪದಾರ್ಥಗಳನ್ನು ಬೇಯಿಸಲು,ಆಹಾರ ಧಾನ್ಯಗಳನ್ನು ಸಂಗ್ರಹಣೆಯನ್ನು ಮಾಡುವ ಸಲುವಾಗಿ ಉಪಯೋಗಿಸಲಾಗಿದೆ. ಇದು ಆತನ ಒಂದು ಕಸುಬುಗಾರಿಕೆ ಎಂಬುದಾಗಿ ಹೇಳಬಹುದು. ಈ ಕಾಲಘಟ್ಟದ ಮಾನವರು ಪರಿಸರ ಸ್ನೇಹಿಜೀವಿಯಾಗಿ ಬದುಕನ್ನು ನಿರ್ವಹಿಸುತ್ತಿದರು. ಬೇಸಿಗೆ ಸಮಯದಲ್ಲಿ ಪ್ರಸ್ತುತ ದಿನಗಳಲ್ಲಿ ನಗರ ಪ್ರದೇಶದ ಜನರು ಮಡಿಕೆಯ ನೀರನ್ನು ಉಪಯೋಗಿಸುತ್ತಿದ್ದಾರೆ. ಕಾರಣ ಆರೋಗ್ಯದ ಪರಿಕಲ್ಪನೆಯ ಹಿನ್ನಲೆಯ ದೃಷ್ಟಿಯಿಂದ ಎನ್ನಬಹುದು,ಆದರೆ ಈ ಕಲ್ಪನೆ ನಮ್ಮ ನವ ಶಿಲಾಯುಗದ ಕಾಲಘಟ್ಟದ ಮಾನವನು ಅಂದೇ ಅರಿದುಕೊಂಡಿವುದು ಆಶ್ಚರ್ಯ ಸಂಗತಿ ಎನ್ನಬಹುದು.

ಎಲ್ಲ ವರ್ಣ ಚಿತ್ರಗಳು ಅತ್ಯಂತ ಸೊಗಸಾಗಿ ಮೂಡಿವೆ. ಮಾನವನ ಮತ್ತು ಪ್ರಾಣಿಗಳ ಅಂಗಾಂಗಗಳು ಪ್ರಮಾಣಬದ್ದವಾಗಿವೆ. ಗೂಳಿ ಮಾನವನ ಚಿತ್ರಗಳು ಜೀವಂತೆ ಇರುವಂತೆ ಅತ್ಯಂತ ನೈಸರ್ಗಿಕವಾಗಿ ಮೂಡಿ ಬಂದಿದೆ. ಸಾವಿರರು ವರ್ಷಗಳು ಗತಿಸಿದರು. ವರ್ಣ ಚಿತ್ರಗಳ ಬಣ್ಣ ಇಂದಿಗೂ ಅಂದಿನಂತೆಯೇ ಇದೆ. ನಿಸರ್ಗದತ್ತ ವನಸ್ಪತಿ ಮತ್ತು ಖನಿಜಗಳನ್ನು ಉಪಯೋಗಿಸಿ, ಸ್ವಂತ ರಾಸಾಯನಿಕ ಬಣ್ಣಗಾರಿಕೆಯ ತಿಳಿವಳಿಕೆ ಇತ್ತು ಎಂಬುದನ್ನು ಈಚಿತ್ರಗಳು ತಿಳಿಸುತ್ತದೆ. ಪಿಕಿಲಿಹಾಲದಲ್ಲಿ ದೊರೆಯುವ ಇತಿಹಾಸ ಪೂರ್ವ ಮತ್ತು ಇತಿಹಾಸ ಕಾಲದ ಚಿತ್ರಗಳನ್ನು ಇರಿಸಿಕೊಂಡು ಹೆಚ್ಚಿನ ಅಧ್ಯಯನ ಮಾಡಲು ಸಾಕಷ್ಟು ಅವಕಾಶವನ್ನು ಈ ಗ್ರಾಮವು ಕಲ್ಪಿಸಿದೆ.

**ಆಕರ ಗ್ರಂಥಗಳು**


- ಸುಂದರ ಅ. 1984, ಕರ್ನಾಟಕ ಪ್ರಾಗಿತಿಹಾಸ ಕಾಲದ ಕಲೆ, ಬೆಂಗಳೂರು

- ಸುಂದರ ಅ. 1997 ಕರ್ನಾಟಕ ಚರಿತ್ರೆ, ಸಂಪುಟ 1, ಹಂಪಿ.

- ಪ್ರಾಟೀಲ್. ಬಿ.ಸಿ.1998 ಕೋಪ್ಪಳ ಜಿಲ್ಲೆಯ ಸಾಂಸ್ಕೃತಿಕ ಅಧ್ಯಯನ, ಕೊಪ್ಪಳ

- ಇರ್ವಿನ್ ನ್ಯೂಮೇಯರ್, 1983 ಪ್ರಿ ಹಿಸ್ಟಾರಿಕ್ ರಾಕ್ ಪೈಂಟಿಂಗ್, ದೆಹಲಿ

- ಕಲ್ಯಾಣ್ ಕುಮಾರ್ ಚಕ್ರವರ್ತಿ, ಇಂಡಿಯನ್ ರಾಕ್ ಆರ್ಟ್ ಎಂಡ್ ಇಟ್ಸ್ ಗ್ಲೋಬಲ್ ಕಾಂಟೆಕ್ಸ್ಟ್, ದೆಹಲಿ

- ನರಸಿಂಹನ್ ಅ.ಲ. 1998,ಬಿತ್ತಿಚಿತ್ರಗಳು, ಬೆಂಗಳೂರು.

- ಪಾಟೀಲ ಎಸ್.ಸಿ. 1993, ಕರ್ನಾಟಕದ ಜನಪದ ಚಿತ್ರಕಲೆ,ಗದಗ

- ಮೈಖೇಲ್ ಎಲ್,(ಸಂ) 1993, ರಾಕ್ ಆರ್ಟ್ ಇನ್ ದ ಓರ್ಲ್ಡ್, ದೆಹಲಿ

- ಯಶೋಧರ್ ಮಟಪಾಲ್, ಪಿ ಹಿಸ್ಟಾರಿಕ್ ರಾಕ್ ಪೈಂಟಿಂಗ್ಸ್ ಫ್ರಮ್ ಭೀಮ್‌ಬೆಟ್ಕ,ದೆಹಲಿ

- ಯಾಜದಾನಿ, 1952, ಹಿಸ್ಟರಿ ಆಫ್ ದ ಡೆಕ್ಕನ್, ಸಂಪುಟ 1, ಭಾಗ 8, ಲಂಡನ್

- ಸುಂದರ.ಅ.1987 ಪಾಗೈತಿಹಾಸಿಕ ಗವಿ ವರ್ಣ ಮತ್ತು ಬಂಡೆಚಿತ್ತಗಳು ಕರ್ನಾಟಕ.

- ಸುಂದರ.ಅ. 1990, ರಾರ್ಕ್ ಪೈಟಿಂಗ್ಸ್,ಸಮ್ ಆಸ್ಪೆಕ್ಟ್ಸ್,ಆರ್ಕಿಯಾಲಜಿ ಇನ್ ಕರ್ನಾಟಕ


**ವಕ್ತೃಗಳ ಮಾಹಿತಿ**

- ಯಂಕಣ್ಣ ಪೂಜಾರಿ. ವಯಸ್ಸು 50,ಪಿಕಲಿಹಾಲ ಗ್ರಾಮ, ಲಿಂಗಸುಗೂರು ತಾಲೂಕ್, ರಾಯಚೂರು ಜಿಲ್ಲೆ .

**ಯುವಜನತೆಯ ಸ್ಫೂರ್ತಿ ಸ್ವಾಮಿ ವಿವೇಕಾನಂದರು**

**Ramanand Sindhanur**

***"ಏಳಿ ಎದ್ದೇಳಿ ಎಚ್ಚರಗೊಳ್ಳಿರಿ ಗುರಿ ಮುಟ್ಟುವ ತನಕ ನಿಲ್ಲದಿರಿ"*** *ಯುವ ಜನತೆಯ ಮಾರ್ಗದರ್ಶಕ ದಾರಿ ದೀಪ ಎಂದರೆ ಅದು ಸ್ವಾಮಿ ವಿವೇಕಾನಂದರು, ಜನವರಿ 12 ಬಂದಾಗ ಅವರನ್ನು ಹೆಚ್ಚು ನೆನಪು ಮಾಡುವುದು ಏಕೆಂದರೆ ಅದು ವಿವೇಕಾನಂದರ ಜನ್ಮ ದಿನವಾಗಿದ್ದು ಆ ದಿನವನ್ನು ನಾವೆಲ್ಲರೂ ರಾಷ್ಟ್ರೀಯ "ಯುವ ದಿನ" ವೆಂದು ಆಚರಿಸುತ್ತೇವೆ. ನಾವು ಕಾಲೇಜು ದಿನಗಳಲ್ಲಿ ಅವರ ಬಗ್ಗೆ ಕೆಲವೊಂದು ಆದರ್ಶಗಳನ್ನು ಓದಿಕೊಂಡು ಅದರಂತೆ ಯುವ ಜನ ಸಮಾವೇಶಗಳನ್ನು ಆಚರಿಸದ್ದು, ಅದೇ ರೀತಿ ನಮ್ಮಲ್ಲಿ ಗ್ರಾಮಗಳಲ್ಲಿ ಯುವಕ ಸಂಘಗಳನ್ನು ರಚಿಸಿಕೊಂಡು ಅಲ್ಲಿ ಅವರ "ವಿಶ್ವ ತತ್ವವನ್ನು" ವಿಶಾಲ ದೃಷ್ಟಿಯ ಸಂಕೇತಗಳ ಬಗ್ಗೆ ಚರ್ಚಿಸಿದ್ದು ಈ ಸಂದರ್ಭಗಳಲ್ಲಿ ನೆನಪು ಮಾಡಿಕೊಳ್ಳೋಣವೆಂದು ಅವರ ಬಗ್ಗೆ ಒಂದು ಬರವಣಿಗೆಯನ್ನು ನಿಮ್ಮೆಲ್ಲರಿಗೆ ತಲುಪಿಸುತ್ತೇನೆ.*

*ಸ್ವಾಮಿ ವಿವೇಕಾನಂದರವರು ಭಾರತದ ಅತ್ಯಂತ ಪ್ರಸಿದ್ಧ ಮತ್ತು ಪ್ರಭಾವಶಾಲಿ ತತ್ವಜ್ಞಾನಿಗಳಲ್ಲಿ ಒಬ್ಬರು, ನಿರ್ಭಯತೆ, ಆಶಾವಾದ ಮತ್ತು ಸಾಮಾಜಿಕ ಸಮಸ್ಯೆಗಳ ಬಗೆಗಿನ ವಿಶಾಲ ದೃಷ್ಟಿಯ ಸಂಕೇತವಾಗಿ ಅವರು ಪರಿಗಣಿತರಾಗಿದ್ದಾರೆ. ಸ್ವಾಮಿ ವಿವೇಕಾನಂದರವರು ದೇಶವನ್ನು ಮುನ್ನೆಡಸಲು ಸಶಕ್ತವಾದ ಯುವ ಪಡೆಯನ್ನು ನಿರ್ಮಿಸುವುದೇ ನನ್ನ ಗುರಿ ಎಂದು ಹೇಳುತ್ತಾ ಬಂದಿರುತ್ತಾರೆ. ಸ್ವಾಮಿ ವಿವೇಕಾನಂದರವರು ಮಾನಸಿಕ, ದೈಹಿಕ ಆಧ್ಯಾತ್ಮಿಕ, ನೈತಿಕ, ಸಾಮಾಜಿಕವಾಗಿ ಎಂದೂ ಶಕ್ತಿ ಕಳೆದುಕೊಳ್ಳಬಾರದು ಎಂದು ಯುವಕರಿಗೆ ಕರೆ ನೀಡಿದ್ದರು. ಇಂದು ವಿವೇಕವಾಣಿಯ ಒಂದಿಷ್ಟು ಅಂಶ ನಮ್ಮ ಯುವ ಪೀಳಿಗೆ ತಲೆ ಒಳಗೆ ಹೊಕ್ಕರೆ, ಭಾರತೀಯ ಸಂಸ್ಕೃತಿ ಉಳಿಸಿ ಬೆಳೆಸಲು ಸಾಧ್ಯವಾಗುತ್ತದೆ. ನಮಗೆಲ್ಲ ತಿಳಿದಿರುವಂತೆ 1985ರ ನಂತರ ಭಾರತದಲ್ಲಿ ಸ್ವಾಮಿ ವಿವೇಕಾನಂದರವರ ಹುಟ್ಟು ಹಬ್ಬವನ್ನು ರಾಷ್ಟ್ರೀಯ ಯುವ ದಿನ ಎಂದು ಘೋಷಿಸಲಾಗಿದ್ದು, ಈಗಲೂ ಆಚರಣೆಯಲ್ಲಿದೆ ಎಂಬುದಷ್ಟೇ ಸಂತೋಷ. ಇಂದು ದೇಶದಾದ್ಯಂತ ಆಚರಣೆ ಜಾರಿಯಲ್ಲಿದ್ದು, ಶಾಲ, ಕಾಲೇಜು ಅಲ್ಲಲ್ಲಿ ಮೆರವಣಿಗೆ, ಪ್ರಬಂಧ ಸ್ಪರ್ಧೆ, ಭಾಷಣ, ಚರ್ಚಾಕೂಟದಲ್ಲಿ ಪಾಲ್ಗೊಂಡು ವಿವೇಕಾನಂದರ ಸಂದೇಶ ಸಾರುವಲ್ಲಿ  ತೊಡಗಿದ್ದಾರೆ. ಸ್ವಾಮಿ ವಿವೇಕಾನಂದರು ತಮ್ಮ ಶಕ್ತಿಯುತ ವ್ಯಕ್ತಿತ್ವದ ಮೂಲಕ, ಅಪೂರ್ವ ವಾಗ್ಮೀಯತೆ ಹಾಗೂ ಪ್ರಚೋದನಾತ್ಮಕ ಬರವಣಿಗೆ ಮೂಲಕ ನಮ್ಮ ರಾಷ್ಟ್ರ ಚೇತನವನ್ನು ಜಾಗೃತಗೊಳಿಸಿ, ಯುವಕರಲ್ಲಿ ನವೋತ್ಸಾಹವನ್ನು ಕೆರಳಿಸಿ, ಅವರಲ್ಲಿ ನಮ್ಮ ಸಂಸ್ಕೃತಿಯ ಬಗ್ಗೆ ಹೆಮ್ಮೆಯನ್ನು ಕುದುರಿಸಿ ಸ್ವತಂತ್ರ ನವ ಭಾರತ ನಿರ್ಮಾಣಕ್ಕೆ ಬುನಾದಿಯನ್ನು ಹಾಕಿದವರು.*

*ಸ್ವಾಮಿ ವಿವೇಕಾನಂದರವರ ಸ್ಫೂರ್ತಿದತ್ತವಾದ ನುಡಿಗಳನ್ನು ಕಂಡಾಗ ಅವರೆಷ್ಟು ಭರವಸೆಯನ್ನು ನಮ್ಮ ದೇಶದ ಯುವ ಜನಾಂಗದ ಮೇಲೆ ಹೊಂದಿದ್ದರು ಎಂಬುದು ಅರಿವಾಗುತ್ತದೆ.*

*ಅವರು ಏನು ಹೇಳುತ್ತಾರೆಂದರೆ ನನ್ನ ಭರವಸೆಯೆಲ್ಲ ಯುವ ಪೀಳಿಗೆಯ ಮೇಲೆ ನಿಂತಿದೆ. ಯುವಜನರನ್ನು ಒಂದೂ ಗೂಡಿಸಿ ಸಮಘಬದ್ಧರಾಗಿ ದುಡಿಯುವಂತೆ ಮಾಡಲು ನಾನು ಜನ್ಮ ತಾಳಿದ್ದೇನೆ. ಅವರು ಕೆಚ್ಚೆದೆಯ ಸಿಂಹಗಳಂತೆ ಇಡೀ ಯೋಜನೆಯನ್ನು ಕಾರ್ಯಗತಗೊಳಿಸುವರು. ಪ್ರತಿಯೊಂದು*

*ನಗರದಿಂದಲೂ ನೂರಾರು ಯುವಕರು ನನ್ನೊಡನೆ ಬರಲು ಸಿದ್ದರಿದ್ದಾರೆ. ಇಂಥವರನ್ನು ತಡೆಯಲ ಸಾಧ್ಯವಾದ ಅಲೆಗಳಂತೆ ಭಾರತದ ಮೇಲೆ ಹರಿಯಿಸಿ ಅತ್ಯಂತ ದೀನ ಹೀನ ಸ್ಥಿತಿಯಲ್ಲಿರುವ ಜನರ ಬಾಗಿಲುಗಳಿಗೆ ಭರವಸೆ ಸಾಂತ್ವನಗಳನ್ನು, ನೀತಿ ಧರ್ಮ, ವಿದ್ಯೆ ಇವುಗಳನ್ನು ತಲುಪಿಸುವಂತೆ ಮಾಡಬೇಕು. ಇದನ್ನು ಮಾಡಿಯೇ ಮಾಡುತ್ತೇನೆ ಎನ್ನುತ್ತಾ ದೃಢ ಸಂಕಲ್ಪದೊಂದಿಗೆ ಮುನ್ನಡೆದವರು. ಆದರೆ ಅವರ ಸ್ಫೂರ್ತಿದತ್ತವಾದ ನುಡಿಗಳನ್ನು ನೋಡಿದರೆ ಅವರೆಷ್ಟು ಭರವಸೆಯನ್ನು ನಮ್ಮ ದೇಶದ ಜನಾಂಗದ ಮೇಲೆ ಹೊಂದಿದ್ದರು ಎಂಬುದು ಅರಿವಾಗುತ್ತದೆ. ಈ ಪಾಂಚಜನ್ಯ ಸದೃಶ ವಾಣಿಯು ಮೊಳಗಿ ಸುಮಾರು ನೂರಾ ಈವತ್ತು ವರ್ಷಗಳೇ ಕಳೆದಿವೆ, ಆದರೆ ಈ ಭರವಸೆಯ ನುಡಿಗಳನ್ನು ಕಾರ್ಯರೂಪಕ್ಕೆ ತರುವುದರಲ್ಲಿ ಅದೆಷ್ಟರ ಮಟ್ಟಿಗೆ ನಾವು ಸಫಲರಾಗಿದ್ದೇವೆ ಎಂಬುದು ಚಿಂತನೀಯ ಸಂಗತಿ.*

*ಸ್ವಾಮಿ ವಿವೇಕಾನಂದರವರು ಕೆಲವೊಂದು ಕಡೆ ಶಿಕ್ಷಣದ ಬಗ್ಗೆಯೂ ಬೆಳಕು ಚೆಲ್ಲಿದ್ದಾರೆ, ಇದೆಲ್ಲವನ್ನು ಗಮನಿಸಿದಾಗ ನಾವಿಂದು ಯುವ ಜನಾಂಗಕ್ಕೆ ನೀಡುತ್ತಿರುವ ಶಿಕ್ಷಣ ನಿಜವಾದ ಅರ್ಥದಲ್ಲಿ ಶಿಕ್ಷಣವೇ ಅಲ್ಲ ನಿಜವಾದ ವಿಧ್ಯಾಭ್ಯಾಸವೇ, ಹೊಟ್ಟೆಪಾಡಿಗೆ ಸೀಮಿತವಾಗಿರುವ ವಿಧ್ಯಾಭ್ಯಾಸ ಎನ್ನಬಹುದು. ಸ್ವಾಮಿ ವಿವೇಕಾನಂದರವರ ದೃಷ್ಟಿಯಲ್ಲಿ ನಿಜವಾದ ವಿದ್ಯೆ ಒಬ್ಬನನ್ನು ಸ್ವಾವಲಂಬಿಯಾಗಿ ಮಾಡಬೇಕು. ಅವರ ಹೇಳಿಕೆಯಂತೆ ಶಾಲೆ ಕಾಲೇಜುಗಳಲ್ಲಿ ದೊರೆಯುತ್ತಿರುವ ವಿದ್ಯೆಯಿಂದ ಏನೂ ಸಾಧಿಸಲು ಸಾಧ್ಯವಾಗದೆ, ಕೇವಲ ಯಂತ್ರದಂತೆ ಕೆಲಸ ಮಾಡುತ್ತಾ ಶುದ್ಧ ಸೊಮಾರಿಗಳಾಗುವ ಸ್ಥಿತಿಗೆ ತಲುಪುವಿರಿ ಎಂತಹ ವಾಕ್ಯಗಳಿವು. ಸ್ವಾಮಿ ವಿವೇಕಾನಂದರವರು ನೂರಾ ಇಪ್ಪತ್ತೈದು ವರುಷಗಲ ಹಿಂದೆಯೇ ಇಂದಿನ ಸ್ಥಿತಿಯನ್ನು ಊಹಿಸಿರುವಂತಿದೆ. ಇಂದು ಕಾಣುತ್ತಿರುವ ಯುವ ಜನಾಂಗದ ಒಂದು ಸ್ಪಷ್ಟ ಚಿತ್ರಣ ಸ್ವಾಮಿ ವಿವೇಕಾನಂದರು ನೀಡಿದ್ದಾರೆ. ಈ ಯುವಕರಲ್ಲಿ ದೇಶಾಭಿಮಾನ, ಸ್ವಾಭಿಮಾನ, ಪರೋಪಕಾರ, ಸಂಸ್ಕೃತಿ, ಜೀವನ ಮೌಲ್ಯಗಳ ಪರಿಚಯವೇ ಇಲ್ಲ ಎಂದೆನಿಸುತ್ತದೆ. ಈ ಅಂಶಕ್ಕೆ ಪೂರಕವೆಂಬಂತೆ ದಿನ ನಿತ್ಯ ನಾವು ಕಾಣುವ, ಅನುಭವಿಸುವ ಘಟನೆಗಳೇ ಸಾಕ್ಷಿ.*

*ಸ್ವಾಮಿ ವಿವೇಕಾನಂದರ ಪ್ರಕಾರ 'ನಿಜವಾದ ವಿದ್ಯೆ ಎಂದರೆ ಸರ್ವರಲ್ಲಿಯೂ ಅಡಗಿರುವ ಅದಮ್ಯ ಚೈತನ್ಯವನ್ನು ಅರಿತು ಇಡೀ ವಿಶ್ವವೇ ನಮ್ಮದು' ಎಂಬ ಉದಾತ ಭಾವನೆಯಿಂದ ' ವಿಶ್ವಮಾನವ ತತ್ವ' ವನ್ನು ಅಳವಡಿಸಿಕೊಂಡು ಬಾಳುವುದಾಗಿದೆ. ಈ ತೆರನಾದ ಶಿಕ್ಷಣವನ್ನು ನಮ್ಮ ಯುವಜನಾಂಗ ಪಡೆಯುತ್ತಿದೆಯೇ ? ಯೋಚಿಸಿ ನೋಡಿ. ಸ್ವಾಮಿ ವಿವೇಕಾನಂದರವರು ಮತ್ತೊಂದೆಡೆ ನುಡಿದಂತೆ 'ನಾವು ಸಿಂಹಸದೃಶ್ಯರನ್ನಾಗಿಸಲು' ಪ್ರಯತ್ನಿಸಿ ವಿಫಲರಾಗಿ ನರಿಯನ್ನಾಗಿಸುತ್ತಿದ್ದೆವೆ, ನಿಜ ಈ ಮಾತು ಸತ್ಯ, ಆದುದರಿಂದ ಯುವ ಜನಾಂಗ ಮೊದಲು ಸರಿಯಾದ ಶಿಕ್ಷಣವನ್ನು ಪಡೆಯಬೇಕು, ವಿದ್ಯಾಭ್ಯಾಸದ ಬಗ್ಗೆ* ***ಸ್ವಾಮಿ ವಿವೇಕಾನಂದರವರ*** *ಈ ನುಡಿಗಳು ಅತ್ಯಂತ ಸ್ಪಷ್ಟವಾಗಿದೆ. ಚಾರಿತ್ರ್ಯ ಶುದ್ಧಿಗೆ ಸಹಾಯ ಮಾಡದ, ಪರೋಪಕಾರ ಬುದ್ಧಿಯನ್ನು ಹುಟ್ಟಿಸದ, ಸಿಂಹಸದೃಶ್ಯವಾದ ಧೈರ್ಯವನ್ನು ನೀಡದ ವಿಧ್ಯಾಭ್ಯಾಸದಿಂದ ಪ್ರಯೋಜನವೇನು? ನಾವಿಂದು ಕಾಣುತ್ತಿರುವ ಯುವ ಜನಾಂಗಕ್ಕೆ ದೇಶ ಭಕ್ತಿ, ಮಾತೃ ಭೂಮಿ ಎಂಬಂತಹ ವಿಚಾರದ ತಿಳಿವೇ ಇಲ್ಲದಂತಾಗಿದೆ. ಸ್ವಾಮಿ ವಿವೇಕಾನಂದರು ಎಂದರೆ ಭಾರತ, ಭಾರತ ಎಂದರೆ* ***ಸ್ವಾಮಿ ವಿವೇಕಾನಂದರವರು.***

*ಯುವ ಜನಾಂಗ ತಮ್ಮ ದೇಶಪ್ರೇಮ ದೇಶಭಕ್ತಿಯನ್ನು ವೃದ್ಧಿ ಪಡಿಸಿಕೊಂಡು ದೇಶದ ಅಭಿವೃದ್ಧಿಗೆ ಕಂಕಣಬದ್ಧರಾಗಬೇಕಾದ ಪವಿತ್ರ ಸಂದರ್ಭವೇ ಸ್ವಾಮಿ ವಿವೇಕಾನಂದರವರ ಜನ್ಮದಿನೋತ್ಸವ. ಸ್ವಾಮಿ*

*ವಿವೇಕಾನಂದರು ಒಟ್ಟಿನಲ್ಲಿ ಯುವ ಜನತೆಗೆ ತಿಳಿಸಿದ ಸಿಂಹವಾಣಿ ಹೀಗಿದೆ; 'ನಮಗೆ ಬೇಕಾಗಿರುವುದು ಎಲ್ಲವನ್ನೂ ತ್ಯಾಗ ಮಾಡಿ ದೇಶಕ್ಕಾಗಿ ತಮ್ಮ ಜೀವನವನ್ನೇ ಅರ್ಪಿಸುವಂತಹ ಕೆಲವು ಮಂದಿ ಯುವಕರು'... ಎಂತಹ ಭರವಸೆಯ ನುಡಿಗಳಿವು. ಆದರೆ ದುರದೃಷ್ಟವಶಾತ್ ಈ ತೆರನಾದ ಯುವಶಕ್ತಿಯನ್ನು ನಾವು ಕಾಣುವುದು ವಿರಳ. ಸ್ವಾಮಿ ವಿವೇಕಾನಂದರು ದೇಶದ ಯುವ ಜನತೆಯ ಮೇಲೆ ಅಪಾರ ವಿಶ್ವಾಸವಿಟ್ಟಿದ್ದರು. ಆದರೆ ಆ ವಿಶ್ವಾಸವೆಲ್ಲಾ ಹುಸಿಯಾದಂತಿದೆ.* ***ಬನ್ನಿ! ಭಾರತೀಯ ಯುವ ಜನತೆ,*** *ಟೊಂಕಕಟ್ಟಿ ನವ ಭಾರತದ ನಿರ್ಮಾಣದ ಹಾದಿಯಲ್ಲಿ ಸಾಗೋಣ, ಈ ದೇಶವೇ ನಮ್ಮ ದೈವವಾಗಿರಲಿ. ಈ ದೇಶಕ್ಕೆ ನಾವು ಏನು ಬೇಕಾದರೂ ತ್ಯಜಿಸೋಣ! ಭಾರತಾಂಬೆಯನ್ನು ಸದೃಢಗೊಳಿಸೋಣ, ಇದೇ ನಮ್ಮ ಉದ್ದೇಶವಾಗಿರಲಿ, ದೇಶವಿರುವುದು ಯುವಕರ ಶಕ್ತಿಯಿಂದ ಎಂಬುದನ್ನು ಮರೆಯದಿರಿ. ಈ ಉದ್ದೇಶ ಸದುದ್ದೇಶವಾಗಿರಲಿ.*

## ಜಗ ಬೆಳಗುವ ಮಗು

**ಸುಪ್ರಿತ ಸುಬ್ರಮಣ್ಯ Raichur**

ಜಗ ಬೆಳಗೋ ಮಗು ನೀನು,
ನಿನ್ನ ಪುಟ್ಟ ಕೈ ಹಿಡಿದು ನಡೆಸುವೆ ನಾನು!!
ಮನಬೆಳಗೋ ದೀಪ ನೀನು,
ನಿನ್ನ ಪಾದ ಸೋಕದೆ ಭೂಮಿಗೆ ಬೆಳಕಾಗದಿನ್ನು!!

ನೀ ಅತ್ತರೆ ದಾರೆಯೆರೆಯುವೆ ನನ್ನೆಲ್ಲ ಅಕ್ಕರೆ,
ನೀ ನಕ್ಕರೆ ನಮ್ಮಪಾಲಿಗದೆ ಸಕ್ಕರೆ!!
ನಾ ಸೋಲುವೆ ನಿನ್ನಯ ಖುಷಿಗೆ, ಆ ಕಿರುನಗೆಗೆ,
ನಿನ್ನ ಕಿರುದನಿಯೇ ಮುನ್ನುಡಿ, ನಲ್ಮೆಯ ನಾಳೆಗೆ!!

ಹುಣ್ಣಿಮೆ ಚಂದ್ರನ ರೂಪವೇ ನೀನು,
ನೀ ನಕ್ಕರೆ ಅಲೆಗಳಂತೆ ಕುಣಿದಾಡುವೆ ನಾನು!!
ತಾರೆಗಳು ಇಣುಕುತಿವೆ ಪ್ರತಿರಾತ್ರಿ,
ಕೇಳಲು ನಿನ್ನಯ ತೊದಲು ನುಡಿಯ ಸಂಗತಿ!!

ನೀನೆ ದರೆಯ ಪ್ರಕೃತಿ, ಈ ನಾಡಿನ ಸಂಸ್ಕೃತಿ.
ನೀನೇ ಜಗವು, ನೀನೇ ಯುಗವು,
ಸಾವಿರ ಸುಂದರ ತಾಣಕೆ ಸಮವು ನಿನ್ನಯ ನಗುವಾ ಮೊಗವು!!

# MY INDIA

Sushma G N Raichur

ಭಾರತ ಒಂದು ದೊಡ್ಡ Nation

ಐದು ವರ್ಷಗಳಿಗೊಮ್ಮೆ ನಡೆಯುತ್ತಿದೆ Election

ಮಾಡುತ್ತಿದ್ದೇವೆ ಕಳ್ಳರ Selection

ಇದರಿಂದ ದೇಶದ ತುಂಬ Pollution

ಇಂದು ಜನರಿಗಿಲ್ಲ Education

ಆದ್ದರಿಂದ ಬೆಳೆಯುತ್ತಿದೆ Population

ಬಡವರಿಗೆ ಸಿಗುತ್ತಿಲ್ಲ ಒಂದೊತ್ತಿನ Ration

ಆದರೂ ಇಲ್ಲಿ ನಡೆಯುತ್ತಿದೆ ದಿನಕ್ಕೊಂದು Function

ಮಾಧ್ಯಮಗಳು ಮಾಡುತ್ತಿವೆ Confusion

ಇದರಿಂದ ಸಿಗುತ್ತಿಲ್ಲ ಸರಿಯಾದ Direction

ಕೊನೆಗಾಣಿಸಬೇಕಾಗಿದೆ ಈ Generation

ಅದಕ್ಕಾಗಿ ಹುಡುಕಬೇಕಾಗಿದೆ Solution

ಆಗಬೇಕಾಗಿದೆ Revolution

ಇದರಿಂದಾಗುವುದು ಸುಂದರ Nation

**ಹೊಸ ಆಶಯದೊಂದಿಗೆ ನೂತನ ವರ್ಷದ ಶುಭ ಆರಂಭ,,,,**

**Aishwarya Raichur**

ಎಲ್ಲರಿಗೂ ಹೊಸ ವರ್ಷದ ಶುಭಾಶಯ ಕೋರುತಾ,,ನನ್ನ ಈ ಲೇಖನ ಬರೆಯಲು ಪ್ರಭಾವಿತ ವಾದ ಎರಡು ಸಂದರ್ಭ ವನ್ನು ಇಲ್ಲಿ ಪ್ರಸ್ತುತ ಪಡಿಸಲು ಇಚ್ಛಿಸುತ್ತೇನೆ .

ದೇವಾಲಯ : ಸುಮಾರು 600 ಕಿಲೋ ಮೀಟರ್ ದೂರದಿಂದ ಬಂದ ನಮಗೆ ರಾಯಚೂರು ಅಪರಿಚಿತ.ಹೊಸ ಜಾಗ, ಹೊಸ ಜನ ಹಾಗೂ ಬೇರೆಯ ಪರಿಸರಕ್ಕೆ ಹೊಂದಿಕೊಳ್ಳು ಹೇಗೆ ????? ಎಂಬ ಪ್ರಶ್ನೆಯನ್ನು ಇಟ್ಟುಕೊಂಡು ಕೆಲಸ ಶುರು ಮಾಡಿದೆವು,,,,,,ಮೊದಲು ಶಾಲೆಗಳಿಗೆ ಭೇಟಿ ನೀಡಿದ್ದೇವೆ,ಅಲ್ಲಿಂದ ಶಿಕ್ಷಕರು ಶಿಕ್ಷಕಿಯರ ಪರಿಚಯ ಆಯಿತು ಹಾಗೆಯೇ ಕೆಲವೊಂದು ಸಂದರ್ಭದಲ್ಲಿ



ಮಕ್ಕಳೊಂದಿಗೆ ಸಮಯ ಕಳೆಯಲು ಅವಕಾಶ ಸಿಕ್ಕಿತು.ಇದೆಲ್ಲ ಒಂದು ಬದಿಗೆ ಇಟ್ಟು ನಿಮಗೆ ಪೀಠಿಕೆ ಹಾಕಿ ಹೇಳಿದ್ದು ಆದರೆ,,,, ಮುಂದಿನದು ವಿಷಯ ನಿರೂಪಣೆ :

ಕೆಲವೊಂದು ಸಂದರ್ಭಗಳು ನಮ್ಮ ಜೀವನದಲ್ಲಿ ವಿಶಿಷ್ಟವಾದ ಮಹತ್ವ ಪಡೆದುಕೊಂಡಿರುತವೇ ••••• ನಮ್ಮ ಮೊದಲ ವೃತ್ತಿ ಶುರು ಮಾಡಿದ ದಿನ ಕೂಡ ಅವಿಸ್ಮರಣೀಯ. **ನೀವು ಮಂತ್ರಾಲಯ ಹೋಗಿ ಬನ್ನಿ ಬಹಳ ಚಲು ಇರುತ್ತೆ ಎಂದು ಅಕ್ಟೋಬರ್ 17th ನಮ್ಮ ಮೊದಲ ಕೆಲಸದ ದಿನ ಅಜಿಮ್ ಪ್ರೇಮ್‌ಜಿ ಫೌಂಡೇಷನ್ ನ ಜಿಲ್ಲಾ ಸಂಯೋಜಕ ಆದ ಅಡ್ಡಿವೇಪ್ಪರವರು** ಹೇಳಿದ ಮಾತು ಕಿವಿಯಲ್ಲಿ ಗುನುಗುತ್ತಿತ್ತು. ನಾವು ಒಂದು ದಿನ ಪ್ಲಾನ್ ಮಾಡಿ ನಾಳೆ ( ಡಿಸೆಂಬರ್ 18th ) ಬೆಳಿಗ್ಗೆ 9 ಗಂಟೆಗೆ ಹೋಗೋಣ ಅಂತ ಹೇಳಿ ರಾತ್ರಿ ನಿದ್ದೆ ಮಾಡಿ ಮುಂಜಾನೆ ಎದ್ದು ಹೋಗಿದ್ದು ಮಾತ್ರ 11 ಕ್ಕೆ ಬೆಳಿಗ್ಗೆ ಹೋಗೋಣ ಅಂತ ಅಂದುಕೊಂಡಿದ್ದು ಆದರೆ ಮಂತ್ರಾಲಯ ತಲುಪಿದ್ದು ಮಧ್ಯಾಹ್ನ ಆಗಿತ್ತು. ಕಾರಣ ಇಷ್ಟೆ ಅ ದಿನ ನಾವೆಲ್ಲರೂ ಸಾಂಪ್ರದಾಯ ಉಡುಗೆ [ ಸೀರೆ ] ತೊಟ್ಟು ನಮ್ಮ ಸಿಂಗಾರ ಮುಗಿಯುವುದು ತಡ ಅದರಿಂದ ನಮಗೆ ಸಮಯ ಪಾಲನೆ ಮಾಡಲು ಆಗಲಿಲ್ಲ . ಹೊರಟಾಗ ಸೂರ್ಯನ ತಾಪ,ಬಿಸಿಲು ಆದರೆ ದೇವಾಲಯದ ಒಳಗೆ ಹೋದಾಗ ತಂಪು ಗಾಳಿ,ಅ ನಿಶ್ಯಬ್ದಕ್ಕೆ ನಮ್ಮ ಮನ ಸೋತಿತು. ರಾಯರ ದರ್ಶನ ಮುಗಿಸಿ ಹೊರಾಂಗಣದಲ್ಲಿ ಫೋಟೋ ಕ್ಲಿಕ್ಕಿಸಿಸುತ್ತಿದಾಗಾ ,,,,,..” **ಟೀಚರ್, ನಮ್ಮ ಟೀಚರ್**, “ ಎಂದು ಮಕ್ಕಳ ಗುಂಪೊಂದು ನನ್ನನ್ನು ಸುತ್ತುವರಿ ದರು --- ಮಕ್ಕಳು ಶಾಲೆಯ ನೀಲಿ ಬಣ್ಣದ ಸಮವಸ್ತ್ರ ಧರಿಸಿದ್ದರು. ಅಂದು ಅ ದೃಶ್ಯ ನನ್ನ

ಕಣ್ಣಿಗೆ ಸ್ವಚ್ಛ ತಿಳಿ ನೀಲಿ ಆಕಾಶ ಪ್ರೀತಿಯಿಂದ ಅಪ್ಪಗೆ ನೀಡಲು ಇಳೆ ಅನ್ನು ಸುತ್ತುವರೆಯಲು ಬರುವಂತೆ- ಮಕ್ಕಳು ನನ್ನನ್ನು ಆವರಿಸಿದರು. ಮನುಷ್ಯನಿಗೆ ಮರೆವಿನ ಕಾಯಿಲೆ ಇಂದ ಅನಾಹುತಗಳು ಆಗಿವೆ ಜೊತೆಗೆ ಉಪಯೋಗ ಕೂಡ ಆಗಿರಬಹುದು ( ತಮಾಷೆಯಾಗಿ ಹೇಳಿದ್ದು ) ನಂಗಂತೂ ಅನಾಹುತ ಆಗಿಲ್ಲ ಆದರೆ ಯಾವುದು ನೆನಪಿನಲ್ಲಿ ಇರುವುದಿಲ್ಲ ಅಷ್ಟೇ ಅಷ್ಟೇ. ಈ ಪರಿಸ್ಥಿತಿಯಲ್ಲಿ ಆಗಿದ್ದು ಅದೇ ಕರ್ನಾಟಕ ಬಿಟ್ಟು ಪಕ್ಕದಲ್ಲಿರುವ ಆಂಧ್ರ ಪ್ರದೇಶದಲ್ಲಿ ಇದ್ದೀವಿ ಯಾರು ಗೊತ್ತಿಲ್ಲ ನಂಗೆ ಮಕ್ಕಳು ಯಾಕೆ ನನ್ನ ಹತ್ತಿರ ಬಂದಿದ್ದಾರೆ ಅಂತ ಅರ್ಥ ಆಗುತ್ತಿಲ್ಲ?? ಅವರಲ್ಲಿ ಒಂದು ಹುಡುಗಿ **ಟೀಚರ್ ಮತ್ತೆ ನಮ್ಮ ಶಾಲೆಗೆ ಬರುತ್ತೀರಿ ಅಂತ ಹೇಳಿ ಬಂದಿಲ್ಲ ನೀವು ಯಾಕೆ ??? ಮತ್ತೊಬ್ಬ ಹುಡುಗ ಸ್ವಲ್ಪ ದೂರದಲ್ಲಿ ಟೀಚರ್ ಟೀಚರ್ ವಿನಯ್ ಈಗಲೂ ಕವರ್ ತಿನುತಾನಾ, ನೀವು ಬಂದಾಗ ಹೇಳು ನನಗೆ ಅಂತ ಹೇಳಿದ್ರಲ್ಲ ಆದ್ರೆ ನೀವು ಯಾಕೆ ಬಂದಿಲ್ಲ????? ಮತ್ತೊಂದು ಯಾರು ಅಂತ ಗೊತ್ತಾಗಲಿಲ್ಲ ಆದ್ರೆ ಕೇಳುತ್ತಿತ್ತು ಮತ್ತೆ ಯಾವಾಗ ನೀವು ನಮ್ಮ ಶಾಲೆಗೆ ಬರತೀರಿ ?????** ಯಾವುದೋ ಕತ್ತಲ ಮೂಲೆಯಲ್ಲಿ ಮಿಂಚು ಹುಳು ಬಂದಂತೆ ಬೆಳಕು ಕಂಡಂತೆ ನಂಗೆ ಸ್ವಲ್ಪ ನೆನಪು ಬಂತು . ಮಕ್ಕಳೇ ನೀವು ಯಾವ ಸ್ಕೂಲು ಹೇಳಿ ಅಂದಾಗ ಟೀಚರ್ ಕಲಮಲ ಅಂತ ಹೇಳಿದರು.

[ **< Flashback >**



ನಾನು ಒಂದು ದಿನ ಆ ಶಾಲೆಗೆ ಭೇಟಿ ಮಾಡಿದೆ,ಸುಮಾರು 2.30 ಇಂದ 3 ಗಂಟೆ ಸಮಯ ಅಲ್ಲಿ ಇದ್ದೆ. ಆ ದಿನ ಲೋಹಿತ ಅವರು ಒಂದು ಕ್ಲಾಸ್ ತೆಗೆದುಕೊಂಡಿದರು ಅದನು ವೀಕ್ಷಣೆ ಮಾಡುತ್ತಿದ್ದೆ ಜೊತೆಗೆ ಮಕ್ಕಳೊಂದಿಗೆ ಮಾತಾಡಿದೆ, ಇದೆಲ್ಲ ಆಗಿದ್ದು ಒಂದು ತಿಂಗಳ ಹಿಂದೆ. ]ಮಕ್ಕಳಿಗೆ ನಾನು ಯಾಕೆ ಅವರ ಶಾಲೆಗೆ ಬಂದಿದೆ ಗೊತ್ತಿಲ್ಲ, ನಾನು ಅವರಿಗೆ ತರಗತಿ ತೆಗೆದುಕೊಂಡಿಲ್ಲ, ಪಾಠ ಮಾಡಿಲ್ಲ.ನಾನು ಅವರ ಜೊತೆ **ಕಳೆದ ಸಮಯ ತುಂಬಾ ಕಡಿಮೆ – ಆದರೆ ಆ ಮಕ್ಕಳು ಅಷ್ಟು ಜನರ ಮಧ್ಯೆ ನನ್ನನ್ನು ಗುರುತಿಸಿ ನೀಡಿದ ಪ್ರೀತಿ ಅಪಾರ.** ಮುಗ್ಧ ಮನಸ್ಸಿನ ಮಕ್ಕಳ ಪ್ರೀತಿ ಕಂಡು ನಾನು ಭಾವುಕಳದೆ.

**ಆರಂಭ ::**

ಈ ವರ್ಷ ವಾರದ ಮೊದಲ ದಿನವಾದ ಭಾನುವಾರದಿಂದ ಶುರುವಾಗಿದೆ .ಮಕ್ಕಳಿಗೆ ಹೊಸ ವರ್ಷ ಆಚರಣೆಯ ಸಂಭ್ರಮ,ಆದರೆ ಈ ಸಡಗರ ಒಂದು ದಿನ ಮುಂದೆ ಹೋಯಿತು. ನನ್ನ ಅಸೋಸಿಯೇಟ ಪಯಣದಲಿ ತೆಗೆದುಕೊಂಡಿರುವ ಶಾಲೆ " ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಚಿಕ್ಕಸೂಗೂರು ". ಇಲ್ಲಿ ಪ್ರತಿಯೊಂದು ತರಗತಿಯಲ್ಲಿ ಹೊಸ ವರ್ಷ ಆಚರಣೆ ಮಾಡುತ್ತಾರೆ. ನಾನು ಒಂದು ನಲಿ ಕಲಿ ತರಗತಿ ತೆಗೆದುಕೊಂಡು ಅದಕ್ಕೆ ಹೆಚ್ಚಿನ ಗಮನ ನೀಡಿದೆ. ಅ ತರಗತಿ ಸ್ವಚ್ಛ ಇರಲಿಲ್ಲ,ಕಿಟಕಿಯ ಬಾಗಿಲುಗಳು ಇರಲಿಲ್ಲ ಹಾಗೂ ಬಾಗಿಲಿಗೆ ಚಿಲಕ ಇರಲಿಲ್ಲ ಒಟ್ಟಾರೆಯಾಗಿ ಕೋಣೆಯ ಪರಿಸ್ಥಿತಿ ಹದಗೆಟ್ಟಿತು. ನಾನು ಅ ತರಗತಿಯ ಶಿಕ್ಷಕಿಯ ಕೇಳಿ ಕೋಣೆಯ ಸ್ವಚ್ಛತೆ ಮಾಡುವ ಕೆಲಸಕ್ಕೆ ಶುರು ಮಾಡಿದೆವು. ಮಕ್ಕಳು ನಾನು ಸೇರಿ ದೂಳು ತೆಗೆದು ಕಸ ಹೊಡೆದು ನೀರು ಹಾಕಿ ನೆಲ ಒರೆಸು ಸ್ವಚ್ಛ ಮಾಡಿದೆವು. ಚಪ್ಪರ ಕಟ್ಟಿ ಮಕ್ಕಳು ಬರೆದ ಲೇಖನಗಳು, ಬಣ್ಣ ಬಣ್ಣದ ಚಿತ್ರಗಳು, ಮಕ್ಕಳು ಮಾಡಿದ ಕಲಾ ಕೃತಿಗಳು ಎಲ್ಲವನ್ನೂ ಅದರಲ್ಲಿ ಕಟ್ಟಿದೆ ಅಂತೂ ನಲಿ – ಕಲಿ ಕೋಣೆಗೆ ಕಳೆ ನೀಡಿದ್ದೇವೆ .

ಸೋಮವಾರ ಮಕ್ಕಳು ಕಲರ್ ಫುಲ್ ಆಗಿ ರಡಿ ಆಗಿ ನಾವು ಬರುವ ಮೊದಲೇ ಶಾಲೆಗೆ ಬಂದು ತಮ್ಮ ತಮ್ಮ ತರಗತಿ ಸಿದ್ಧ ಮಾಡುತ್ತಿದ್ದರು. ನಲಿ – ಕಲಿ ತರಗತಿ ಟೀಚರ್ ಮಕ್ಕಳು ಕೊಟ್ಟಿದ್ದ ಹಣಕ್ಕೆ ಮತ್ತಷ್ಟು ಸೇರಿಸಿ ದೊಡ್ಡ ಕೇಕ್ ತಂದು ಎಲ್ಲ ಶಿಕ್ಷಕರನ್ನು ಕರೆದು ಮಕ್ಕಳ ಜೊತೆ ಸೇರಿ ಕೇಕ್ ಕಟ್ ಮಾಡಿ ಹೊಸ ವರ್ಷವನ್ನು ಸ್ವಾಗತಿಸಿದರು. ನಂತರ ಮಕ್ಕಳ ಕೆಲಸಕ್ಕೆ ಎಲ್ಲರೂ ಮೆಚ್ಚುಗೆ ನೀಡಿದರು. ನಂತರ ಅ ತರಗತಿ ಶಿಕ್ಷಕಿ ಐಶ್ವರ್ಯ ಟೀಚರ್ ಗೆ ಸಾವಿರ ಥ್ಯಾಂಕ್ಸ್ ಹೇಳಿ ಎಂದಾಗ ಮಕ್ಕಳು ಟೀಚರ್ ಗೆ ಸಾವಿರ ಕೋಟಿ ಧನ್ಯವಾದ ಹೇಳಬೇಕು ಎಂದು ಹೇಳಿದಾಗ ನಂಗೆ ತುಂಬಾ ಸಂತೋಷವಾಯಿತು. ಅಷ್ಟು ಸಲ ನಂಗೆ ಥ್ಯಾಂಕ್ಸ್ ಹೇಳಿದರು ಅಂತ ಅಲ್ಲ ನಮ್ಮ ಮಕ್ಕಳಿಗೆ ಸಾವಿರಗಿಂತ ಕೋಟಿ ಜಾಸ್ತಿ ಬೆಲೆ ಅಂತ ಗೊತ್ತಿದ್ದಕ್ಕೆ........

**ಅನಿಸಿಕೆ:::**

ನಾನು ಇಲ್ಲಿ ನಮ್ಮನ್ನು ಸ್ವಾಗತಿಸಿ ದ, ಪ್ರತಿಯೊಂದು ಹಂತದಲ್ಲಿ ಜೊತೆಯಾಗಿ ಸಹಕರಿಸಿದ , ಹೇಗೆ ಇಲ್ಲಿ ಇರೋದು ಎಂಬ ಪ್ರಶ್ನೆಗೆ ಉತ್ತರವಾಗಿ 3 ತಿಂಗಳು ಆರಾಮ ಆಗಿ ಇರುವಂತೆ ಮಾಡಿದ ಎಲ್ಲರಿಗೂ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಮೇಲೆ ವಿವರಿಸಿರುವ ಎರಡು ಸಂದರ್ಭಗಳಲ್ಲಿ ನನ್ನ ಕೆಲಸ ಶೂನ್ಯ. ಈ ವರ್ಷದ ರೆಸೊಲ್ಯೂಶನ್ **ಶೂನ್ಯದಿಂದ ಮಕ್ಕಳ ಅಭಿವೃದ್ಧಿ ಸಾಧ್ಯವಾಗುವಷ್ಟು ಕೆಲಸದ ಕಡೆಗೆ ಫೌಂಡೇಷನ್ ಜತೆ ಪಯಣ,,,,,,,,,**

# ಭವ್ಯ ಪರಂಪರೆಯ ಭಾರತ -

**ಭಾರತಿ ತಿವಾರಿ ಸಿಂಧನೂರು**

ದೇಶವೊಂದೆ ಭಾಷೆ ಹಲವು, ವೈವಿಧ್ಯತೆಯಲ್ಲಿ ಏಕತೆ
ಎಲ್ಲ ಧರ್ಮಗಳಿಂದ ಕೂಡಿಹುದಿಲ್ಲಿ ಸೌಹಾರ್ದತೆ
ಎಂದೆಂದಿಗೂ ಇರಲಿ ಈ ಭಾವೈಕ್ಯತೆ
ವಿಶ್ವಶಾಂತಿಯಲ್ಲೆ ಬದುಕಿನ ಸಾರ್ಥಕತೆ

ಬುದ್ಧ ಬಸವ ಅಂಬೇಡ್ಕರ್ ವಿವೇಕಾನಂದರ ನಾಡಿದು
ಶಾಂತಿ, ಕಾಯಕ, ಸೌಹಾರ್ದತೆ ತಿಳಿಸಿಕೊಟ್ಟ ಬೀಡಿದು
ಅಹಿಂಸಾ ತತ್ವವನ್ನು ಸಾರುವ ದೇವಾಲಯವಿದು.
ನಾನು ಭಾರತೀಯಳು ನನ್ನ ಕನಸಿನ ಕೂಸಿದು

ಜಾತಿ ಧರ್ಮದ ಭೇದ ಬಿಡೋಣ
ಮಾನವೀಯತೆಯ ಎತ್ತಿ ಹಿಡಿಯೋಣ
ವಿಶ್ವಪಥ ಮನುಜಮತವ ಪರಿಸೋಣ
ವಿಶ್ವಶಾಂತಿಯ ಹರಿಕಾರರಾಗಿ, ಜಗಕೆಲ್ಲಾ ಸಾರೋಣ...

ಸನಾತನದಿಂದಲೂ ಹೆಸರುಳಿಸಿಕೊಂಡು ಬಂದಿಹುದು
ಮಹಾನ್ ಪುರುಷರ, ಶೂರ ಮಹಿಳೆಯರ ನಾಡಿದು
ಭವ್ಯ ಪರಂಪರೆಯನ್ನು ಪಾಲಿಸುತ್ತಿರುವ ಸ್ವರ್ಗವಿದು
ಧಕ್ಕೆ ಬರದ ಹಾಗೆ ನೋಡಿಕೊಳ್ಳುವುದು ನಮ್ಮೆಲ್ಲರ ಕರ್ತವ್ಯವಿದು.........

**ಶಂಕರಾನಂದ ಹೆಚ್.ಬಿ. ಹಿರೀಮರಳಿ**



## <u>ಅಮ್ಮನೇ ಮಗಳಾಗಿ ಬಂದಳು</u>

ತನ್ನ ತಾಯಿಯನ್ನು ಕಳೆದುಕೊಂಡು ಅವಳ ನೆನಪಿನಲ್ಲಿ ಕೊರಗುವ ಹೆಣ್ಣುಮಗಳ ಮಡಿಲಲ್ಲಿ, ಹೆಣ್ಣು ಮಗುವೊಂದು ಜನಿಸಿ, ಆ ಮಗುವಲ್ಲಿ ತನ್ನ ತಾಯಿಯನ್ನು ಕಾಣುವ ಅಪರೂಪದ ಕವನ.

ನವಮಾಸಗಳ ವನವಾಸದಲಿ
ಈ ದೇಹವ ಧರೆಗಿಳಿಸಿ
ಜೀವವ ತಂದಿರುವೆ ಅಮ್ಮ..

ಸಾಲು-ಸಾಲು ನೋವ ನಡುವೆ
ಪ್ರೀತಿಧಾರೆ ಸುಧೆಯ ಎರೆದು
ನೀತಿಯಾಗೆ ಬದುಕಿ ಉಳಿದ ಅಮ್ಮ..

ಗೆಳತಿಯಾಗಿ ಬಂಧುವಾಗಿ
ನಿತ್ಯ ನನ್ನ ಸಿಂಧುವಾಗಿ
ಕೈಯ ಹಿಡಿದು ಪೊರೆದ ದೈವ ಅಮ್ಮ..

ಈ ಉಸಿರಿನಲಿ ಬೆರೆತು ಹೋಗಿ
ಈ ದೇಹಕೆ ಆತ್ಮವಾಗಿ
ಒಂದುಗೂಡಿ ಬೆಳೆದ ಬದುಕು ಅಮ್ಮ..

ಒಂಟಿಯಾಗಿ ಬಿಟ್ಟು ನೀನು
ಒಮ್ಮೆಲೆ ತೊರೆದು ಹೋಗಿ
ಮರೆಯದ ಗಾಯವ ಬರೆದೆ ಅಮ್ಮ..

ನೀನೀರದೇ ನಾ ಇರಲೇ
ನೀಗದ ನೋವೇ ನನಗುಳಿದು
ನರಳಿದೆ ನರಕದಲಿ ನೀನಿಲ್ಲದೇ ಅಮ್ಮ..

ನನ್ನ ಹರಕೆಯ ಫಲವೋ
ನಿನ್ನ ಪ್ರೀತಿಯ ವರವೋ
ಮಗಳಾಗಿ ಬಂದು ಮಡಿಲ ತುಂಬಿದೆ ಅಮ್ಮ..

ನೀ ಬೆಳೆಸಿದ ಈ ದೇಹವು
ನಿನ್ನ ಬೆಳೆಸುವ ಸಂಭ್ರಮಕೆ
ಪದವಿಲ್ಲ ಕೊನೆಯಿಲ್ಲ ಈ ಮಮತೆಗೆ ಅಮ್ಮ..

ನಿನ್ನ ಮಡಿಲಲ್ಲಿ ನಾನಂದು
ನನ್ನ ಮಡಿಲಲ್ಲಿ ನೀನಿಂದು
ದೇವರೇ ತಂದ ಅಪರೂಪದ ಬಂಧ ಅಮ್ಮ..

ನೀನೀರದೇ ನಾನಿಲ್ಲ
ನನ್ನೆದೆಯ ಗೂಡಲ್ಲಿ
ನೀನೇ ಸಾಕು ಎಂದಿಗೂ ಎಂದೆಂದಿಗೂ ಅಮ್ಮ..

*************************

–

# ನಗುವಿನ ಹಣತೆ

**Veeresh D C ಬೀದರ್**



ಇದು ಹಕ್ಕಿಗಳ ಗೂಡು
ಚಿಲಿಪಿಲಿ ಹಾಡುವ,
ಮರಿ ಹಕ್ಕಿಗಳ ಬೀಡು
ಹಾಡುತಿವೆ ನಲಿಕಲಿ ಹಾಡು

ಹೊಳೆವ ಕಣ್ಗಳಲ್ಲಿ,
ನಾಳೆಯ ಬದುಕಿದೆ
ಮುಗಿವ ಕೈಗಳ ಹಿಂದೆ
ಮುಗ್ಧ ಮನಸ್ಸಿದೆ

ಅಗಣಿತ ಕನಸುಗಳಿಗೆ
ಬುನಾದಿ ಗಣಿತ
ತೋದಲು ಭಾಷೆಗೆ
ರಸವತ್ತಾದ ಕಾಗುಣಿತ

ಕನ್ನಡ ಮಣ್ಣಿನ
ನೈಜ ಪ್ರತಿಭೆ
ದೇಶ ಬೆಳಗುವ
ಉಜ್ವಲ ಪ್ರಭೆ

ಶಾಲೆಯ ಅಂಗಳದಲ್ಲಿ
ಮಕ್ಕಳ ನಗುವಿನ ಹಣತೆ
ತಾರೆಗಳ ತೋಟದಲ್ಲಿ ಅರಳಿದ
ಎಂದೂ ಬಾಡದ ಕವಿತೆ

# ಸಂಭ್ರಮವನ್ನು ಹುಡುಕಲು ಹೊರಟಾಗ

**ಚೆಟ್ಟಸ್ವಾಮಿಗೌಡ. ಬಿ. Manvi**

ಬೆಳಗಿನ ಜಾವ 4:30 ಕ್ಕೆ ಸರಿಯಾಗಿ ಹಬ್ಬದ ದಿನವೂ ಮೇಲೇಳಲ್ಲ , ನೀವು ಮನುಷ್ಯರೋ? ದನವ್ರೋ? ನಾನು ಮನೆ ತಾರಿಸಬೇಕು ಎಂದು ಒಂದು ಬೋಸಿ ಸಗಣಿಯನ್ನು ಕಲಸಿಕೊಂಡು  ಗೊಣ ಗೊಣ ಎಂಬ ಶಬ್ದ ಮಾಡುತ್ತಿದ್ದ ಅಮ್ಮ ಒಂದೆಡೆಯಾದರೆ, ಮಗ ಮೇಲೇಳು ಇವತ್ತು ಹಬ್ಬ ಮನೆ ತಾರಿಸಲಿ ಎನ್ನುತ್ತಿದ್ದವರು ಅಜ್ಜಿ. ಕಷ್ಟದಲ್ಲಿ ಮೇಲೆದ್ದ ತಕ್ಷಣ ಮೊದಲು ದೇವರ ಪೋಟ ನೋಡಿ ಕೈ ಮುಗಿ ಸುಮ್ಮನೆ ಆಚೆ ಹೋಗಬೇಡ ಎನ್ನುತ್ತಿದ್ದವರು ಅಪ್ಪ, ತಕ್ಷಣ ಬಾ ಇಲ್ಲಿ ಎಂದು ನನ್ನನ್ನು ಕರೆದು ತನ್ನ ಕಂಬಳಿಯೊಳಗೆ ಕೂರಿಸಿಕೊಳ್ಳುತ್ತಿದ್ದವರು ತಾತ.

ಈ ಮೇಲಿನ ಕ್ಷಣಗಳನ್ನು ನೆನಪಿಸಿಕೊಂಡಾಗ ನಾನು ಚಿಕ್ಕವಾನಗೇ ಇರಬೇಕಿತ್ತು ಎಂಬ ಭಾವನೆ ಸದಾ ನನ್ನನ್ನು ಕಾಡುತ್ತಲೇ ಇರುತ್ತದೆ. ಏಕೆಂದರೆ ಎದ್ದ ತಕ್ಷಣ ಅಪ್ಪ ಒಂದು ಜೊತೆ ಹಸುಗಳನ್ನು ಹಿಡಿದುಕೊಂಡು ಕೆರೆಗೆ ಮೈ ತೊಳೆಯಲು ಹೋಗುವಾಗ ನಾನೂ ಕೂಡಾ ಅವರ ಜೊತೆ ಹೋಗುವುದೆಂದರೆ ಎಲ್ಲಿಲ್ಲದ ಸಂಭ್ರಮ ಅಲ್ಲಿ ಊರಿನ ಜನರೆಲ್ಲರೂ ಇರುವುದನ್ನು ನೋಡಿ ಖುಷಿ ಪಡುತ್ತಿದ್ದೆ.

ನಂತರ ಮನೆಗೆ ಬರುವಷ್ಟರಲ್ಲಿ ಅಮ್ಮ ಬೇಯಿಸಿದ ಮೊಸರನ್ನ ನೀಡುತ್ತಿದ್ದರು. ಆದರೆ ಆ ದಿನ ಮನೆಯನ್ನೇ ಸೇರುತ್ತಿರಲಿಲ್ಲ ಸ್ನೇಯಿತರೊಡನೆ ಮನೆಯ ಹೊರಗೇ ಹೆಚ್ಚು ಸಮಯಕಳಿಯುತ್ತಿದ್ದದ್ದು ಹೆಚ್ಚು, ಮದ್ಯಾಹ್ನದ ಅವದಿಯಲ್ಲಿ ಮತ್ತೆ ಅಪ್ಪನ ಜೊತೆ ಕಣಕ್ಕೆ ಹೋಗುತ್ತಿದ್ದೆವು.ಅಲ್ಲಿ ರಾಗಿ, ಭತ್ತದ ಮೆದೆಗಳು ಇರುತ್ತಿದ್ದವು, ಜೊತೆಗೆ ಹುಚ್ಚಳ್ಳು, ತೊಗರಿಯ ರಾಶಿಯನ್ನು ನೋಡಿ ಮನಸ್ಸಿಗೆ ಏನೋ ಆನಂದ. ಅಪ್ಪ ಆ ರಾಶಿಗೆಲ್ಲ ಮಾವಿನ ಸೊಪ್ಪು ಹಾಗೂ ಲಕ್ಕಿ ಸೊಪ್ಪನ್ನು ಇಡುತ್ತಿದ್ದರು. ನಂತರ ಅವುಗಳಿಗೆ ಪೂಜೆ ಮಾಡಿ ಕಣದಲ್ಲೆಲ್ಲಾ ಆಟ ಆಡಿ ಬರುತ್ತಿದ್ದೆವು.

ಇನ್ನು ಸಂಜೆಯಾಗುತ್ತಿದ್ದಂತೆ ಹಸುಗಳನ್ನು ಊರಿನ ಜನರೆಲ್ಲ ಸಿಂಗಾರ ಮಾಡುತ್ತಿರುವುದನ್ನು ನೋಡಲು ಊರೆಲ್ಲಾ ಸುತ್ತಾಡಿ ನಂತರ ಅಪ್ಪ ನಮ್ಮನ್ನು ಕಳ್ಳಿ ಹಾಲು ತರಲು ಅರಣ್ಯಕ್ಕೆ ಕಳಿಸುತ್ತಿದ್ದರು. ಅದನ್ನು ತಂದು ಗುನ್ನಾಪಟ್ಟೆ (ಗ್ಲಿಟ್ಟರ್ ಪೇಪರ್)ನ್ನು ದನದ ಕೊಂಬಿಗೆ ಅಂಟಿಸಿ ಹಸುವನ್ನು ಶೃಂಗಾರ ಮಾಡಿ ಊರಿನ ಜನರೆಲ್ಲಾ ಒಂದೆಡೆ ಹಸುಗಳನ್ನು ಸೇರಿಸಿ ಎರಡು ಕಡೆ ರಸ್ತೆಯಲ್ಲಿ ಬೆಂಕಿ ಹಾಕಿ ದನಗಳನ್ನು ಕಿಚಾಯಿಸುತ್ತಿದ್ದದ್ದು ಕಣ್ಣಿಗೆ ಕಟ್ಟಿದಂತಿದೆ. ಇದು ನಾವು ಪಟ್ಟ ಖುಷಿಯಾದರೆ, ರೈತನ ಪಾಲಿಗೆ ಧಾನ್ಯಲಕ್ಷ್ಮಿ ಮನೆಗೆ ಬರುವ ಸಂಭ್ರಮವಾಗಿರುತ್ತದೆ ಅದೇ ಮಕರ ಸಂಕ್ರಾಂತಿ. ಸೂರ್ಯ ತನ್ನ ಪತವನ್ನು ಬದಲಿಸುವ ದಿನವನ್ನೇ ಮಕರ ಸಂಕ್ರಾಂತಿಯಾಗಿ ಆಚರಿಸುತ್ತಾರೆ. ಇದು ಕರ್ನಾಟಕ, ತಮಿಳುನಾಡು ಮತ್ತು ಆಂಧ್ರದಲ್ಲಿ ವಿಶೇಷವಾಗಿ ಆಚರಿಸುವ ಹಬ್ಬವಾಗಿದೆ. ಅದರಲ್ಲೂ ಹೆಣ್ಣು ಮಕ್ಕಳು ಅತಿ ಹೆಚ್ಚು ಎಳ್ಳು ಬೆಲ್ಲ ಹಂಚಿ ಸಂಭ್ರಮಿಸುವ ದಿನವೇ ಸಂಕ್ರಾಂತಿ.

ಆದರೆ ಈ ಹಳ್ಳಿಯ ಸೊಗಡು ಇತ್ತೀಚಿನ ದಿನಗಳಲ್ಲಿ ಕಡಿಮೆಯಾಗುತ್ತಿರುವುದು ವಿಷಾದನೀಯ. ಎಲ್ಲಿಯ ತನಕ ನಮಗೆ ತಂದೆ, ತಾಯಿ, ಅಜ್ಜ , ಅಜ್ಜಿ, ಅಣ್ಣ, ತಂಗಿ, ತಮ್ಮಂದಿರ ಸಂಬಂಧದ ಬೆಲೆ ತಿಳಿಯುವುದಿಲ್ಲವೋ ಅಥವಾ ತಿಳಿಸುವುದಿಲ್ಲವೋ ಅಲ್ಲಿಯವರೆಗೂ ಸಂಭ್ರಮವೆನ್ನುವುದು ಮರಿಚಿಕೆಯಾಗಿ ಉಳಿಯುವುದರಲ್ಲಿ ಸಂಶಯವೇ ಇಲ್ಲ. ಏನೇ ಆಗಲಿ ಈ ಭಾರಿಯ ಸಂಕ್ರಾಂತಿಯು ಎಲ್ಲರ ಮೊಗದಲ್ಲಿ ಸಂತೋಷವನ್ನುಂಟು ಮಾಡಲಿ ಎಂಬುದೇ ನನ್ನ ಆಶಯ.

# ಮಕ್ಕಳ ಬಾಲ್ಯದಲ್ಲಿ ನಾವೇ ಮಾಡುವ ತೊಡಕುಗಳು

– ಮಣಿಕಂಠ. ಆರ್. ಬಳ್ಳಾರಿ ಜಿಲ್ಲಾ ಸಂಸ್ಥೆ

90 ರ ದಶಕದಲ್ಲಿ ಜನಿಸಿದವರ ಬಾಲ್ಯವು ಬಹಳ ವಿಶೇಷವಾಗಿತ್ತು.ಆಗಿನ ಜೀವನ ಶೈಲಿ,ಕುಟುಂಬಗಳ ಅನುಬಂಧ ಸ್ನೇಹಿತರ ಆಟಾಟೋಪ ಇವೆಲ್ಲವನ್ನು ನಾವು ನೆನೆಸಿಕೊಂಡರೆ ಇಂದಿನ ಪೀಳಿಗೆಗೆ ನಾವು ಅನುಭವಿಸಿದ್ದ ಸುಮಧುರ ಕ್ಷಣಗಳನ್ನು ಕೊಡಲು ಮರತಿದ್ದೇವೆ, ಕಾರಣ ನಮ್ಮ ಮಕ್ಕಳಿನ ಮೇಲಿರುವ ಅತಿಯಾದ ಕಾಳಜಿ ಮತ್ತು ತಂತ್ರಜ್ಞಾನ ಮಕ್ಕಳ ಬಾಲ್ಯವನ್ನು ಕಸಿದುಕೊಳ್ಳುವಂತೆ ಮಾಡಿದೆ. ಇತ್ತೀಚೆಗೆ ಹೆಚ್ಚು ಮಕ್ಕಳು ಮೊಬೈಲ್‌ಗೆ ದಾಸರಾಗಿರುವುದು ನಾವು ನೋಡಿದ್ದೇವೆ .ಇದಕ್ಕೆ ಕಾರಣ ಮೊದಲು ಮಕ್ಕಳಿಗೆ ಊಟ ಮಾಡಿಸುವಾಗ ಚಂದಮಾಮ ಮತ್ತು ಪ್ರಕೃತಿಯಲ್ಲಿರುವ ವಸ್ತುಗಳನ್ನು ನೋಡಿ ಮಕ್ಕಳಿಗೆ ಊಟ ಮಾಡಿಸುತ್ತಿದ್ದರು ಆದರೆ ಈಗ ಮೊಬೈಲ್ ಕೊಟ್ಟು ಮಕ್ಕಳಿಗೆ ಊಟ ಮಾಡಿಸುತ್ತಿದ್ದೇವೆ .ಇದರ ಅತಿಯಾದ ಬಳಕೆಯಿಂದ ಮಗುವಿಗೆ ಮಾನಸಿಕ ಖಿನ್ನತೆ, ದೃಷ್ಟಿದೋಷ ಹೀಗೆ ಹಲವಾರು ತೊಂದರೆಗಳು ಬಾಲ್ಯದಲ್ಲಿಯೇ ಉದ್ಭವಿಸುತ್ತದೆ. ಇದನ್ನು ಪೋಷಕರು ಮತ್ತು ಗರ್ಭಿಣಿಯರಿಗೆ ಪ್ರಾಥಮಿಕವಾಗಿ ಅಂಗನವಾಡಿ ಕೇಂದ್ರದಲ್ಲಿ ಇದರ ಬಗ್ಗೆ ಅರಿವು ಮೂಡಿಸಿ ಇದರ ಸಾಧಕ ಮತ್ತು ಭಾದಕಗಳನ್ನು ಸಮುದಾಯಕ್ಕೆ ಅರಿವು ಮೂಡಿಸಿ, ರಚನಾತ್ಮಕ ಆಟಗಳನ್ನು ಅವರಿಗೆ ಪ್ರಾರಂಭಿಕ ಹಂತದಲ್ಲೇ ತಿಳಿಸಿದರೆ ಮಕ್ಕಳ ಪ್ರಾರಂಭಿಕ ಬಾಲ್ಯ ಉತ್ತಮವಾಗಿರುತ್ತದೆ.

ಮತ್ತೊಂದು ಆಂಶವೇನೆಂದರೆ ಮಕ್ಕಳನ್ನು ಕುಟುಂಬದ ಜೊತೆ ಬೆರೆಯಲು ಬಿಡದೆ ಅವರ ವಿಕಾಸ ಮತ್ತ ಬೆಳವಣಿಗೆ ನಾವೇ ತೊಂದರೆಯನ್ನುಂಟು ಮಾಡುತ್ತಿದ್ದೇವೆ. ಮೊದಲು ಅವಿಭಕ್ತ ಕುಟುಂಬದಲ್ಲಿ ನಾವು ಬಾಲ್ಯವನ್ನು ಸ್ವರ್ಗದಂತೆ ಅನುಭವಿಸಿದ್ದೇವೆ. ಆದರೆ ಈಗಿನ ಕೆಲವು ಮಕ್ಕಳ ಬಾಲ್ಯವು ವಿಭಕ್ತಕುಟುಂಬದಲ್ಲಿ ಬಹಳ ಸೋಚನೀಯ ಸ್ಥಿತಿ ತಲುಪುವಂತೆ ಮಾಡಿದೆ. ನಮ್ಮ ಅತಿಯಾಸೆ ಮತ್ತು ಅರಿಷಡ್ವರ್ಗಗಳ ಕಾರಣದಿಂದ ವಿಭಕ್ತ ಕುಟುಂಬ ಮಾಡಿ ಅವಿಭಕ್ತ ಕುಟುಂಬದಲ್ಲಿ ದೊರೆಯಬೇಕಾದ ಮೌಲ್ಯಗಳು ಮಕ್ಕಳಿಗೆ ತಲುಪದಂತೆ ಮಾಡಿದೆ. ಇದರಿಂದ ಮಕ್ಕಳ ವಿಕಾಸ ಮತ್ತು ಬೆಳವಣಿಗೆಯು ಯಂತ್ರಗಳ ಬಾಳಿನಂತೆ ಮಾರ್ಪಾಡಾಗುತ್ತಿದೆ. ಇದು ಮಕ್ಕಳ ಬಾಲ್ಯದಲ್ಲಿ ಮಾನಸಿಕ ವ್ಯವಸ್ಥೆಗೆ ಅಡಚಣೆಯುಂಟು ಮಾಡುತ್ತದೆ. ಹಾಗಾಗಿ ನಾವು ಅತಿ ಹೆಚ್ಚು ನಮ್ಮ ಮಕ್ಕಳಿಗೆ ಕುಟುಂಬದ ಪರಿಚಯ ಮತ್ತು ಅವರ ಜೊತೆ ಬೆರೆಯಲು ಬಿಡಬೇಕು.

ಹೆಚ್ಚು ಪೋಷಕರು ಮಕ್ಕಳಿಗೆ ಸಮಯವನ್ನು ನೀಡದಿರುವುದು ಮಕ್ಕಳ ಬೆಳವಣಿಗೆಗೆ ಬಹಳ ತೊಂದರೆಯನ್ನುಂಟು ಮಾಡುತ್ತದೆ. ಪೋಷಕರು ತಮ್ಮ ತಮ್ಮ ಕೆಲಸದ ನಡುವೆ ಬಿಡುವು ಮಾಡಿಕೊಂಡು ಮಕ್ಕಳಿಗೆ ಸಮಯ ಕೊಡುತ್ತ ಅವರ ಬೆಳವಣಿಗೆ ಮತ್ತು ವಿಕಾಸ ಯಾವ ರೀತಿ ಇದೆ ಎಂಬುದನ್ನು ಅರಿತುಕೋಳ್ಳಬೇಕು ಮತ್ತು ಅಂಗನವಾಡಿ ಕೇಂದವ್ರು ಮಕ್ಕಳ ಕುಟುಂಬದ ಸಾಮಾಜಿಕ ಮತ್ತು ಆರ್ಥಿಕ ಹಿನ್ನಲೆಯನ್ನು ತಿಳಿದುಕೊಳ್ಳಬೇಕು.ಯಾವ ಮಗುವಿಗೆ ಪೋಷಕರಿಂದ ಬೆಂಬಲ ದೊರೆತಿಲ್ಲವೋ ಅಂತಹ ಮಕ್ಕಳಿಗೆ ಅಂಗನವಾಡಿ ಕೇಂದ್ರವು ಸೃಜನಶೀಲ ಕಲಿಕಾ ಕೇಂದ್ರವಾಗಬೇಕು.

## ಭಾರತದ ಪ್ರಥಮ ಮಹಿಳಾ ಶಿಕ್ಷಕಿ ಸಾವಿತ್ರಿಬಾಯಿ ಫುಲೆ

(ಸಾವಿತ್ರಿಬಾಯಿ ಫುಲೆ ಅವರ ಜನ್ಮದಿನದ ಅಂಗವಾಗಿ)

**ಕೃಷ್ಣಗೌಡ ಲಿಂಗಸುಗೂರು.**

ಭಾರತದ ಚರಿತ್ರೆಯು ಕೇವಲ ಅಕ್ಷರಗಳ ತರ್ಕಗಳ ಮೂಲಕ ಕಟ್ಟಲ್ಪಟ್ಟ ಪದಪುಂಜಗಳಾಗಿರದೆ ನಿಜವಾದ ಚರಿತ್ರೆಯು ಜನರ ಚಲನಶೀಲ ಬದುಕಿನ ಭಾಗವಾಗಿ ಪೀಳಿಗೆಯಿಂದ ಪೀಳಿಗೆಗೆ ಹಾಡಾಗಿ ಕಥೆಯಾಗಿ ಸಾಗುತ್ತದೆ ಎಂಬುದನ್ನು ಸಾವಿತ್ರಿಬಾಯಿ ಫುಲೆಯವರ ವಿಷಯದಲ್ಲೂ ನಿರೂಪಿಸಲ್ಪಟ್ಟಿದೆ. ಭಾರತದ ಮೊದಲ ಮಹಿಳಾ ಶಿಕ್ಷಕಿ ಎಂಬ ಬಿರುದನ್ನು ಬ್ರಿಟಿಷರಿಂದ ಪಡೆದ ಮಾತೆ ಶ್ರೀಮತಿ ಸಾವಿತ್ರಿಬಾಯಿ ಫುಲೆ.

**"ಯತ್ರ ನಾರೆಸ್ತು ಪೂಜ್ಯಂತೆ ರಮಂತೆ ತತ್ರ ದೇವತಾ"** ಎಂಬ ಉಕ್ತಿಯಂತೆ ನಮ್ಮ ಭಾರತ ದೇಶದ ಸ್ತ್ರೀಯನ್ನು ದೇವತೆಗಳಿಗೆ ಹೋಲಿಸಲಾಗಿದೆ. ಒಂದು ಸಮಾಜ ಸುಸಜ್ಜಿತವಾಗಬೇಕಾದರೆ ಮಹಿಳೆಯರ ಪಾತ್ರ ದೊಡ್ಡದು ಮಹಿಳೆಯು ಎಲ್ಲ ಕ್ಷೇತ್ರಗಳಲ್ಲೂ ತನ್ನ ಸಾಧನೆಯನ್ನು ತೋರಿದ್ದಾಳೆ ಸ್ವಾತಂತ್ರ್ಯ ಪೂರ್ವದಲ್ಲಿ ಹೆಣ್ಣು ಮಕ್ಕಳಿಗೆ ಹಾಗೂ ಕೆಲವರ್ಗದ ಬಡ ಮಕ್ಕಳಿಗೆ ಶಿಕ್ಷಣ ನೀಡಬೇಕೆಂದು ಪಣ ತೊಟ್ಟ ಪ್ರಥಮ ಮಹಿಳೆ ಸಾವಿತ್ರಿಬಾಯಿ ಫುಲೆಯವರಾಗಿದ್ದಾರೆ. ಇವರ ಪತಿಯಾದ ಜ್ಯೋತಿಬಾಫುಲೆಯವರ ಸಹಕಾರ ಮತ್ತು ಪ್ರೇರಣೆಯಿಂದ ಶಿಕ್ಷಕ ವೃತ್ತಿಗೆ ಕಾಲಿಟ್ಟು ಹಲವಾರು ಮಹಿಳೆಯರಿಗೆ ದಾರಿದೀಪವಾಗಿದ್ದಾರೆ. ಇಂದು ಅವರ ಜನ್ಮದಿನ (03/01/1831) ಈ ದಿನವನ್ನು ಶಿಕ್ಷಕಿಯರ ದಿನವನ್ನಾಗಿ ಆಚರಿಸುವುದು ಹೆಮ್ಮೆಯ ಸಂಗತಿಯಾಗಿದೆ.

ಸಾವಿತ್ರಿಬಾಯಿ ಫುಲೆ ಯವರು ಶಿಕ್ಷಕಿಯಾಗಿ, ಸಂಚಾಲಕಿಯಾಗಿ, ಮುಖ್ಯೋಪಾಧ್ಯಾಯನಿಯಾಗಿ, ಸಾಮಾಜಿಕ ಮಹಿಳಾ ಹಕ್ಕುಗಳ ಹೋರಾಟಗಾರ್ತಿಯಾಗಿ ದನಿವರಿಯದ ಸತ್ಯಶೋಧಕಿ ಹಾಗೂ ಆಧುನಿಕ ಶಿಕ್ಷಣದ ತಾಯಿ ಸಾವಿತ್ರಿಬಾಯಿ ಅವರ ಜೀವನ ತಮ್ಮೆಲ್ಲರಿಗೂ ತಿಳಿದ ವಿಷಯವಾಗಿದೆ. ಸ್ವಾತಂತ್ರ್ಯ ಪೂರ್ವದ ಭಾರತದಲ್ಲಿ ಮಹಿಳೆಯರಿಗೆ ಯಾವುದೇ ರೀತಿಯ ಸ್ವಾತಂತ್ರ್ಯ & ಶಿಕ್ಷಣ ಕೈಗೆಟುಕದ ವಸ್ತುವಾಗಿತ್ತು. ಅಂತಹ ಸಂದರ್ಭದಲ್ಲಿ ಈ ಸಮಾಜದಲ್ಲಿನ ಮಹಿಳೆಯರ ಜೀವನದ ಬದಲಾವಣೆಗಾಗಿ ಅಕ್ಷರದ ಮೂಲಕ ಹೋರಾಟ ಮಾಡಿದ ಕೀರ್ತಿಯು ಸಾವಿತ್ರಿಬಾಯಿ ಫುಲೆ ಅವರಿಗೆ ಸಲ್ಲುತ್ತದೆ. ಸ್ವತಂತ್ರ ಪೂರ್ವದಲ್ಲಿ ಸಮಾಜದಲ್ಲಿ ಹಾಸು ಹೊಕ್ಕಾದ ಜಾತಿ ಪದ್ಧತಿ ಎಂಬುದು ಎಲ್ಲ ಸಮುದಾಯದ ಹೆಣ್ಣು ಮಕ್ಕಳ ಶಿಕ್ಷಣವನ್ನು ನಿರಾಕರಿಸುತ್ತಿತ್ತು ಅದರ ವಿರುದ್ಧ ಹೋರಾಟಕ್ಕೆ ನಿಂತ ಅಕ್ಷರದವ್ವ ಸಾವಿತ್ರಿಬಾಯಿ ಫುಲೆ **1848 ರಲ್ಲಿ ಪುಣೆಯ ನಾರಾಯಣಪೇಟೆಯ ಬಿಂದೆವಾಡದಲ್ಲಿ ದೇಶದ ಮೊದಲ ಬಾಲಕಿಯರ ಶಾಲೆ ಪ್ರಾರಂಭಿಸಿದರು.** ಸಾವಿತ್ರಿಬಾಯಿಯವರು ಶಾಲೆಗೆ ಹೋಗುವಾಗ ಅಲ್ಲಿನ ಜನರು ಇವರಿಗೆ ಸಗಣಿಯನ್ನು ಎರಚುತ್ತಿದ್ದರು ಮತ್ತು ಹೀನಾಯವಾಗಿ ಬೈಯುತ್ತಿದ್ದರು ಜೊತೆಗೆ ಸಮಾಜದ ದ್ರೋಹಿ

ಎಂಬ ಪಟ್ಟವನ್ನು ಕಟ್ಟಿದರು. ಇದಕ್ಕೆಲ್ಲ ಜಗ್ಗದ ಸಾವಿತ್ರಿಬಾಯಿಯು ತನ್ನ ಕಾರ್ಯವನ್ನು ಮುಂದುವರಿಸಿದರು ಆ ಕಾಲ ಘಟ್ಟದಲ್ಲಿ ಮಹಿಳೆಗೆ ಶಿಕ್ಷಣ ಏಕೆ ಬೇಕು? ಹೆಣ್ಣು ನಾಲ್ಕು ಗೋಡೆ ಮಧ್ಯೆ ಇರಬೇಕು ಎಂಬ ಕಲ್ಪನೆ ಇತ್ತು.

ಕ್ರಮೇಣ ಸಾವಿತ್ರಿಬಾಯಿಯವರು ಸ್ಥಾಪಿಸಿದ ಬಾಲಕಿಯರ ಶಾಲೆಯಲ್ಲಿ 1852 ರ ವೇಳೆಗೆ 500 ಮಕ್ಕಳು ಕಲಿಯಲು ಪ್ರಾರಂಭಿಸಿದರು ಅಷ್ಟೇ ಅಲ್ಲದೆ ಈ ಶಾಲೆಯಲ್ಲಿ ಸಣ್ಣ ವಯಸ್ಸಿನಲ್ಲಿ ಮದುವೆಯಾಗಿ ವಿಧವೆಯರಾದ ಹಾಗೂ ಅತ್ಯಾಚಾರಕ್ಕೆ ಒಳಗಾದ ಹೆಣ್ಣು ಮಕ್ಕಳಿಗೆ ಪುನರ್ವಸತಿ ಕೇಂದ್ರ ಸ್ಥಾಪಿಸಿ ಅವರಿಗೂ ಸಹ ಶಿಕ್ಷಣವನ್ನು ನೀಡಿದ ಕೀರ್ತಿ ಸಾವಿತ್ರಿಬಾಯಿ ಫುಲೆಯವರದ್ದಾಗಿದೆ. ಇಷ್ಟಕ್ಕೆ ಸುಮ್ಮನಾಗದ ಫುಲೆಯವರು ದಲಿತರಿಗೆ ಸ್ವತಹ ತಮ್ಮ ಮನೆಯ ಬಾವಿಯನ್ನ ಬಿಟ್ಟುಕೊಟ್ಟರು, ಕೂಲಿಕಾರರಿಗೆ ರಾತ್ರಿ ಶಾಲೆಗಳನ್ನ ಆರಂಭಿಸಿ ಜೊತೆಗೆ ಸಾಯಿಸುವುದಕ್ಕಾಗಿ ಶಿಷ್ಯವೇತನವನ್ನು ನೀಡುವ ಮೂಲಕ ಉದಾರತೆಯನ್ನು ಮೆರೆದರು. ಮಾತೆ ಸಾವಿತ್ರಿಬಾಯಿ ಫುಲೆ ಅವರು ಸಮಾಜದ ಅನಿಷ್ಟಪದ್ಧತಿಗಳಾದ ಬಾಲ್ಯ ವಿವಾಹ, ಸತಿ ಸಹ ಗಮನ ಪದ್ಧತಿ, ಕೇಶ ಮುಂಡನೆ ಮುಂತಾದ ಅನಿಷ್ಟ ಪದ್ದತಿಗಳ ವಿರುದ್ಧ ಹೋರಾಟ ಮಾಡಿ ಹಗಲಿರುಳು ಮಹಿಳೆಯರ ಶ್ರೇಯೋಭಿವೃದ್ಧಿಗಾಗಿ ಕಾರ್ಯನಿರ್ವಹಿಸಿ, ಮಹಿಳೆಯರಿಗಾಗಿ **ಅಬಲಾಶ್ರಮ** ಎಂಬ ಸಂಸ್ಥೆಯನ್ನ ಸ್ಥಾಪನೆ ಮಾಡಿದ ಕೀರ್ತಿ ಇವರಿಗೆ ಸಲ್ಲುತ್ತದೆ. ಹೀಗೆ ಫುಲೆಯವರು ಭಾರತದಲ್ಲಿ ಪ್ರಪ್ರಥಮ ಬಾರಿಗೆ ಹೆಣ್ಣು ಮಕ್ಕಳ ಶಿಕ್ಷಣಕ್ಕೆ ನಾಂದಿ ಹಾಡಿದರು. ಪ್ರಸ್ತುತ ಮಹಿಳೆಯರು ಎಲ್ಲ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸಲು ಫುಲೆಯವರ ಶ್ರಮವೇ ಕಾರಣವಾಗಿದೆ. ಇವರು ತಮ್ಮ ಜೀವಿತ ಅವಧಿಯಲ್ಲಿ **ಒಟ್ಟು 14 ಶಾಲೆಗಳನ್ನು** ಪ್ರಾರಂಭಿಸಿ ಮಹಿಳೆಯರ ಶಿಕ್ಷಣಕ್ಕೋಸ್ಕರ ಶ್ರಮಿಸಿದರು. ಈ ಸಾಧನೆಯನ್ನು ಪರಿಗಣಿಸಿ ಬ್ರಿಟಿಷ್ ಸರ್ಕಾರವು ಇವರಿಗೆ" **Indian first lady teacher"** ಎಂದು ಬಿರುದನ್ನ ನೀಡಿದರು. ಸ್ತ್ರೀಯರು ಕೂಡ ಪುರುಷರಂತೆ ಶಿಕ್ಷಣವನ್ನು ಪಡೆಯಬೇಕು ಎಂಬ ಮಹಾದಾಸೆಯಿಂದ ಕಷ್ಟ ಕಾರ್ಪಣ್ಯಗಳನ್ನು ಲೆಕ್ಕಿಸದೆ ಸ್ತ್ರೀ ಕುಲಕ್ಕೆ ಶೈಕ್ಷಣಿಕ ರಹಧಾರಿಯನ್ನ ತೋರಿದರು.

ಫುಲೆಯವರು ಕೇವಲ ಶಿಕ್ಷಕಿಯಾಗಿ ಅಷ್ಟೇ ಅಲ್ಲದೆ ಲೇಖಕಿಯಾಗಿಯೂ ಕಾರ್ಯನಿರ್ವಹಿಸಿ, ಹಲವು ಕವನ ಸಂಕಲನವನ್ನು ಬರೆದಿದ್ದಾರೆ ಅಷ್ಟೇ ಅಲ್ಲದೆ ಪ್ಲೇಗ್ ರೋಗಿಗಳ ಸೇವೆಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ಸಮಾಜ ಸೇವಕಿಯಾಗಿಯೂ ತಮ್ಮ ಪಾತ್ರವನ್ನು ನಿರ್ವಹಿಸಿದ್ದಾರೆ. ಇಂತಹ ಬಹುಮುಖ ಆದರ್ಶ ಮಹಿಳೆಯ ಪಾತ್ರವೂ ನಮ್ಮೆಲ್ಲರಿಗೂ ಸದಾ ಪ್ರೇರಣೆಯ ಮತ್ತು ಇಂತಹ ಮಹಾನ್ ಮಹಿಳೆಯ ಆದರ್ಶಪ್ರಾಯ ವಿಚಾರಗಳು ಸದಾ ನಮಗೆ ದಾರಿದೀಪವಾಗಿವೆ ಅಷ್ಟೇ ಅಲ್ಲದೆ ಅವರ ಜೀವನವು ನಮ್ಮ ಭಾರತೀಯ ಶಿಕ್ಷಕಿಯರಿಗೆ ಸಂದ ಗೌರವವಾಗಿದೆ. ಎಂಬುದು ನನ್ನ ಅಭಿಪ್ರಾಯ...

## ಹೊತ್ತು ಮೂಡುವ ಈ ಹೊತ್ತಿನಲಿ !!!

– ರಾಘವೇಂದ್ರ ಹೇರ್ಳೆ, ಬೆಂಗಳೂರು.

ಪೊಳ್ಳುಭ್ರಮೆಗಳ ಜಾಲದಿ ಕೊಡವಿಕೊಳುವೆ
ಅಹಮ್ಮಿನ ಹುತ್ತದಿ ಜಿಗಿದು ಹೊರಗೆ ಬರುವೆ
ಹಗಲುಗನಸಿನ ಜೇಡರಬಲೆಯ ಬಿಡಿಸಿಕೊಳುವೆ
ಹೊತ್ತು ಮೂಡುವ ಈ ಹೊತ್ತಿನಲಿ !

ತುಷಾರದ ಹನಿಗಳ ಸ್ಪರ್ಶದಿ ಪುಳಕಗೊಳುವೆ
ಪಾರಿಜಾತದ ಗಂಧಕೆ ಕರಗಿ ಹೋಗುವೆ
ತಂಬೆಲರ ಸೋಂಕಿಗೆ ಹ್ಲಾದಗೊಳುವೆ
ಹೊತ್ತು ಮೂಡುವ ಈ ಹೊತ್ತಿನಲಿ !

ಭಾವ ಬೆಸುಗೆಗಳ ಬಂಧಕೆ ತೆರೆದುಕೊಳುವೆ
ಜೀವಜಾಲದ ಜಗಕೆ ಆರತಿ ಹಿಡಿವೆ
ಹಬ್ಬಿದ ರಸಬಳ್ಳಿಗಳ ಬೇರಿಗೆ ಉದಕವನೆರೆವೆ
ಹೊತ್ತು ಮೂಡುವ ಈ ಹೊತ್ತಿನಲಿ !

ಕ್ಲೇಶಗಳ ಮಣಿಸಿ ಹೊಸಬದುಕ ಬರೆವೆ
ದ್ವೇಷಗಳ ಹುದುಗಿ ಸ್ನೇಹಹಸ್ತ ಚಾಚುವೆ
ಮತ್ಸರದ ಹೊದಿಕೆಯ ಕಳಚಿ ಶಾಪಮುಕ್ತನಾಗುವೆ
ಹೊತ್ತು ಮೂಡುವ ಈ ಹೊತ್ತಿನಲಿ !

ಒಲಿದ ರಾಗದಲಿ ಒಡಲುಗೀತೆಯ ಹಾಡುವೆ
ಮಿಡಿದ ಹೃದಯದಲಿ ಹೊಸತು ಅರ್ಥ ಕಟ್ಟುವೆ
ಲಯದ ಹದದಲಿ ಕುಣಿದು ಮನಸು ಮಲ್ಲಿಗೆಯಾಗುವೆ
ಹೊತ್ತು ಮೂಡುವ ಈ ಹೊತ್ತಿನಲಿ !

ಏಳುಬೀಳುಗಳ ರಮಿಸಿ ಸಮಬಲದಿ ಧರಿಸುವೆ
ಮಾನಾಪಮಾನಗಳ ಬರಸೆಳೆದು ಬಿಗಿದಪ್ಪುವೆ
ಕೂಡಿಕಳೆಯುವ ಹುಂಬ ಲೆಕ್ಕಾಚಾರದಿ ಪೇರಿಕೀಳುವೆ
ಹೊತ್ತು ಮೂಡುವ ಈ ಹೊತ್ತಿನಲಿ !

ಭಾರಹೆಜ್ಜೆಗಳ ಝಾಡಿಸಿ ಹಗುರ ಚಿಟ್ಟೆಯಾಗಿ ತೇಲುವೆ
ಮುಖದ ಮಡಿಕೆಗಳ ಸಡಿಲಿಸಿ ನಗುವಿನೊರತೆಯ ಚಿಮ್ಮುವೆ
ಒಳಗು ಹೊರಗಿನ ಪರದೆ ಸರಿಸಿ ಮಗುವಾಗುವೆ
ಹೊತ್ತು ಮೂಡುವ ಈ ಹೊತ್ತಿನಲಿ !

ಸಂಚು ಹೊಂಚುಗಳ ಬಿಡಿಸಿ ಒಲವಿನ ಸಿಂಚನವಾಗುವೆ
ಹಂಚಿ ತಿನ್ನುವ ಗುಣದಂಗಳದಿ ರಂಗೋಲಿಯಾಗುವೆ
ಬೆಳ್ಳಿಚುಕ್ಕಿಯ ತೆರದಿ ಹೊಸಬೆಳಕ ನಿರುಕಿಸುವೆ
ಹೊತ್ತು ಮೂಡುವ ಹೊತ್ತಿನಲಿ !

ಹಸುರು ಉಕ್ಕುವ ನೆಲದ ಸೊಬಗನು ಸೂರೆಗೊಳುವೆ
ನೇಗಿಲೊಡೆಯನ ಉದಯರಾಗಕೆ ಆದಿತಾಳವಾಗುವೆ
ನವಬಾಳಿನರುಣೋದಯಕೆ ಕವಿತೆಯಾಗಿ ಬರುವೆ
ಹೊತ್ತು ಮೂಡುವ ಈ ಹೊತ್ತಿನಲಿ !!!

## ಮಳೆ ಬಂದಾಗ ಇಳೆಯಾಗಬೇಕು!

ಶಿವಕುಮಾರ ಸಿ ಎಸ್, ರಾಮನಗರ

ಮಳೆ ಬಂದಾಗ ಇಳೆಯಾಗಬೇಕು
ಮೈ ಮನ ಧನ ಕಣ ಕಣ
ಮಣ್ಣ ಸವೆಸುವಂತೆ ಹನಿ ಹನಿಯೂ
ಒಳಗಿಳಿದು ಬಣ್ಣ ಕರಗಬೇಕು;
ಮಳೆ ಬಂದಾಗ ಸುಮ್ಮನೆ ಇಳೆಯಾಗಬೇಕು

ಮಳೆ ಬಂದಾಗ ನೆನೆಯಬೇಕು
ಎಲುಬು, ಚರ್ಮ, ಮುಡಿ ಮಸ್ತಿಷ್ಕ
ರುಧಿರ ಇಂಚಿಂಚನೂ ಕೊಂದ
ಭಾವಗಳೆಲ್ಲವ ಮತ್ತೆ ಕರೆದು
ಹಬ್ಬದ ತೋರಣ ಮಾಡಿ
ಹೊಸ ಸಂಕ್ರಾಂತಿ ಆಚರಿಸಬೇಕು
ಈ ಬಾರಿಯ ಮಳೆಗೆ
ನಾ ನಿಚ್ಚಳ ಇಳೆಯಾಗಬೇಕು

ಮಳೆ ಬಂದಾಗ ನೆನೆಯಬೇಕು
ನೆನೆದು ನೆನಪುಗಳ ಚಿತ್ರ ಮಾಡಿ
ಹನಿಹನಿಗೂ ಪತ್ರ ಬರೆದು
ನಾದ ಒಳಗಿನ ನಿನಾದ
ಕೋಟಿ ಬಿಂದುಗಳ ರಮಿಸಿ
ನಿನ್ನನೂ ಅದರೊಳಗೆ ಸೇರಿಸಿ
ಪ್ರೀತಿಗೆ ಪ್ರೀತಿಯ ಹಚ್ಚಬೇಕು
ಈ ಬಾರಿ ಇಳೆಗೆ
ನೀ ಮಳೆಯಾಗಬೇಕು.

ಮಳೆ ಬಂದಾಗ ‘ಕಾಯ’ಬೇಕು
ಈ ಪ್ರೀತಿಗೆ ಆ ಪ್ರೀತಿಯೊಂದು ಸಿಕ್ಕು
ಸೂರಾಗಬೇಕು
ಆ ಪ್ರೀತಿಗೆ ಈ ಪ್ರೀತಿಯೂ ನಕ್ಕು
ನೂರಾಗಬೇಕು
ಈ ಬಾರಿಯ ಮಳೆ ನೆಪವಾಗಬೇಕು
ಮರಳಿ ಒಲವಾಗಬೇಕು!


**Artwork by Govt Urdu Higher primary School students Madhbhavi Tq Dist Vijayapura**




date



مئی
جون
اپریل
جولائی
مارچ
اگست
نومبر
فروری
ستمبر
دِسمبر
جنوری
اکتوبر
پیر
منگل
بدھ
جمعرات
جمعہ
سنیچر
اتوار





مساوی اعداد
بڑھتی ترتیب
گھٹتی ترتیب


چڑیا
طوطا
کوئل
کوا

**Drawing By Md Ismail APF Vijayapur**



# (ಬೇಸಿಗೆ ಅರಮನೆ) at Kumtgi Vijayapura

**Photos by Mohammed Ismail Vijayapura DI**







Peri



*“Thanks a lot  for reading”.*

*“February 2023  Bayalu Edition Responsibility is by Ramanagar District Institute. We wish them all the best in advance”.*